# ಶಿವಾನುಭವ · ಸೃಷ್ಟಿಯ ವಚನಗಳು

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಅಂವೇ: ಗುರು
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦
ನಾಗನೂರ ಶ್ರೀ ರುದ್ರಾಕ್ಷಿಮಠ

820
R440

1941

ಶಿವಾನುಭವ ಗ್ರಂಥಮಾಲಾ ನಂ. ೫೬

# ಶಿವಾನುಭವ ಸೃಷ್ಟಿಯ ವಚನಗಳು.


ಸಂಪಾದಕರು

ರಾ|| ಬ|| ಫ. ಗು. ಹಳಕಟ್ಟಿ

ಬಿ. ಏ. ಎಲ್. ಎಲ್. ಬಿ.

ವಿಜಾಪುರ



ಕ್ರಮಾಂಕ

ಶಿವಬಸವ ನಗರ

ಬೆಳಗಾವಿ ೧೦



೧೯೪೧

ಬೆಲೆ:- ೦-೬-೦



820

4440

2440

ಶಿವಾನುಭವ ಗ್ರಂಥಮಾಲಾ ನಂ. ೫೬

# ಶಿವಾನುಭವ ಸೃಷ್ಟಿಯ ವಚನಗಳು.

ಸಂಪಾದಕರು.

ರಾ॥ ಬ॥ ಫ. ಗು. ಹಳಕಟ್ಟಿ,

ಬಿ. ಎ. ಎಲ್. ಎಲ್. ಬಿ.

82

2440

ವಿಜಾಪುರ

೧೯೪೧

2440

# ಪ್ರಸ್ತಾವನೆ.

ಈ ಗ್ರಂಥದಲ್ಲಿ ಮುಕ್ತ್ಯಂಗನಾ ಕಂಠಮಾಲೆ ಮತ್ತು ಜ್ಯೋತಿರ್ಮಯ ಶಾಂಭವೀ ದೀಕ್ಷೆ ಎಂಬೆರಡು ವಚನಗ್ರಂಥಗಳು ಅಡಕವಾಗಿರುತ್ತವೆ. ಇವುಗಳಲ್ಲಿ ೧ನೆಯ ಗ್ರಂಥದಲ್ಲಿ ಸ್ವತಂತ್ರ ಸಿದ್ಧಲಿಂಗೇಶ್ವರನ ೨೧ ವಚನಗಳಿದ್ದು ಇವುಗಳಿಗೆ ಚನ್ನದೇವನೆಂಬವನು ಟೀಕೆಯನ್ನು ಬರೆದಿದ್ದಾನೆ. ಇದರಲ್ಲಿ ಸೃಷ್ಟಿಯ ಉಗಮವು ಹೇಗೆ ಉಂಟಾಯಿತು, ಪರಮಾತ್ಮನ ಮೂಲ ಚೈತನ್ಯ ರೂಪು ಜಗತ್ಸೃಷ್ಟಿಗೆ ಹೇಗೆ ಕಾರಣವಾಯಿತು, ಇವೇ ಮೊದಲಾದ ವಿಷಯಗಳನ್ನು ವಿವರಿಸಿ ಆಮೇಲೆ ಮುಕ್ತಿಗೆ ಸಾಧನವಾದ ಲಿಂಗಧಾರಣ ವಿಷಯವನ್ನು ಹೇಳಿದ್ದಾನೆ. ಆಮೇಲೆ ಅಂಗ ಲಿಂಗಸಂಬಂಧ ಮತ್ತು ಲಿಂಗಭಕ್ತಿಯ ಸ್ವರೂಪ ಇವುಗಳನ್ನು ವಿವರಿಸಿ ಶಿವಾನುಭವದ ಮೂಲಕ ಮೋಕ್ಷವನ್ನೈದಬೇಕೆಂದು ಸೂಚಿಸಿದ್ದಾನೆ.

ಎರಡನೆಯ ಗ್ರಂಥದಲ್ಲಿ ಪ್ರಭುದೇವರ ೩೭ ವಚನಗಳಿವೆ. ಇವುಗಳನ್ನು ಪಾಲ್ಕುರಿಕೆಯ ಸೋಮಾರಾಧ್ಯನು ಆರಿಸಿದಂತೆ ಈ ಗ್ರಂಥದಲ್ಲಿ ಉಲ್ಲೇಖವಿರುತ್ತದೆ. ಇದರಲ್ಲಿ ಸೃಷ್ಟಿಯ ರಚನೆಯ ಬಗ್ಗೆ ಸವಿಸ್ತಾರವಾದ ವಿವೇಚನೆಯೂ ಶಿವಯೋಗದ ಗೂಢತತ್ವಗಳೂ ಹೆಚ್ಚಾಗಿ ನಿರೂಪಿಸಲ್ಪಟ್ಟಿರುತ್ತವೆ. ಸೃಷ್ಟಿಯ ರಚನೆಯಲ್ಲಿ ಶೂನ್ಯ ನಿರಾಲಂಬ ಸೃಷ್ಟಿ, ನಿರಾಳಸೃಷ್ಟಿ, ಮತ್ತು ಈಶಾನ್ಯ ಮೂರ್ತಿಯ ನಿರ್ಮಲ ಸೃಷ್ಟಿ ಹೀಗೆ ಮೂರು ವಿಭಾಗಗಳು ಮಾಡಲ್ಪಟ್ಟಿರುತ್ತವೆ. ಈ ಕಡೆಯ ವಿಭಾಗವು ಪ್ರಮಥ ಸೃಷ್ಟಿಯೆಂತಲೂ ಹೇಳಲ್ಪಡುತ್ತಿದೆ.

ಷಟ್ಸ್ಥಲದ ಮರ್ಮವನ್ನು ತಿಳಿಯಲಿಕ್ಕೆ ಜಗದ್ರಚನೆಯ ಜ್ಞಾನವು ಬಹು ಅವಶ್ಯವಾದುದು. ಈ ವಿಷಯವು ಪ್ರಭುದೇವರ ಸೃಷ್ಟಿಯ ವಚನ ಮತ್ತು ಮಹಾದೇವಿಯಕ್ಕನ ಸೃಷ್ಟಿಯ ವಚನ, ಇವುಗಳಲ್ಲಿ ವಿಶೇಷವಾಗಿ ಬಂದಿರುತ್ತದೆ. ಅವುಗಳೊಡನೆ ಈಗಿನ ಗ್ರಂಥದಲ್ಲಿಯ ವಿಷಯಗಳನ್ನೂ, ವಚನಶಾಸ್ತ್ರಸಾರ ಭಾಗ ೨. ಈ ಗ್ರಂಥದ ಪುಟ ೧ರಿಂದ

೭೧ರ ವರೆಗಿನ ಪುಟಗಳಲ್ಲಿರುವ ವಚನಗಳನ್ನೂ ಪರಿಶೀಲಿಸಿದ್ದಾದರೆ ಈ ಮಹತ್ವದ ವಿಷಯದ ಮೇಲೆ ವಿಶೇಷ ಪ್ರಕಾಶವು ಬೀಳುವಂತಿದೆ.

ಈ ಎಲ್ಲ ವಿಷಯುಗಳನ್ನು ಇಲ್ಲಿ ನಿರೂಪಿಸಿದರೆ ಇದು ಒಂದು ದೊಡ್ಡ ಗ್ರಂಥವೇ ಆಗುವದು. ಆದ್ದರಿಂದ ಹೀಗೆ ವಿವೇಚಿಸಲು ನಾವು ಪ್ರಯತ್ನಿಸಿಲ್ಲ.

ಈ ಎರಡೂ ವಚನಗ್ರಂಥಗಳ ಹಸ್ತಲಿಖಿತ ಪ್ರತಿಗಳು ನಮ್ಮ ಕಡೆಗೆ ಇದ್ದು ಇವುಗಳನ್ನು ಬೇರೆಯಾಗಿ ಬೇರೆ ಬೇರೆ ಕಾಲಗಳಲ್ಲಿ ಕೆಲ ಮಹನೀಯರೂ ಪ್ರಸಿದ್ಧಮಾಡಿದ್ದು ನಮಗೆ ಕಂಡುಬಂದಿರುತ್ತಿದೆ. ಇವುಗಳನ್ನು ಮೊದಲು ಮೈಸೂರಿನ ಶ್ರೀ ಡಿ. ಆರ್. ತಿಪ್ಪಯ್ಯ ಶಾಸ್ತ್ರಿಗಳೂ ಈಚೆಗೆ ಜ್ಯೋತಿರ್ಮಯಶಾಂಭವದೀಕ್ಷೆಯನ್ನು ಶ್ರೀ ಚನಮಲ್ಲಪ್ಪನವರು ಎಡಿಟರ ಸದ್ಧರ್ಮ ದೀಪಿಕೆ ಇವರೂ ಪ್ರಸಿದ್ದಿಸಿದ್ದು ನಮಗೆ ತಿಳಿದುಬರುತ್ತದೆ. ಆದರೆ ಈ ಎರಡೂ ಗ್ರಂಥಗಳು ಒಂದೇ ವಿಷಯಕ್ಕೆ ಸಂಬಂಧಪಟ್ಟವಿರುವದರಿಂದ ಓದುವವರಿಗೆ ಅನುಕೂಲವಾಗಬೇಕೆಂದು ಅವೆರಡನ್ನು ಕೂಡಿಸಿಯೇ ಈ ಗ್ರಂಥದಲ್ಲಿ ನಾವು ಮುದ್ರಣಗೊಳಿಸಿರುತ್ತೇವೆ.

ವಿಜಾಪುರ
೧೫-೨-೧೯೫೪ }

ಫ. ಗು. ಹಳಕಟ್ಟಿ
ಸಂಪಾದಕ.

82 / 2440
ಅನುಕ್ರಮಾಂಕ
ಶಿವಬಸವ ನಗರ
2440.

## ಸ್ವತಂತ್ರ ಸಿದ್ಧಲಿಂಗೇಶ್ವರರು
## ನಿರೂಪಿಸಿದ
# ಮುಕ್ತ್ಯಾಂಗನಾಕಂಠಮಾಲೆ.

ವೇದಾಗಮ ಶಾಸ್ತ್ರವಿಶಾರದನಾದ ತಾರಕಾದ್ಯನೇಕೋಪದೇಶಕರ್ತೃವಾದ ಪಿಂಡ ಮಧ್ಯದಿ ನಾದ ಬಿಂದುಗಳ ತೋರುವಲ್ಲಿ ಕುಶಲನಾದ ಶಿವಯೋಗದಲ್ಲಿ ಸಂಪನ್ನನಾದ ಷಟ್‌ಸ್ಥಲ ಚಕ್ರೇಶ್ವರನಾದ ಸ್ವತಂತ್ರ ಸಿದ್ಧಲಿಂಗೇಶ್ವರನು ತಮ್ಮ ನಿಜಾನುಭಾವದ ವಚನಾಮೃತ ಶರಧಿಯೊಳಗೆ ಅನರ್ಘ್ಯ ರತ್ನಂಗಳನೆ ತೆಗೆದು ಸರಂಗೊಳಿಸಿ ಮುಕ್ತ್ಯಾಂಗನೆಯ ಕಂಠಮಾಲೆಯೊಳೊಪ್ಪುವ ವಚನಂಗಳೊಳಗೆ ಅತ್ಯಂತ ಗೌಪ್ಯವಾದ ವಚನಂಗಳನೆ ತೆಗೆದು ಮುಮುಕ್ಷುಗಳ ಹೃದಯಾಂತರಾಳವನೆ ತೊಳಗಿ ಬೆಳಗಲೆಂದು ಕನ್ನಡಿಸಿ ಪೇಳ್ವೆನದೆಂತೆಂದೊಡೆ:—

### ಪೀಠಿಕೆ.

ಏನೂ ಏನೂ ಇಲ್ಲದಂದು, ವಸ್ತು ನಿರವಯುವಾಗಿದ್ದಿತ್ತು. ನಿರವಯು ಬ್ರಹ್ಮವು ತಾನೇ ವ್ಯಂಜನ ಹಕಾರವು. ಆ ನಿರವಯ ಬ್ರಹ್ಮದಿಂದೆ ನಿರಂಜನ ಬ್ರಹ್ಮವೆಂಬ ಹಕಾರ ಪ್ರಮಣವು ಉದಯುವಾಯಿತ್ತು. ಮುಂದೆ ಶೂನ್ಯಪ್ರಣಮವೆಂಬ ಕ್ಷಕಾರ ಪ್ರಣಮವು ಸಂಜನ್ಯವಾದುದು. ಇಲ್ಲಿಂದ ಮುಂದೆ ನಿಃಕಲ ಬ್ರಹ್ಮವೆಂಬ ಪ್ರಣಮವು ಉತ್ಪನ್ನವಾಯಿತ್ತು.

ಆ ನಿಃಕಲ ಬ್ರಹ್ಮವು ತಾನೋರ್ವನೆಯಾಗಿ ಖೈಲಿಗನಾಗಿ ಧ್ಯಾನ ಪೂಜೆಗಳಿಲ್ಲದಿರಲಾಯಿತ್ತೆಂದು ತನ್ನ ಸರ್ವಕಲಾಭಿಜ್ಞತ್ವವನೊಳಕೊಂಡು ಇದಕ್ಕೆ ಜಗದ್ವೈಭವದ ಲೀಲಾವಿನೋದ ಮಾಡಿ ನಟಿಸಬೇಕೆಂದು ನೆನಹು ದೋರಲು ಆ ನೆನೆದ ನೆನಹೇ ನಿರ್ಧರಿಸಿ ಮೂಲ ಜ್ಞಾನ ಚಿತ್ತೋದ್ಭವವಾಯಿತ್ತು. ವಕಾರ ಬಕಾರ ಸಕಾರವೆಂಬ ಚಿನ್ನಾದ ಚಿದ್ಬಿಂದು ಚಿತ್ಕಳೆ ಪುಟ್ಟಿದವು. ಇವು ಮೂರು ಮೂಲಜ್ಞಾನ ಚಿತ್ತು ಇಂತೀ ಚತುರ್ವಿಧವು ಗಟ್ಟಿ

ಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗ ಉದಯವಾಯಿತ್ತು. ಆ ಮಹಾಲಿಂಗದಿಂದೆ ಪರನಾದ ಪರಬಿಂದು ಪರಕಳೆ ಎಂಬ ತ್ರಿವಿಧವು ಗಟ್ಟಿಗೊಂಡು ಸಾಕಲ್ಯಪ್ರಣಮಸ್ವರೂಪವಾದ ಸದಾಶಿವ ತತ್ವಮೂರ್ತಿ ಸಂಜನ್ಯವಾಯಿತ್ತು. ಆ ಸದಾಶಿವ ಮೂರ್ತಿಯ ಪಂಚಮುಖಂಗಳಿಂದೆ ಪಂಚಭೂತಂಗಳು ಪುಟ್ಟಿದವು. ಗೊಪ್ಯಮುಖದಲ್ಲಿ ಆತ್ಮನು ಪುಟ್ಟಿದನು.

ಒಬ್ಬ ಸೂರ್ಯನು ಅನಂತ ಘಟದ ಮಧ್ಯ ಜಲದಲ್ಲಿ ಬಿಂಬಿಸಿ ತೋರುವಂತೆ, ಒಬ್ಬ ಆತ್ಮನು ಪರಿಚಿಂತನಾತ್ಮಕನಾಗಿ ದೇಹೋಹಂ ಮೆನಲು ಪರಮೇಶ್ವರನ ಐದುಮುಖದಿಂದೊಗೆದ ಪಂಚಭೂತ ಜಂಜಡ ಕಾಯ ಸಂಬಂಧವಾಯಿತ್ತು. ಆ ದೇಹದ ಮರವೆಯಿಂದ ಮಾಯೆಯ ಕಲ್ಪಿಸಿ ಮಾಯಾಮೋಹದಿಂದ ಪಾಶಬದ್ಧೋದ್ಭವವೇ ಜೀವ ಎಂದು ಜೀವನಾದನು.

ಇಂತಪ್ಪ ಜೀವನು ಪೃಥ್ವಿ ಅಪ್ಪು ತೇಜ ವಾಯು ಆಕಾಶಗಳಲ್ಲಿ ಉದ್ಭಿಜ, ಸ್ವೇದಜ, ಅಂಡಜ, ಜರಾಯುಜ ಇಂತು ಚೌರಾಸಿ ಲಕ್ಷ ಜೀವರುಗಳಾಗಿ ಭವವೆತ್ತಿ ರಾಟವಾಳದ ಗುಂಡಿಗೆಯಂತೆ ತುಂಬುತ್ತೆ ಕೆಡವುತ್ತೆ ಮರಳಿ ತುಂಬುತ್ತೆ ಹೀಗೆ ತಿರುತಿರುಗಿ ಬರುವಲ್ಲಿ ಲೆಕ್ಕವಿಲ್ಲದ ಶರೀರವ ತೊಟ್ಟು ತಿಟ್ಟನೆ ತಿರುಗಿ ತೊಳಲಿ ತೊಳಲಿ ಬರಲಾರೆ, ಸತ್ವಗುಂದಿ ಭವರೋಗ ವೈದ್ಯನಾದ ಗುರುದೇವನ ಸಾರ್ದು, ತನ್ನ ಸಲಹೆಂದು ಬಹುವಿಧ ಸ್ತೋತ್ರಂಗಳ ಮಾಡಿ ಕುಳಿತಿರಲು ಗುರುವು ಎಲೆ ಮಗನೆ ಕೇಳು, ನೀನು ತಿಳಿಯಬೇಕಾದರೆ ಮಹದಾದಿಯನರಿದಲ್ಲದೆ ಆಗದೆಂದೆನಲು ಎಲೆ ಸ್ವಾಮಿ ನೀವೇ ಕರುಣದಿಂದ ಹೇಳಿ ಎನ್ನ ಕೃತಾರ್ಥನ ಮಾಡೆನಲು ಜ್ಞಾನೋನ್ಮುಖನಾಗಿ ಜ್ಞಾನಕಲಾತ್ಮನೇ ಕೇಳು ಎಂದು ಪೇಳುತ್ತಿರ್ದನು. 'ಮಹಾಲಿಂಗಮಿದಂ ದೇವಿ ಮನೋತೀತಂ ಮೇ ಅಗೋಚರಂ॥ ನಿರ್ನಾಮಂ ನಿರ್ಗುಣಂ ನಿತ್ಯಂ ನಿರಂಜನ ನಿರಾಮಯಂ' ॥ ಎಂದು ದೇವಿಯರಿಗೆ, ಶಿವನು ಹೇಳಿಹನು ಕೇಳೆಂದು ಪೇಳುತ್ತಿರ್ದನು. ಮಹಾಲಿಂಗವೆಂಬುದು ಮನೋನೇತ್ರಂಗಳಿಗೆ ಗೋಚರಿಸದೆ ಇದ್ದಂಥಾದ್ದು ಮತ್ತೆ ನಿರ್ನಾಮ, ನಿರ್ಗುಣ, ನಿತ್ಯ, ನಿರಂಜನ ಇಂತೀ ಪಂಚನಾಮವನುಳ್ಳುದೇ ಮಹದಾದಿ ಎನಿಸುವದು. ನಿಃಕಲಬ್ರಹ್ಮ ಮೂಲಚಿತ್ತು ಚಿತ್ತಾನಂದ ಚಿದ್ಬಿಂದು ಚಿತ್ಕಳೆ ಕೂಡಿಕೊಂಡು ಲಿಂಗವೆನಿಸಿ ತದುವೇ



ನಿನ್ನ ಪ್ರಾಣಲಿಂಗವೆಂದು ಚೆನ್ನಾಗಿ ತಿಳಿದುನೋಡು ಎನಲು, ಹರಹರಾ ನಾನದೇಂ ಕೃತಾರ್ಥನು? ಇಂತಪ್ಪ ಘನಲಿಂಗ ಎನ್ನ ಪ್ರಾಣವೆಂದು ತಿಳುಹುವರಾರು? ನಿಮ್ಮ ಕೃಪಾಪ್ರಸಾದವ ಪಾಲಿಸಿದಿರಿ. ಮುಂದೆ ಮಹಾಲಿಂಗ ಹೇಗೆ ಇದ್ದಿತ್ತು ಎನಲು-

ಕೇಳಯ್ಯ ಎಲೆ ಮಗನೇ.

ಆ ಮಹಾಲಿಂಗದಿಂದ ಪರನಾದ ಪರಬಿಂದು ಪರಕಳೆಗಳಾದವು. ಅವೇ 'ಓಂ' ಎಂಬ ಪ್ರಣಮ ಉದಯವಾಯಿತ್ತು. 'ಓಂ' ಎಂಬ ಊರ್ಧ್ವಸ್ವರವನುಳ್ಳ ಷಟ್‌ಕೃತಿಗಳು ಸಂಪೂರ್ಣವಾದ ಸಾಕಲ್ಯ ಪ್ರಣಮವು. ಷಟ್‌ಸ್ಥಲಂಗಳಿಗೆಯೂ ಸಪ್ತಕೋಟಿ ಮಹಾಮಂತ್ರಂಗಳಿಗೆಯೂ ವೇದಾಗಮಂಗಳಿಗೆಯೂ ಕ್ರಿಯಾದಿ ಪಂಚಶಕ್ತಿಗಳಿಗೆಯೂ ಅನಂತಕೋಟಿ ಬ್ರಹ್ಮಾಂಡ ಪಿಂಡಾಂಡದ ಒಳಗೊರಗೆಲ್ಲಿಯೂ ಕಿಷ್ಕಿಂಧವಾಗಿ ಅಗಣಿತ ಚಂದ್ರ ಸೂರ್ಯ ಕಲಾಗ್ನಿಗಳಿಗೆ ತಾನೇ ಪ್ರಕಾಶವೆನಿಸಿ ಜ್ಯೋತಿರೂಪವಾಗಿ ಬೆಳಗುತಿರ್ಪಂ. ಬಳಿಕ ಸರ್ವಜ್ಞತ್ವ, ನಿತ್ಯ ತೃಪ್ತತ್ವ, ಅನಾದಿ ಬೋಧತ್ವ, ಸ್ವತಂತ್ರತ್ವ, ಅಲುಪ್ತತ್ವ, ಅನಂತಶಕ್ತಿತ್ವ, ಷಡಧ್ವಗಳನೊಳಕೊಂಡು ತಾನೇ ತೋರುವ ಚಿದ್ಬಿಂದುವನೇ ಎಲೆ ಮಗನೇ ವಚನದಲ್ಲಿ ಪೇಳುವೆವು. ನೀನು ಚನ್ನಾಗಿ ಕೇಳು.

## ವಚನಗಳು.

(೧) ಎಲೆ ಅಯ್ಯ, ನೀವು ನಿರಾಕಾರವಾಗಿದ್ದಿರಾಗಿ, ಆ ನಿರಾಕಾರ ಪಂಚಮದಲ್ಲಿ ನಿಂದರೆ ನಾದ ತೋರಿತ್ತು. ಆ ನಾದ ಬಿಂದುಗಳನೊಡೆದು ಮೂಡಿ ನಿರುಪಾಧಿಕ ಜ್ಯೋತಿಯಂತೆ ಸಕಲ ನಿಃಕಲ ರೂಪಾದಿರಯ್ಯ. ರವಿಕೋಟಿ ತೇಜಪರಿಪೂರ್ಣ ಮೂಲ ಚೈತನ್ಯ ರೂಪು ನೀವು ಕಂಡಿರಯ್ಯ. ಭೇದಿಸಬಾರದಭೇದ್ಯ ಸಾಧಿಸಬಾರದಸಾಧ್ಯ ನೀವು ಕಂಡಿರಯ್ಯ. ನಿಮ್ಮ ಸಹಜದ ನಿಲವನಾರು ಬಲ್ಲರು? ನಿಮ್ಮಿಂದ ನೀವೇ ರೂಪಾದಿರಯ್ಯ. ನಿಮ್ಮ ಪರಿಮಾಣ ಪಥದಲ್ಲಿ ಒಂದನಂತ ಕಾಲ ಇರ್ದಿರಯ್ಯ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

ಟೀಕು:— ಸಚ್ಚಿದಾನಂದ ನಿತ್ಯ ಪರಿಪೂರ್ಣವೆಂಬ ಪಂಚಪದ ಲಕ್ಷಿತವಾದ, ನಿರವಯ ನಿರಂಜನ ಶೂನ್ಯ ನಿಃಕಲ ಮಹಾಘನವೆಂಬ

ಕುರುಹುದೋರದೆ ತಾನೇ ಬಯಲಿಗನಾಗಿರ್ದಲ್ಲಿ ಆ ಬಯಲೇ ಪಂಚ ವಿಧವಾದ 'ಓಂ' ಇತಿ ಸುನಾದವೇ ತಾ ಮೊದಲು ಸಂಜನ್ಯವಾಯಿತ್ತಾಗಿ, ಅದೀಗ ಎಲೆ ಅಯ್ಯ ನೀವು ನಿರಾಕಾರವಾಗಿದ್ದಿರಾಗಿ ಆ ನಿರಾಕಾರವೇ ಪಂಚಮುದಲ್ಲಿ ನಿಂದರೆ ನಾದ ತೋರಿತ್ತು ಎಂಬ ಶಬ್ದಕ್ಕರ್ಥ. ಆ ಪಂಚ ಲಕ್ಷಣವನುಳ್ಳ 'ಓಂ' ಇತಿ ಸುನಾದದಿಂದ ಚಿದ್ಬಿಂದು ಉದಯವಾಗಿ ಆ ಚಿದ್ಬಿಂದುವಿನ ಕ್ಷುಧಾಬ್ಧಿ ಮಧ್ಯಂಗಳಲ್ಲಿ ಮರುತ ದಂಡಾವರ್ತ ಕಾಣಲ್ಪಡುವ ಹಾಗೆ ಆ ಚಿದ್ಧ್ವನಿ ಚಿದಾಕಾಶ ಮಧ್ಯದಲ್ಲಿ ನಾದ ಬಿಂದು ಕಳೆ ಕೂಡಿ ಸ್ವಯಂಜ್ಯೋತಿ, ತನಗೆ ತಾನೇ ಎಂಬ ಶಬ್ದಕ್ಕರ್ಥ. ಅಖಂಡ ಜ್ಯೋತಿ ಎಂಬುದು ಹಿಂದೆ ಹೇಳಿದ ಪಂಚಲಕ್ಷಣವನೊಳಕೊಂಡು ಮುಂದೆ ಜಗದುತ್ಪತ್ತಿಮಾಡಲುಳ್ಳುದಾಗಿ ಅನಂತ ಸೂರ್ಯ ಪ್ರಕಾಶದಿಂ ಪಿಂಡಬ್ರಹ್ಮಾಂಡಂಗಳಿಗೆ ಮೂಲ ಚೈತನ್ಯದಿಂ ವ್ಯಾಪಕವಾಗಿ ಇಂತಪ್ಪ ಬ್ರಹ್ಮವು ಷಟ್‌ಸಮಯ ವ್ರತಗಳ ಸಾಮಾನ್ಯ ವ್ರತಗಳ ಸಾಮಾನ್ಯ ದೃಷ್ಟಿಗೆ ಗೋಚರವಾಗದಾಗಿ ಎಂಬುದೀಗ ಸಕಲ ನಿಃಕಲರೂಪಾದಿರಯ್ಯ, ರವಿಕೋಟಿತೇಜಪರಿಪೂರ್ಣಮೂಲಚೈತನ್ಯ ರೂಪ ಕಂಡಯ್ಯ ಭೇದಿಸಬಾರದಭೇದ್ಯ ಸಾಧಿಸಬಾರದಸಾಧ್ಯ ಕಂಡಯ್ಯ ಎಂಬುದಕ್ಕರ್ಥ. ಅಂತಪ್ಪ ಪರಬ್ರಹ್ಮವು ತಾನು ತಾನೇ ಹುಟ್ಟಿ ತನ್ನ ಲೀಲಾಮಾತ್ರದಿಂದ ಜಗದ್ವೈಭವ ನಟಿಸಿ ತನಗೆ ತಾನೇ ಸಾಕಾರ್ಯ ಲೀಲೆಯು ಮಾಡಿ ಲೀಲೆಯಾದಡೆ ಉಮಾಪತಿಯಾಗುತ್ತ, ಲೀಲೆ ತಪ್ಪಿದಡೆ, ಸ್ವಯಂಭುವಾಗುತ್ತ ಮರಳಿ ಎಚ್ಚತ್ತು, ಆನಂದವನೈದುವನೆಂಬುದೀಗ ನಿಮ್ಮ ನಿಜದ ನಿಲವನಾರು ಬಲ್ಲರು? ನಿಮ್ಮಿಂದ ನೀವೇ ರೂಪಾದಿರಯ್ಯ. ನಿಮ್ಮ ಪರಿಣಾಮದ ಪಥದಲ್ಲಿ ಒಂದನಂತ ಕಾಲವಿರ್ದಿರಯ್ಯ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ಎಂಬುದರ್ಥ.

(೨) ಅಜ್ಞಾನ ಕಲಾತ್ಮಂಗೆ ಮಹದಾದಿಯು ಪೇಳುವೆ. ಆ ಮಹದಾದಿ ಎಂಬುದು ನಿನ್ನ ದಿವ್ಯ ಶರೀರವೆಂದು ಪೇಳುತ್ತಿರ್ದನು. ಚಂದ್ರಕಾಂತದ ಶಿಲೆಯಲ್ಲಿ ಉದಕ ಒಸರದಿಪ್ಪಂತೆ ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಸ್ಫುರಿಸದಿಪ್ಪಂತೆ, ಬೀಜದೊಳಗಣ ವೃಕ್ಷ ಅಂಕುರಿಸದಿಪ್ಪಂತೆ ಇಪ್ಪನಯ್ಯ ಶಿವನು ಪಿಂಡದೊಳಗೆ ಪಿಂಡರೂಪಾಗಿ ಈ ಪರಿಯಲ್ಲಿ ಗೋಪ್ಯವಾಗಿರ್ದು, ಎನ್ನಲ್ಲಿ ಕಾಣಿಸಿಕೊಳ್ಳದಿರ್ದಿರಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.



ಟೀಕು.— ಚಂದ್ರಕಾಂತದ ಶಿಲೆಯಲ್ಲಿ ಉದಕ ಒಸರದೆ ಇರುವ ಹಾಗೆ ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಸ್ಫುರಿಸದೆ ಇರುವ ಹಾಗೆ ಬೀಜದೊಳಗಣ ವೃಕ್ಷ ಅಂಕುರಿಸದಿಪ್ಪಂತೆ ಚಿದ್ಬಿಂದು ಎಂಬುದು ಸಪ್ತಧಾತು ಪಿಂಡದಲ್ಲಿ ಗೋಪ್ಯವಾಗಿಹುದು. ಅದು ಹೇಗೆಂದೊಡೆ ಗೋಪ್ಯ ಮುಖದಲ್ಲಿ ಪುಟ್ಟಿದಾತ್ಮನು ತನ್ನ ನಿಜಮಂ ಮರೆದು ಪುಟ್ಟುವಲ್ಲಿ ಪೃಥ್ವಿಯಲ್ಲಿ ತತ್ತಿ ಒಡೆದು ಹುಟ್ಟುವ ಅಂಡ ಪ್ರಾಣಿ ೨೧ ಲಕ್ಷ. ಅಪ್ಪುವಿನಲ್ಲಿ ಬೆವರಿ ಪುಟ್ಟುವ ಪಿಪೀಲಿಕಾದಿ ಸ್ವೇದಜ ಪ್ರಾಣಿ ೨೧ ಲಕ್ಷ, ವಾಯುವಿನಲ್ಲಿ ಮನಸಿನ ಬಳಿವಿಡಿದು ಪುಟ್ಟುವ ಮನುಷ್ಯಾದಿ ಜರಾಯುಜಪ್ರಾಣಿ ೨೧ ಲಕ್ಷ, ಆಕಾಶದಲ್ಲಿ ಪರಮಾಣು ಪುಂಜವೇ ಬೀಜಂಗಳಾಗಿ ಪುಟ್ಟುವ ತೃಣಗುಲ್ಮಲತೆ ವೃಕ್ಷ ಮುಂತಾದ ಅನೇಕ ಉದ್ಭಿಜ ಪ್ರಾಣಿ ೨೧ ಲಕ್ಷ, ಇಂತೀ ೮೪ ಲಕ್ಷ ಜಾತಿ ಭೇದಾಕಾರವಾಗಿ ಜೀವನು ಪುಟ್ಟಿದ ಯೋನಿ ೮೪ ಲಕ್ಷ, ಅದಲ್ಲದೆ ಮತ್ತೆ ಅಲ್ಲಿ ಅದರಿಂದ ಪೃಥ್ವಿ ಅಪ್ಪು ಆಕಾಶ ಎಂಬ ಯೋನಿಗಳಲ್ಲಿ ಆತ್ಮನು ತಿರುತಿರುಗಿ ಬರುವಲ್ಲಿ ಅಗ್ನಿ ಎಂಬ ತತ್ವವು ಮಧ್ಯಸ್ಥನಾಗಿಹುದು. ಆ ಅಗ್ನಿಯಲ್ಲಿ ಪುಟ್ಟಿದ ಕಾರಣ ಅದೇ ಸುಷುಮ್ನ ನಾಡಿ ಎನಿಸುವುದು. ಅದು ಹೇಗೆಂದಡೆ ಆ ಸುಷುಮ್ನ ನಾಡಿಗೆ ಅಗ್ನಿ ನಾಳವೆಂದು ಎಲ್ಲ ಶಾಸ್ತ್ರಂಗಳೊಳಗೆ ಪ್ರಸಿದ್ಧನಾಗಿಹುದು. ಅಗ್ನಿ ಇಲ್ಲದ ಬಳಿಯಲ್ಲಿ ಜೀವವಿಲ್ಲದ ಕಾರಣ ಜೀವಂಗೆ ಚೈತನ್ಯವಾಗಿ ಜೀವನು ೨೫ ತತ್ವಗಳ ವ್ಯವಹಾರಕ್ಕೆ ತನ್ನೊಳಗೆ ಅವಕಾಶವ ಕೊಟ್ಟು ಚಿದ್ಬಿಂದುವಿಗೆ ತಾನೇ ಆಶ್ರಯವಾಗಿ ಇಪ್ಪದು. ಸಪ್ತಧಾತು ಸಮ್ಮೇಳದಿಂದ ಸುಷುಮ್ನನಾಡಿಯು ಒಳಗೆ ಚಿದ್ಬಿಂದು ಗೋಪ್ಯವಾಗಿ ಶಿವಶರಣನೊಳಗೆ ಕಾಣಿಸದೆ ಇದ್ದಿರಿ ಎಂಬುದೇ ಈ ವಚನದ ತಾತ್ಪರ್ಯಾರ್ಥ.

(೩) ತನುಪಿಂಡ, ವಾಯುಪಿಂಡ, ಪಿಂಡವು ಅಲ್ಲ. ಆದಿಪಿಂಡವಿಡಿದು ಬಂದ ಜ್ಞಾನ ಪಿಂಡವೇ ಪಿಂಡ. ಅದನರಿಯಲಿಲ್ಲ. ಅದೆಂತೆಂದೊಡೆ ಕ್ಷೀರದೊಳಗಣ ಆಜ್ಯದಂತೆ, ಪಾಷಾಣದೊಳಗಣ ಪಾವಕನಂತೆ, ಆಗಿರ್ಪುದಾಗಿ ಅಂತಪ್ಪ ನಿರ್ಮಲ ಪಿಂಡ ನಿಮ್ಮ ಶರಣಂಗಾಯಿತ್ತು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟೀಕುಃ— ಪಿಂಡ ಶಬ್ದ ನಾಮವು ಬಹು ವಿಧವಾಗಿಪ್ಪ ಕಾರಣ ಪಿಂಡ ಪಿಂಡ ಎಂಬುದೇನು ಎಂಬರ್ಥ. 'ಸಪ್ತಧಾತು ಸಮಂ ಪಿಂಡಂ' ಎಂದು ಸ್ಥೂಲಶರೀರವೇ ಪಿಂಡವೆಂದು ನಂಬಿಕೊಂಡಿರುವದು ಲೌಕಿ

ಕರು. ಸೂಕ್ಷ್ಮಶರೀರ ಸ್ವರೂಪ ಮನವಾದ ಕಾರಣ ಆ ಮನವೇ ಪಿಂಡವೆಂದು ನಂಬುವದು ಆತ್ಮಯೋಗಿಗಳು. ಪಂಚ ಪ್ರಾಣವಾಯುವೇ ಪಿಂಡವೆಂಬರು ಹಠಯೋಗಿಗಳು. ಇವು ಶಿವಶರಣನ ಶರೀರವಲ್ಲವೆಂಬುದೀಗ ತನುಪಿಂಡವೇ ವಾಯುಪಿಂಡವೇ ಪಿಂಡವಲ್ಲವೆಂಬುದರ್ಥ. ಆ ಶರಣನ ಪಿಂಡವು ಆವುದು ಎಂದರೆ ಹಿಂದೆ ಪೀಠಿಕೆಯಲ್ಲಿ ಹೇಳಿದ ನಿಃಕಲ ಲಿಂಗದಲ್ಲಿ ಒಗೆದ ಮೂಲ ಜ್ಞಾನ ಚಿತ್ತುವೇ ಶಿವಶರಣನಂಗವೆಂಬುದೀಗ ಆದಿನಿಡಿದು ಬಂದ ಜ್ಞಾನವೇ ಪಿಂಡವೆಂಬುದರ್ಥ. ಅಂತಪ್ಪ ಮೂಲ ಚಿತ್ತುವನು ತಿಳಿದಿಹೆನೆಂಬವರಲ್ಲಿ ಷಟ್ಸಮಯ ವ್ರತಿಗಳ ಸಾಮಾನ್ಯ ದೃಷ್ಟಿ ಎಂಬ ವಾಙ್ಮನಸ್ಸಿಗೆ ಗೋಚರಿಸದು. ಆದೇನು ಕಾರಣವೆಂದೊಡೆ ಕ್ಷೀರದೊಳಗಣ ಘೃತದಂತೆ ಪಾಷಾಣದೊಳಗಣ ಪಾವಕನಂತೆ ಶಿವಶರಣನೊಳಗಿಪ್ಪುದು. ಅದೆಂತೆಂದೊಡೆ ಮೂಲ ಚಿತ್ತು ಎಂದಡೂ, ಶರಣ ಎಂದಡೂ, ಒಂದೇ ಪರಿಯಾಯ. ಅದು ಸ್ವಯಂ ಜ್ಯೋತಿ ಎಂಬ ಶಬ್ದವು. ಸ್ವಯಃಂ ಎಂಬ ಶಬ್ದ ಜ್ಯೋತಿ ಎಂಬ ಶಬ್ದದ ಹಾಗೆ ಬೇಧವಲ್ಲದ ರೂಪಾಂತರಕ್ಕೆ ಭೇದವಿಲ್ಲದಂತೆ ಮೂಲ ಚಿತ್ತುವೇ ಶರಣನ ನಾದವೆಂಬುದೀಗ ಅದನರಿಯಲಿಲ್ಲ. ಅದು ಕ್ಷೀರದೊಳಗಣ ಆಜ್ಯದಂತೆ ಪಾಷಾಣದೊಳಗಣ ಪಾವಕನಂತೆ ಅಡಗಿರ್ಪುದಾಗಿ ಅಂತಪ್ಪ ನಿರ್ಮಲ ಪಿಂಡ ನಿಮ್ಮ ಶರಣಂಗಿತ್ತು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೇ ಸ್ಥಿರವೆಂಬುದರ್ಥ.

(೪) ಹಿಂದಣದನಾದಿ ಕರಣದ ಕಿಲ್ಮಿಷ ಹರಿಯಿತ್ತು. ನಿರ್ಮಲ ತನುವಾಯಿತ್ತು. ಆ ನಿರ್ಮಲ ತನುವಿನಲ್ಲಿ ಶಿವಪ್ರಸಾದವೆಡೆಗೊಂಡಿತ್ತಾಗಿ ಭಕ್ತಿಪಿಂಡವಾಯಿತ್ತು. ಆ ಭಕ್ತಿ ಪಿಂಡದಲ್ಲಿ ನೀವಿಪ್ಪರಾಗಿ ಶರಣಂಗೆ ಪಿಂಡನಾಮವಾಯಿತ್ತು. ಅದು ಕಾರಣ ನಮಗೂ ನಿಮಗೂ ಒಂದೇ ಭಕ್ತಿಪಿಂಡವಾಯಿತ್ತು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟೀಕು:— ಆವನೊಬ್ಬಾತ್ಮನು ಅನಂತ ಜನ್ಮದಲ್ಲಿ ಮಾಡಿದ ಪುಣ್ಯವು ಮನುಷ್ಯ ಜನ್ಮದಲ್ಲಿ ಲಂಬಿಸಲು ಮನ ವಾಚಿಕ ಕಾಯಿಕವೆಂಬ ತ್ರಿಕರಣಂಗಳ ಕಳಂಕ ಹರಿದು ಮಲತ್ರಯ ಪರಿಪಾಕವಾಗಲು ಅದೀಗ ಕಾರಣದ ಕಿಲ್ಮಿಷ ಹರಿಯುತ್ತಾನೆ. ನಿರ್ಮಲತನುವಾಯಿತ್ತೆಂಬುದರ್ಥ. ಮಲತ್ರಯದ ಪರಿಪಾಕಕ್ಕೆ ಅನುಗ್ರಹ ಶಕ್ತಿಯೇ ಕಾರಣ. ಆ ಅನು-



ಗ್ರಹ ಶಕ್ತಿಯೇ ಶಿವಪ್ರಸಾದವೆನಿಸುವುದು. ಆ ಶಿವಪ್ರಸಾದವು ನಿರ್ಮಲ ತನುವಿನಲ್ಲಿ ನೆಲೆಗೊಳ್ಳಲು ಅದೇ ಭಕ್ತಿಕಾಯವೆನಿಸುವುದು. ಆ ಭಕ್ತಿ ಕಾಯದಲ್ಲಿ ಶಿವನು ಸನ್ನಿಹಿತನಾಗುವನು ಎಂಬುದೀಗ ಆ ನಿರ್ಮಲ ತನುವಿನಲ್ಲಿ ಆ ಶಿವಪ್ರಸಾದ ನೆಲೆಗೊಂಡಿತ್ತಾಗಿ ಭಕ್ತಿ ಪಿಂಡವಾಯಿತ್ತು. ಆ ಭಕ್ತಿ ಪಿಂಡದಲ್ಲಿ ನೀವಿಪ್ಪಿರಾಗಿ ಎಂಬುದರ್ಥ. ಶಿವಸನ್ನಿಹಿತರಾದ ಭಕ್ತಕಾಯದಲ್ಲಿ ಶರಣನು ಅಡಗಿರುವದರಿಂದ ಆ ಶಿವನಿಗೂ ಶರಣನಿಗೂ ಭಕ್ತಿ ಕಾಯ ಒಂದಾದಲ್ಲಿ ಐದಿರ್ದರೆಂಬುದೀಗ ಶರಣಗೆ ಪಿಂಡನಾಮವಾಯಿತ್ತು. ಅದು ಕಾರಣ ಶರಣಂಗೆಯೂ ನಿಮಗೂ ಒಂದೇ ಭಕ್ತಿಪಿಂಡವಾಯಿತ್ತು ಎಂಬುದರ್ಥ. ಇದೀಗಳೇ ಹೇಳಿದ ಪಿಂಡಸ್ಥಲವ ಶ್ರೀಗುರು ಕರುಣಿಸಿದ ಸ್ವಾನುಭಾವದಿಂದ ಸಿಷ್ಯಯಿಸಿದಾತಂಗೆ ಮುಂದೆ ಪೇಳಿದ ವಚನ ಕರತಳಾಮಳಕವಾಗಿ ಕಾಣಲ್ಪಡುವುದು ತಿಳಿದುನೋಡು ಎಂದು ಮುಂದೆ ಪಿಂಡಜ್ಞಾನವನು ಪೇಳುತಿರ್ದನು.

(೫) ಆದಿಯ:ಲಿ ನಾನು ಲಿಂಗದಲ್ಲಿ ಉದಯವಾದ ಕಾರಣ ಎನ್ನಾದಿ ಪಿಂಡವ ತಿಳಿದೆನು. ಆದಿಪಿಂಡ ನಾದಪಿಂಡವ ಕೂಡಿದ ಕಾರಣ ಬಿಂದುಪಿಂಡ ಉದಯವಾಯಿತು. ಆ ಬಿಂದು ಪಿಂಡದಲ್ಲಿ ಆದಿವಿಡಿದು ನೋಡಲು ಅನಾದಿ ಶಿವನ ತತ್ವದ್ವಾರದಲ್ಲಿ ಬಂದೆನೆಂದು ಅರಿದೆನು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟೀಕು.— ನಿಃಕಲ ಬ್ರಹ್ಮ ತಾನೋರ್ವನೆಯಾಗಿ ಬಯಲಲಿಂಗವಾಗಿ ಏಕಾದಶ ಮಂತ್ರವಾಗಿ ಧ್ಯಾನ ಪೂಜೆಗಳಿಲ್ಲದಿರಲಾಗಿ ಇಂತೀ ತನ್ನ ಸರ್ವ ಕಲಾಭಿಜ್ಞತ್ವದೊಳಗೊಂದು ಚದುರಿನ ಕಲೆ ಕಡಿಮೆಯಾದಪುದಲಾ ಇದಕ್ಕೆ ಜಗದ್ವೈಭವ ಲೀಲಾ ವಿನೋದವ ಮಾಡಿ ನಟಿಸಬೇಕೆಂದು ನೆನಹುದೋರಲು ಆ ನೆನೆದ ನೆನಹೇ ನಿರ್ಧರಿಸಿ ಮೂಲ ಜ್ಞಾನ ಚಿತ್ತು ಪುಟ್ಟಿತು. ಅದು ತಾನೇ ಶಿವಶರಣನ ಶರೀರ. ಆ ದಿವ್ಯ ಶರೀರದ ಚಲನೆಯಿಂದ ನಾದ ತೋರಿತ್ತು. ಆ ನಾದವೇ ಬಲಿತು ಬಿಂದುವಾಯಿತ್ತು ಎಂಬುದೀಗ ಆದಿಯಲ್ಲಿ ನಾನು ಲಿಂಗದಲ್ಲಿ ಉದಯವಾದ ಕಾರಣ ಎನ್ನಾದಿ ಪಿಂಡವ ತಿಳಿದೆನು. ಆದಿ ಪಿಂಡ ನಾದಪಿಂಡವ ಕೂಡಿದ ಕಾರಣ ಬಿಂದು ಪಿಂಡ ಉದಯವಾಯಿತ್ತು ಎಂಬುದರ್ಥ. ಕುಂಡಲಿ ಎನಿಸುವ ಚಿದ್ಬಿಂದುವಿನ ಪೂರ್ವಾಪರವ ನೋಡಲು ನಿಃಕಲ

ಲಿಂಗದಿಂದೊಗೆದ ನಾನಹುದಲಾ ಎಂದು ದೃಢೀಕರಿಸಿ ಆನಂದಿಸುತಿರ್ದನೆಂಬುದೀಗ ಆ ಬಿಂದುಪಿಂಡದಾದಿವಿಡಿದು ನೋಡಲು ಅನಾದಿ ಶಿವತತ್ವ ದ್ವಾರದಿಂದ ಬಂದೆನೆಂದರಿದೆನೆಂದ ಕಾಣಾ ಎಂಬುದರ್ಥ.

(೬) ನನ್ನಿಂದರಿದೆನೆಂಬೆನೇ? ನನ್ನಿಂದರಿದವನಲ್ಲ. ನಿನ್ನಿಂದರಿದೆನೆಂಬೆನೇ? ನಿನ್ನಿಂದರಿದವನಲ್ಲ. ಅದೇನು ಕಾರಣವೆಂದಡೆ ಕಣ್ಣಬೆಳಗು ಸೂರ್ಯನ ಬೆಳಗು ಕೂಡಿ ಕಾಂಬಂತೆ ನನ್ನ ನಿನ್ನ ಅರುವಿನ ಸಂಬಂಧ ಬೆಂಬಳಿಯಲ್ಲಿ ಅರಿದೆನು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟೀಕು.— ಮೂಲಜ್ಞಾನವೆಂಬ ಚಿದಾಕಾಶವು ಹಂಸ ಸ್ವರೂಪನಾದ ಮೂಲಾಹಂಕಾರದರುವಿಗೆ ಗೋಚರಿಸದು. ಚಿದಹಂಕಾರದರುವಿಗೂ ಗೋಚರಿಸದು. ಅದೆಂತೆಂದೊಡೆ, ಒಂದಾನೊಂದು ಆಕಾಶದಲ್ಲಿ ಕಾವಳವು ಬೆಳಗು ತೋರಿ ಅಡಗುವದಲ್ಲದೆ ರೂಪಾಂತರವಾಗಿ ಬೇರೆ ತೋರಲರಿಯುದ ಹಾಗೆ ಎರಡನೂ ಗರ್ಭೀಕರಿಸಿಕೊಂಡು ತೋರುವದೆಂಬುದೀಗ ತಾತ್ಪರ್ಯ.

ಎಲೆ ಮಗನೇ ನಾವು ಜಗದ ನಟನೆಯು ನಟಿಸಬೇಕೆಂದು ನೆನಹುದೋರದೆ ಮುನ್ನವೇ ನನೆಯೊಳಗಣ ಪರಿಮಳದಂತೆ ಇದ್ದು ಲೀಲೆದೋರಿ ನಮ್ಮಂಗವಾಗಿ ನಿಮ್ಮ ಲೀಲಾ ಮೂರ್ತಿಗಳಿಗೆ ಶಕ್ತಿ ಎನಿಸಿ ಮರಳಿ ಜಗಕ್ಕೆ ಅವಿದ್ಯೆ ಶಕ್ತಿ ಎನಿಸಿ ಜೀವನಾಗಿ ಹುಟ್ಟಿ ಆ ಜೀವನಿಗೆ ಜ್ಞಾನ ಪ್ರಕಾಶವ ಮಾಡಿಕೊಟ್ಟು ನಮ್ಮೊಳಗೆ ಹೆರೆ ಹಿಂಗದೆ ಇಂಬಿಟ್ಟುಕೊಂಡೆವೆಂದು ಹೇಳುತ್ತಿಹನು.

(೭) ಅಂಡಾದಿ ಬಿಂದುವಿಲ್ಲದಂದು ನಿನಗೂ ನನಗೂ ಲಿಂಗಾಂಗವೆಂಬ ಹೆಸರು ಬಂದಿತ್ತು. ಅಂಡಾದಿಯಾಗಿ ನೀನಾವಲೀಲೆಯ ಧರಿಸಿದಿರಿ? ಆ ಲೀಲೆಗೆ ನಾನು ಆಧಾರವಾಡೆ. ನಿಮಗೂ ನನಗೂ ಎಂದೆಂದಿಗೂ ಹೆರೆಹಿಂಗದ ಯೋಗ ಅದ ನೀವು ಬಲ್ಲಿರಿ. ನಾನು ಬಲ್ಲೆನು. ನುಡಿದ ತೋರಲಿಕ್ಕೆ ಇನ್ನು ಇಂದೆನಗೆ ತನುಯೋಗವಾದಲ್ಲಿ ನಿಜ ಹೊರತೆ? ಸಾಕ್ಷಿ. ಶಿವಯೋಗ ಶರೀರೇಚ। ಸದಾ ಸನ್ನಿಹಿತ ಶಿವಃ॥ ಎಂಬದಾಗಿ ನಿಮಗೆ ಬೇರೆ ದೇಹವಿಲ್ಲ. ನನ್ನ ದೇಹಕ್ಕೆ ನಿನ್ನ ದೇಹವೆಂಬುದಕ್ಕೆ ನೀವೇ ಸಾಕ್ಷಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.



ಟೀಕುಃ- ನಿಃಕಲಬ್ರಹ್ಮ ತಾನೋರ್ವನೆಯಾಗಿ ಏಕಾದಶಮಂತ್ರನಾಗಿದ್ದರೂ ಉಷ್ಣ ತತ್ವವುಳ್ಳಡೆ ಅಗ್ನಿ ಎಂಬಂತೆ ಬಿಂದುವಿನಂತೆ ಪರಿಗ್ರಹ ಶಕ್ತಿ ಇಲ್ಲದೆ ಸಮಸ್ತ ಶಕ್ತಿ ಎನಿಸಿ ಅವಿನಾಭಾವಿಯಾಗಿದ್ದಂಥ ಶಿವ ಸಮೇತ ಶಕ್ತಿ ತಾನು ನೀರಗುರುಳಿ ಎಂಬ ಹೆಸರಂ ತಾಳಿದ ಹಾಗೆ ಪರಿಗ್ರಹ ಶಕ್ತಿ ಎಂಬ ಬಿಂದುದಯವಾಗಲು ಆ ಶಿವಶಕ್ತಿಗಳೇ ಲಿಂಗಾಂಗವಿದ್ದಿತೆಂಬುದೀಗ ಆದಿ ಬಿಂದು ರೂಹಿಸಿದಲ್ಲಿ ಲಿಂಗಾಂಗವೆಂಬ ಹೆಸರು ಬಂದಿತ್ತೆಂಬರ್ಥ. ಶಿವನ ವ್ಯಾಪಾರದ ಲಯ ಭೋಗಾದಿ ಕಾರ್ಯಂಗಳನುಂಟು ಮಾಡಿ ನಿಃಕಲ ಸಕಲ ಶಿವ ಸದಾಶಿವ ಮಹೇಶ್ವರರೆಂಬ ಹೆಸರಂ ತಳೆದು ನಾನಾ ಲೀಲೆಗಳಿಗೂ ತಾನೇ ಆಧಾರವಾಗಿ ಬಂದು ಶಕ್ತಿ ಎಂಬುದೀಗ ಅಂದಾದಿಯಾಗಿ ಆವಾವ ಲೀಲೆಯ ಧರಿಸಿದಲ್ಲಿ ಆ ಲೀಲೆಗೆ ನಾನಾಧಾರವಾದನೆಂಬುದರ್ಥ. ಶಿವತತ್ವ ಒಂದು ಸದಾಶಿವ ತತ್ವ ಹತ್ತು ಮಹೇಶ್ವರ ತತ್ವ ಇಪ್ಪತ್ತೈದು ಇಂತು ಮೂವತ್ತಾರು ತತ್ವಂಗಳ ವ್ಯಾಪಿಸಿ ಶಿವಶಕ್ತಿಗಳನು ದಿಟ್ಟಿಸಿಕೊಂಡು ತಾನೇ ಅವಿನಾಭಾವಿಯಾಗಿದ್ದಿತೆಂಬುದೀಗ ನಿಮಗೂ ನನಗೂ ಎಂದೆಂದು ಹೆರೆಹಿಂಗದ ಯೋಗ ಅದ ನೀವು ಬಲ್ಲಿರಿ, ನಾನು ಬಲ್ಲೆ ನುಡಿದು ತೋರಲೇಕೆ ಎಂಬುದರ್ಥ. ಅವಿನಾಭಾವಿಯಾದ ಚಿದ್ಬಿಂದು ಶಿವನ ಚೈತನ್ಯದ ಹೊಂಗಾಗಿರದೆ ಜೀವ ಶಿವನಿಗೂ ಆ ಚಿದ್ಬಿಂದುವೇ ಲಿಂಗವಾಯಿತ್ತು. ಅದೆಂತೆಂದೊಡೆ, ಈ ಚಿದ್ಬಿಂದು ದೇಹಾಳಿಯ ದೀಪದಂತೆ ಸಗುಣ ನಿರ್ಗುಣದ ಮಧ್ಯದಲ್ಲಿ ತಾನೇ ಪ್ರಕಾಶಿಸುತ್ತಿದೆಂಬುದೀಗ ಇಂದು ಎನಗೆ ತನುಯೋಗವಾದಲ್ಲಿ ಆ ನಿಜವು ಹೊರತೇ ಶಿವಯೋಗ ಶರೀರೇ ಚ ಸದಾ ಸನ್ನಿಹಿತಂ ಶಿವಂ ಎಂದುದಾಗಿ ಬೇರೆ ದೇಹವಿಲ್ಲ. ನನ್ನ ದೇಹ ಸಾಕ್ಷಿ ಎಂಬುದರ್ಥ.

ಗುರುವುಃ— ಎಲೆ ಮಗನೇ ನಾವು ನಿನಗೆ ಪ್ರಕಾಶಿಸಿ ಕೊಟ್ಟ .................. ಮುಂದೆ ಸಂಸಾರ ಇದಿರಿಟ್ಟು ಭಯಂಕರವಾಗಿ ತೋರಿದರೆಯೂ ಅದರಲ್ಲಿಯೇ ನಮ್ಮ ನಿಜವ ಕಾಣಿಸಿ ಸಂಸಾರವನೆ ಬೇರೆ ಮಾಡಿ ಆ ಜ್ಞಾನವೇ ನಿನ್ನ ಇಷ್ಟಲಿಂಗವೆಂದು ಕೊಟ್ಟು ನಮ್ಮೊಳಗೇಕ ಮಾಡುವೆವೆಂದು ಪೇಳುತ್ತಿದ್ದಾನು.

(೮) ಸಂಸಾರಕ್ಕೆ ಹೇಸಿ ಗುರುವನರಸಿಕೊಂಡು ಬಂದ ಶಿಷ್ಯನ ಕಣ್ಣ ಮುಂದೆ ಪರಶಿವನಾಗಿ ಪ್ರತ್ಯಕ್ಷವಾದನಯ್ಯ. ಆ ಗುರುವಿಂಗೆ ಸಾಷ್ಟಾಂಗವೆರಗಿ ಬಿನ್ನೈಸಲು ಆ ಶ್ರೀಗುರು ಶಿಷ್ಯನ ಆದಿ ಅಂತ್ಯವನರಿದು

ಇವನು ನನ್ನವನೆಂದು ಕರುಣ ಹುಟ್ಟಿ ಆಣವಾದಿ ಮಲತ್ರಯಂಗಳ ದೋಷವ ಕಳೆದು ಶುದ್ಧಾತ್ಮನ ಮಾಡಿ ವಿಭೂತಿ ಪಟ್ಟವ ಕಟ್ಟಿ ಪಂಚ ಕಲಶೋದಕದಿಂದ ಅಭಿಷೇಕವ ಮಾಡಿ ಪಂಚಾಕ್ಷರಿಯನುಪದೇಶಿಸಿ ಅಂಗದ ಮೇಲೆ ಲಿಂಗವ ಧರಿಸಿದನಯ್ಯ. ಇಂತಾದ ಬಳಿಕ ಕಾಯವೇ ಶಿವಕಾಯವಾಗಿ ಪ್ರಾಣವೇ ಪರಶಿವನಾಯಿತ್ತು. ಇಂತು ಶ್ರೀಗುರುವಿನುಪದೇಶದಿಂದ ಸದ್ಯೋನ್ಮುಕ್ತನಾದೆನು ನಿಜಗುರು ಸ್ವತಂತ್ರಸಿದ್ಧ ಲಿಂಗೇಶ್ವರಾ.

ಟೀಕು:— ಶಿವಾಂಶಿಕನಾದಾತ್ಮನು ತನ್ನ ನಿಜವಂ ಮರೆದು ಪುಟ್ಟುವಲ್ಲಿ ಪೃಥ್ವಿಯಲ್ಲಿ ಉದ್ಭಿಜ ಪ್ರಾಣಿ ೨೧ ಲಕ್ಷ, ಅಪ್ಪುವಿನಲ್ಲಿ ಸ್ವೇದಜ ಪ್ರಾಣಿ ೨೧ ಲಕ್ಷ, ವಾಯುವಿನಲ್ಲಿ ಅಂಡಜ ಪ್ರಾಣಿ ೨೧ ಲಕ್ಷ, ಆಕಾಶದಲ್ಲಿ ಜರಾಯುಜ ಪ್ರಾಣಿ ೨೧ ಲಕ್ಷ, ಇಂತೀ ಚತುರ್ಭೂತ ಮಿಶ್ರದಿಂದ ೮೪ ಲಕ್ಷ ಜೀವರಾಶಿಗಳೊಳು ಹುಟ್ಟುವ ಯೋನಿಗಳಲ್ಲಿ ಮೆಟ್ಟದ ಭೂಮಿ ಇಲ್ಲ. ಉಣ್ಣದ ಆಹಾರವಿಲ್ಲ. ಕಾಣದ ದುಃಖಗಳಿಲ್ಲ. ಇಂತಪ್ಪ ಭವಮಾಲೆಗಳಲ್ಲಿ ಬಂದು ವ್ಯರ್ಥ ಕಾಲಕ್ಕೆ ಹೋಗಿ ಕೆಡುವರ ಕಂಡಂತೆ ಮನುಷ್ಯ ಜನ್ಮಕ್ಕೆ ತನ್ನ ತಾನೇ ಎಚ್ಚತ್ತು ಭಕ್ತಿ ಪಥದ ಚಿನ್ಮಾತ್ರವಿರಾರಿ ಸಂಸಾರಕ್ಕೆ ಸಿಕ್ಕಿದೆನಲ್ಲ ಎಂದು ತಲೆಗೊಡುತ್ತಿರಲು ಅದೀಗ ಸಂಸಾರಕ್ಕೆ ಹೇಸಿ ಎಂಬುದರ್ಥ. ಆ ಸಂಸಾರಕ್ಕೆ ತಲೆಗೊಡದೆ ಇದ್ದಾತ್ಮನು ತನ್ನ ತಾನೇ ಹಿಡಿಮಿಡಿಗೊಂಡನಹುದೆಂದು ಆ ಸಂಸಾರವು ಆರ ಮುಖದಿಂದ ವಿಮೋಚನವಹುದೆಂದು ತನ್ನ ಮೂಲ ಚಿತ್ತುವಿನ ಜ್ಞಾನ ದೃಷ್ಟಿಯ ಮುಸುಕಿಕೊಂಡಿರ್ಪ ಅಹಂಜೀವನೆಂಬ ಅಜ್ಞಾನ ತಾಮಸವನು ಕಡೆಗೆ ತೊಲಗಿಸಿ ನಿಜಸ್ವರೂಪ ತೋರಿಸುವದಕ್ಕೆ ಸೋಹಂ ಪರಬ್ರಹ್ಮಾಸ್ಮಿ ಎಂಬ ಸುಜ್ಞಾನ ಚಕ್ಷುವಿನ ಮುಂದೆ ಕರಿಗೊಂಡು ನಿಂದ ಮಹಾ ಶ್ರೀಗುರುವಂ ಕಂಡು ಗುರುದೇವೋ ಮಹಾದೇವೋ ಗುರುದೇವ ಸದಾಶಿವ। ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ॥ ಎಂದು ಸರ್ವಾನುಗ್ರಹ ಸಮರ್ಥನಾದ ಸದಾಶಿವ ಮೂರ್ತಿಯನ್ನು ತನ್ನ ಪಶ್ಚಿಮ ಜ್ಞಾನದಿಂದ ಪ್ರತ್ಯಕ್ಷಿಸಿ ಕಂಡೆನೆಂಬುದೀಗ ಗುರುವನರಸಿಕೊಂಡು ಬಂದ ಶಿಷ್ಯನ ಕಣ್ಣ ಮುಂದೆ ಪರಶಿವನಾಗಿ ಪ್ರತ್ಯಕ್ಷನಾದನಯ್ಯ ಎಂಬುದರ್ಥ. ಆ ಪಶ್ಚಿಮಜ್ಞಾನವನು ಪ್ರತ್ಯಕ್ಷ ಮಾಡಿಕೊಡುವ ಸ್ಥಾನವಾವುದಯ್ಯ ಎಂದೊಡೆ, ಅದಾರಿಗೂ ಕಾಣ



ಬಾರದು. ಪಶ್ಚಿಮನಾಳದ ಮಹಾಪ್ರಕಾಶವೇ ಶ್ರೀಗುರುದೇವನ ದಿವ್ಯ ಚರಣಾರವಿಂದವಾದ ಕಾರಣ ಆ ದಿವ್ಯ ಚರಣಾರವಿಂದಕ್ಕೆ ಆ ಜ್ಞಾನ ಕಲಾತ್ಮನು ನವವಿಧ ಭಕ್ತಿ ಪೂರ್ವಕವಾಗಿ ಅಷ್ಟಾಂಗದಿಂ ನಮಿಸಿ ಕೈಸಾರಿ ನಿಂದು ಇನ್ನಾದರೂ ಎನ್ನ ನಿಮ್ಮೊಳಗೆ ಇಂಬಿಟ್ಟುಕೊಳ್ಳಿ ಎಂದು ಮಹಾ ದೈನ್ಯಾಂಕಿತನಾಗಲು ಇವ ನನ್ನವನಾದ ಕಾರಣ ನನ್ನ ನಿಜವ ತಿಳಿದನು. ಇವಂಗೆ ಚತುರ್ದಶ ಭುವನದೊಳು ಸರಿದೊರೆ ಇಲ್ಲ. ಇಂತಿವಗೆ ಶಿವತತ್ವವ ಬೋಧಿಸಲು ಬಹುದೆಂದು ಪರಮ ಹರುಷಿತನಾಗಿ ತನ್ನಪಾಂಗದಿಂ ಚೆನ್ನಾಗಿ ನಿಜ ಭಕ್ತಿಯಂ ಕುರುವಿಟ್ಟರೆಂಬುದರ್ಥ. ಶಿಷ್ಯನ ಮುಖವ ನೋಡಲು ಎಂಬುದೀಗ ಆ ಶ್ರೀಗುರುವಿನ ಕಂಡು ಸಾಷ್ಟಾಂಗವೆರಗಿ ಬಿನ್ನೈಸಲು ಆ ಶ್ರೀಗುರುಶಿಷ್ಯನ ಆದಿ ಅಂತ್ಯವನರಿದು ಈತ ನನ್ನವನೆಂದು ಕರುಣ ಹುಟ್ಟಿತೆಂಬುದರ್ಥ. ಅಂತಪ್ಪ ಆಚಾರ್ಯನು ತನೂಭವನ ಸ್ಥೂಲ ತನು, ಸೂಕ್ಷ್ಮ ತನು, ಕಾರಣ ತನು, ಬ್ರಹ್ಮನ ಉತ್ಪತ್ತಿ ವಿಷ್ಣುವಿನ ಸ್ಥಿತಿ, ರುದ್ರನ ಲಯವನು ವಿಶ್ವ ತೈಜಸ ಪ್ರಾಜ್ಞರೆಂಬ ಜೀವತ್ರಯವನು ತಮೋ ರಜೋ ತತ್ವವನು ಜಾಗ್ರತ್ ಸ್ವಪ್ನ ಸುಷುಪ್ತಿ ಅವಸ್ಥೆಗಳನು ಆಣವ ಮಲ ಮಾಯಾ ಮಲ ಕಾರ್ಮಿಕ ಮಲವೆಂಬ ತನುತ್ರಯಗಳನು ಮಾಯಾ ಕರಣೇಂದ್ರಿಯ ಕರ್ಮೇಂದ್ರಿಯ ಜ್ಞಾನೇಂದ್ರಿಯ ತನುತ್ರಯಗಳೆಂಬ ತ್ರಿಭೇದಂಗಳನು ವೇಧಾದೀಕ್ಷೆ ಮಂತ್ರ ದೀಕ್ಷೆ ಕ್ರಿಯಾದೀಕ್ಷೆ ಎಂಬ ದೀಕ್ಷಾತ್ರಯಗಳಿಂದ ಬ್ರಹ್ಮನ ಉತ್ಪತ್ಯವನಳಿದು ಶ್ರೀಗುರುವಿನ ಕರಗರ್ಭದಲ್ಲಿ ಉದಯವಾಗಿ ವಿಷ್ಣುವಿನ ಸ್ಥಿತಿಯನಳಿದು ಮಹಾಲಿಂಗ ಸ್ಥಿತಿಯಾಗಿ ರುದ್ರನ ಲಯವನಳಿದು ಜಂಗಮದಲ್ಲಿ ಲೀಯವಾಗಿ ಜಾಗ್ರದವಸ್ಥೆಯಳಿದು ಶಿವಜಾತನಾಗಿ ಸುಷುಪ್ತಿಯಳಿದು ಲಿಂಗ ಸದ್ಭಾವನನಾಗಿ ರಜೋಗುಣವಳಿದು ಉಕಾರ ಸ್ವರೂಪನಾಗಿ ಸತ್ವಗುಣವಳಿದು ಅಕಾರ ಸ್ವರೂಪನಾಗಿ ತಮೋಗುಣವಳಿದು ಮಕಾರ ಸ್ವರೂಪನಾಗಿ ಆಣವ ಮಲವಳಿದು ಶಿವಜ್ಞಾನವಾಗಿ ಮಾಯೆಯಳಿದು ಭಕ್ತಜನ ಬಾಂಧವ್ಯವಾಗಿ ಕಾರ್ಮಿಕ ಮಲವಳಿದು ತನು ಮನ ಧನ ಮೊದಲಾದ ದ್ರವ್ಯ ಜಂಗಮ ದಾಸೋಹವಾಗಿ ಕರ್ಮೇಂದ್ರಿಯವಳಿದು ಆಚಾರಲಿಂಗ ಪಂಚಕವಾಗಿ ಜ್ಞಾನೇಂದ್ರಿಯವಳಿದು ಶಿವಲಿಂಗ ಪಂಚಕವಾಗಿ ತನುತ್ರಯವಳಿದು ಪ್ರಸಾದಲಿಂಗ ಪಂಚಕವಾಗಿ ವಿಶ್ವಜೀವವಳಿದು ಇಷ್ಟಲಿಂಗವಾಗಿ ತೈಜಸಜೀವವಳಿದು ಪ್ರಾಣಲಿಂಗವಾಗಿ ಪ್ರಾಜ್ಞಜೀವವಳಿದು ಭಾವಲಿಂಗವಾಗುವ ಹಾಗೆ ಜ್ಞಾನ ಭಸ್ಮ

ದಿಂದ ದಹಿಸಿ ಚಿದ್ಬಿಂದುವಪ್ಪ ಮಹಾ ಕಳೆಯುನೇ ಕರತಳಾಮಳಕವಾಗಿ
ಇಷ್ಟಲಿಂಗದಲ್ಲಿ ಸ್ಥಾಪಿಸಿ ಧಾರಣವನ್ನು ಮಾಡಿದನೆಂಬುದೀಗ ಆಣವಾದಿ
ಮಲತ್ರಯಂಗಳ ದೋಷವ ಕಳೆದು ಶುದ್ಧಾತ್ಮನ ಮಾಡಿ ವಿಭೂತಿ
ಪಟ್ಟವಂ ಕಟ್ಟಿ ಪಂಚಕಲಶೋದಕದಿಂದಭಿಷೇಕ ಮಾಡಿ ಪಂಚಾ
ಕ್ಷರಿಯನುಪದೇಶಿಸಿ ಅಂಗದ ಮೇಲೆ ಲಿಂಗವ ಧರಿಸಿದನಯ್ಯಾ ಎಂಬು
ದರ್ಥ. ಈ ಪ್ರಕಾರವಾಗಲು ಚಿದಂಗವೇ ತನ್ನಂಗವಾಗಿ ಚಿದ್ಘನಲಿಂ
ಗವೇ ತನಗೆ ಪ್ರಾಣವಾಗಿ ಜೀವನ್ಮುಕ್ತನಾದನಯ್ಯಾ ಎಂಬುದೀಗ
ಇಂತಾದ ಬಳಿಕ ಕಾಯವೇ ಶಿವ ಕಾಯವಾಗಿ ಪ್ರಾಣವೇ ಪರಶಿವನಾ
ಯಿತ್ತು. ಇನ್ನು ಶ್ರೀ ಗುರುವಿನುಪದೇಶದಿಂದ ಸದ್ಯೋನ್ಮುಕ್ತನಾದೆ
ನಯ್ಯಾ ಎಲೇ ಪರಶಿವಲಿಂಗವೇ ಎಂಬುದರ್ಥ.

ಮುಂದೆ ದೀಕ್ಷಾ ಗುರುವಿನಿಂದ ಇಷ್ಟಲಿಂಗವ ಪಡೆದು ಜ್ಞಾನ
ಗುರುವಿನ ಉಪದೇಶವ ಪೇಳುತಿರ್ದನು.

(೯) ಚೌಪೀಠ ಮಂಟಪದಲ್ಲಿ ಗುರು ಕುಳ್ಳಿರ್ದು, ದ್ವಿದಳ ಮಂಟಪ
ದಲ್ಲಿರ್ದ ಶಿಷ್ಯಂಗೆ ತ್ರಿಕೂಟಸ್ಥಾನದ ಲಿಂಗವನುಪದೇಶಿಸಿ ತೋರಿದ ಗುರು
ಲಿಂಗದೊಳಗಾದನು. ಇದು ಕರ ಚೋದ್ಯ ನೋಡಾ. ಶಿಷ್ಯ ಲಿಂಗವ
ಗ್ರಹಿಸಿ ಲಿಂಗವಾದ ಪರಿಯನು ಇತರರ್ಗೆ ಅರಿಯ ಬಾರದು. ಜ್ಞಾನೋ
ಪದೇಶದ ಬಗೆಯನು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ
ಶರಣನು ಬಲ್ಲನು.

ಟೀಕು.— "ಶಬ್ದದ್ವಾರಗತೇ ಯತ್ರ ಗಂಧದ್ವಾರೇ ತಥೈವಚ ।
ಸಮಯೋಗ ಚತುಃಪೀಠ ಶೃಂಗಾಟಕ ಸೂತ್ರಜ್ಞಕಂ" ಎಂಬುದಾಗಿ
ಶಬ್ದದ್ವಾರ ಎರಡೂ ಆವುದಾನೊಂದು ಸ್ಥಾನದಲ್ಲಿ ಕೂಡುತಿರ್ದವೋ
ಆ ಮಹಾ ಬಿಂದುವಿನ ಸ್ಥಾನವೇ ಚತುಃ ಪೀಠವೆನಿಸಿ ಕೊಂಬುವುದಾದ
ಕಾರಣ ಬಿಂದು ಪೀಠದ ಮೇಲೆ ಅನಾಹತ ನಾದವೆಡೆಬಿಡದೆ ಇರುತ್ತಿ
ಹುದು. ಆ ಮಹಾ ಬಿಂದುವಿನ ಸ್ಥಾನವೇ ಚತುಃ ಪೀಠವೆನಿಸಿಕೊ
ಳ್ಳುವದಾದ ಕಾರಣ ಬಿಂದು ಪೀಠದ ಮೇಲೆ ಅನಾಹತ ನಾದವೆಡಬಿ
ಡದಿರ್ದುದಾಗಿ ಆ ನಾದವೇ ಶುದ್ಧ ಪ್ರಸಾದವೆಂಬಾಚಾರ್ಯನು ಶಾಶ್ವತ
ಸಿದ್ಧನಾಗಿದ್ದಾನೆಂಬುದಿಗ ಚೌಪೀಠ ಮಂಟಪದಲ್ಲಿ ಶ್ರೀ ಗುರು ಕುಳ್ಳಿ



ರ್ದನೆಂಬುದರ್ಥ. ಆತ್ಮನು ಜಾಗ್ರತಾವಸ್ಥೆಯಲ್ಲಿ ಲೋಚನಾಗ್ರದಲ್ಲಿರುವ
ದರಿಂದ ಎರಡು ನೇತ್ರಂಗಳು ಎರಡು ದಳ ಆ ಉಭಯ ದಳದ ಮಧ್ಯದಲ್ಲಿ
ಹಂಸನೆಂಬ ಶಿಷ್ಯನು ಆ ಶ್ರೀ ಗುರುವೇ ಇದರ ಮುಖವಾಗಿರ್ದ ಎಂಬು
ದೀಗ ದ್ವಿದಳ ಮಂಟಪದಲ್ಲಿರ್ದ ಶಿಷ್ಯಂಗೆ ಎಂಬುದರ್ಥ. ಹಂಸ ಎಂಬ
ಕ್ಷರಂಗಳೆರಡು ಆವ ಕಾಲದಲ್ಲಿ ತ್ರಿವೇಣೀ ಸಂಗಮವೆನಿಸುವ ಭ್ರೂಮಧ್ಯ
ಸ್ಥಾನದಲ್ಲಿ ವರ್ಣಾಕಾರವರಿದಪ್ಪುದಾ ಕಾಲದಲ್ಲಿ ಮಂತ್ರ ಶಬ್ದವೇ ನಾದಾ
ತ್ಮಕ ಪ್ರಾಣಾಯಾಮವಪ್ಪುದಂತೆನೆ ಪ್ರಾಣಾಯಾಮ ರೂಪದಿಂದ ಆತ್ಮ
ವಾಚಕ ರೇಚಕದಲ್ಲಿ ಚರಿಸುವ ಸಕಾರವುಳ್ಳ ಹಂಸ ಮಂತ್ರವು ನಿವೃತ್ತಿ
ಮುಖದಿಂ ಕಾರ್ಯರೂಪವಳಿದು ಕಾರಣರೂಪವಹುದಾಗಿ ಆ ಮಂತ್ರಾ
ಕ್ಷರಂಗಳನೇ ಗುರೂಪದೇಶದಿಂ ಸೋಹಂ ಎಂದು ಎಂತೈಯ್ಯಾ ಎಂದಡೆ
ವೈಕೃತ ಪ್ರಾಣಾಯಾಮ ರೂಪಮಂ ಮಾಡಿ ಮೇಲಕ್ಷರದ್ವಯ ಸ್ವರೂ
ಪಮಂ ಪರೀಕ್ಷಿಸಿ ಸೋಹಂ ಎಂದು ವ್ಯಂಜನವಂ ಮಾಡಿ ಯವಲೋ
ಪಿತ ಉಳಿದ ಸ್ವರಸಂಧಿಗೆಯ್ದು, ಆ ಬಿಂದುವಿನೊಡಗೂಡಲಾಗಿ ಓಂ ಎಂಬ
ನಾದಾತ್ಮಕ ಪ್ರಣವಮಾಯಿತು. ಆ ಪ್ರಣವಮಂ ಸಿನ್ನ ಪ್ರಾಣಲಿಂಗ
ವೆಂದು ಬೋಧಿಸಿದನಾಗಿ ಅದೀಗ ತ್ರಿಕೂಟಸ್ಥಾನದ ಲಿಂಗವನುಪದೇಶಿಸಿ
ದನೆಂಬುದಕ್ಕರ್ಥ. ಓಂ, ಓಂ, ಎಂಬ ನಾದಾತ್ಮಕ ಪ್ರಣವುದಲ್ಲಿ ಹಂಕಾರ
ಸ್ವರೂಪನಾದ ಗುರುವು ಸಮರಸವಾದುದು. ಅದು ಹೇಗೆ ಎಂದಡೆ ವೈದಿ
ಕದಲ್ಲಿ ಓಂಕಾರವನೆ ಪರವೆಂದು ಹೇಳುವರು. ತಾಂತ್ರಿಕದಲ್ಲಿ ಹಕಾ
ರವನೆ ಪರವೆಂದು ಹೇಳುವರು. ಆದರಿಂದೆಂಬರು. ಅದು ಅಲ್ಲದೆ ಬ
ಎಂಬ ನಾದಾತ್ಮಕ ಪ್ರಣವುದಲ್ಲಿ ಇಬ್ಭಾಗವಾದಲ್ಲಿ ಅಕಾರವೇ ಉಕಾರ
ದಲ್ಲಿ ಅಡಗಿಸಿ ಆ ಉಕಾರವನೇ ಬಿಂದುವಿನಲ್ಲಿ ಅಡಗಿಸಿ ಬಿಂದು ಶೂನ್ಯ
ಮಾಗಲು ಆ ಶೂನ್ಯವೆಂಬುದು ಮಹಾ ಬಯಲೇ ಹಕಾರ, ಅಂತಪ್ಪ
ಹಕಾರವು ಬಕಾರದಲ್ಲಿ ಅಡಗಿಪ್ಪುದು ಎಂಬುದೀಗ ತೋರಿದ ಗುರು
ಲಿಂಗ ಲಿಂಗದೊಳಗಾದನು. ಇದು ಕರಚೋದ್ಯ ನೋಡಾ ಎಂಬ ಶಬ್ದ
ಕ್ಕರ್ಥ. ಹಂಸರೂಪಾದ ಶಿಷ್ಯನು ಓಂ ಎಂಬ ಮಹಾಲಿಂಗವನು ಸೋಹಂ
ಭಾವದಿಂ ಹಿಡಿದು ಆ ಸೋಹಂ ಭಾವದ ನೆನಹು ನಿಷ್ಫಲವಾಗಿ, ನೀರು
ನೀರು, ಕ್ಷೀರ ಕ್ಷೀರ, ಶಿಖಿ ಕರ್ಪುರ, ಮಾರುತಾಂಬುಪಿನಂತೆ, ನಾದಾ
ತ್ಮಕ ಲಿಂಗದಲಿ ತಾನಿದಿರೆಂಬ ನುಡಿಗೆಡೆಗೊಡದೆ ಹಕಾರ ಸ್ವರೂಪವಾದ
ಗುರು ಓಂಕಾರ ಸ್ವರೂಪವಾದ ಲಿಂಗ ಹಂಸ ಸ್ವರೂಪವಾದ ಶಿಷ್ಯನೊ
ಬ್ಬನು ತೋರದೆ ಜ್ಞಾನ, ನಿಷ್ಕ್ರಿಯದ ಭೇದವನು ಬ್ರಹ್ಮದ ಸ್ಥಾನ

ವನು ತಿಳಿದು ಅಲ್ಲಿ ಲಕ್ಷ್ಯವಿಟ್ಟು ನೋಡಿ ಕಂಡೆನೆಂಬವರರಿವಿಗೆ ಈ ಗುರು
ಶಿಷ್ಯರ ಸಮರಸ ಎಂದೆಂದು ಕಾಣಬಾರದೆಂಬುದೀಗ ಶಿಷ್ಯ ಲಿಂಗ ಗ್ರಹಿಸಿ
ಲಿಂಗವಾದ ಪರಿಯನು ಇತರರಿಗರಿಯಬಾರದು ಎಂಬುದರ್ಥ. ಮೂಲ
ಜ್ಞಾನ ಚಿತ್ತು ನಿಷ್ಕಲ ಬ್ರಹ್ಮದಲ್ಲಿ ಕೂಡಿದಾಗ ಜ್ಞಾನ ನಿಷ್ಪತ್ತಿ ದೃಷ್ಟಿ,
ಎಂಬ ಅತೀಂದ್ರಿಯವನು ಶಿವಯೋಗಿ ಒಬ್ಬ ಬಲ್ಲನೆಂಬುದೀಗ ಜ್ಞಾನೋ
ಪದೇಶದ ಬಗೆಯನು ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣ
ಬಲ್ಲನೆಂಬುದರ್ಥ.

ಮತ್ತೆಯೂ ಶ್ರೀಗುರೂಪದೇಶವನೇ ಉದ್ಧರಿಸುತಿರ್ದಪಂ.

(೧೦) ಗುರುವಿನ ಹಸ್ತಸರೋಜಗರ್ಭ ಮಧ್ಯದಲ್ಲಿ ಹುಟ್ಟಿದ ಶಿಷ್ಯನೆಂಬ
ಸತಿಯುಂ ಶ್ರೀಗುರುವಿನ ಸದ್ಭಾವ ಗರ್ಭ ಮಧ್ಯದಲ್ಲಿ ಹುಟ್ಟಿದ ಲಿಂಗ
ವೆಂಬ ಪತಿಯು ಸಹೋದರ ಸಂಬಂಧದಿಂದಿದ್ದರಾಗಿ ಶರಣಸತಿ ಲಿಂಗ
ಪತಿಯಾದ ಪರಿ ಹೊಸತು, ಇದು ವಿಪರೀತ ನೋಡಾ. ಸತಿಪತಿ
ಗಳಿಬ್ಬರು ಹೆತ್ತವರ ಕೊಂದು ತಾವು ಸತ್ತರು. ಇವರೀರ್ವರೂ ಸತ್ತ
ಠಾವನರಿದೆನೆಂದಡೆ ಆರಿಗೂ ಅಸದಳ ನಿಜಗುರು ಸ್ವತಂತ್ರ ಸಿದ್ಧ
ಲಿಂಗೇಶ್ವರಾ.

ಟೀಕು:-- ಶ್ರೀಗುರುವಿನ ಹಸ್ತಮಸ್ತಕ ಸಂಯೋಗಕಾಲ ಶಿಷ್ಯನಿಗೆ
ಜನನಕಾಲವಾದ ಕಾರಣ ಶ್ರೀಗುರುವಿನ ಹಸ್ತ ಸರೋಜಗರ್ಭ ಮಧ್ಯ
ದಲ್ಲಿ ಹುಟ್ಟಿದ ಶಿಷ್ಯನೇ ಸತಿ ಎಂಬುದರ್ಥ. ಶ್ರೀಗುರುವಿನ ಸದ್ಭಾವ
ಗರ್ಭ ಮಧ್ಯದಲ್ಲಿ ಹುಟ್ಟಿದ ಲಿಂಗವೆಂಬ ಪತಿಯು ಎಂಬುದರ್ಥ. ಒಬ್ಬ
ಗುರುವಿನಲ್ಲಿ ಹುಟ್ಟಿದ ಕಾರಣ ಸಹೋದರ ಸಂಬಂಧದಿಂದಿದ್ದರಾಗಿ
ಎಂಬುದರ್ಥ. ಶಿಷ್ಯನೂ ಲಿಂಗವೂ ನೋಟ ಬೇಟವ ಮಾಡಿ ಕೂಟಕ್ಕೆ
ಎಳಸಿ ಸತಿಪತಿಗಳಾಗಿ ನಡೆದರು ಎಂಬುದೀಗ ಶರಣಸತಿ ಲಿಂಗಪತಿ
ಯಾದ ಪರಿ ಹೊಸತು ಎಂಬುದರ್ಥ. ಗುರುವಿನಲ್ಲಿ ಹುಟ್ಟಿದ ಶಿಷ್ಯನು
ಲಿಂಗವೂ ಭ್ರಾಂತ ತನುಜಭವರಾಗಿರ್ದು ಕಾಲಾಂತರದಿಂ ಸತಿಪತಿಗಳಾಗಿ
ನಡೆದರೆ ಆತನ ನಡತೆಯು ಪಾರಮಾರ್ಥಕ್ಕೆ ಸರಿಯಾದರೂ ಲೌಕಿಕಕ್ಕೆ
ವಿರೋಧವಾದ ಕಾರಣ ಇಂದು ವಿಪರೀತ ಎಂಬುದರ್ಥ. ಶಿಷ್ಯನೂ
ಲಿಂಗವೂ ನೋಟ ಬೇಟವ ಮಾಡಿ ಕೂಡುವ ಪರಿ ಹೇಗೆಂದರೆ-- ಚಂದ್ರ
ಸೂರ್ಯರೆನಿಸುವ ವಾಮದಕ್ಷಿಣ ನೇತ್ರಗಳ ಮಧ್ಯದಲ್ಲಿ ಇತರ ಕಂಗಳು
ಅಧೋಮುಖವಾಗಿ ಮನಸ್ಸಿನ ವ್ಯಾಪಾರ ಊರ್ಧ್ವ ಮುಖವ ಮಾಡಿ



ಮಹಾಯೋಗವಸಿವುದಾದ ಕಾರಣ ಹಂ ಎಂಬ ಪಾರಮಾರ್ಥವಾಚ
ಕವನುಳ್ಳ ದಕ್ಷಿಣ ಜ್ಯೋತಿಮಂಡಲದಲ್ಲಿ ಪ್ರತ್ಯಕ್ಷವಾಗಿ ಇಷ್ಟ ಲಿಂಗ
ವೆಂಬ ಪತಿಯು ಸಃ ಎಂಬ ಜೀವಾತ್ಮಕ ವಾಚಕವನುಳ್ಳ ವಾಮ
ಜ್ಯೋತಿ ಮಂಡಲದಲ್ಲಿ ಪ್ರತ್ಯಕ್ಷವಾಗಿರ್ಪ ಶಿಷ್ಯನೆಂಬ ಸತಿಯು ಆ ಸತಿ
ಪತಿಗಳು ಕೂಡಿರ್ದ ಪ್ರಸಾದವೆಂಬ ಗುರುರೂಪು ತಾನೇ ಆಗಿ ಉಭಯ
ರೂಪಗಳು ಸಕಲ ಪ್ರಾಣಿಗಳಿಗೆ ಮೂಲ ಚೈತನ್ಯವಾದ ನಾದಾತ್ಮಕ
'ಓಂ' ಎಂಬ ಚಿದಾಕಾಶದಲ್ಲಿ ಲಯವಾದರು ಎಂದು ತಾವು ಸತ್ತರು
ಎಂಬ ಶಬ್ದಕ್ಕರ್ಥ. ಹಂ ಸಃ ಎಂಬ ಶಿಷ್ಯನು ಲಿಂಗವೂ ಹಕಾರ
ಪ್ರಣಮಸ್ವರೂಪವುಪ್ಪ ಗುರು ಇವರು ಚಿದಾಕಾಶದಲ್ಲಿ ಹುಟ್ಟಿ ಚಿದಾ
ಕಾಶದಲ್ಲಿ ಲಯ ವಾದರು ಎಂಬುದೀಗ ಚಿದಾಕಾಶವು ಆರಿಗೂ ಕಾಣ
ಬಾರದೆಂದಡೆ ಒಬ್ಬಾನೊಬ್ಬ ಮನುಷ್ಯನು ದೂರದ ಗ್ರಾಮದ ವಾರ್ತೆ
ಯನ್ನು ಕೇಳಿ ಆ ಗ್ರಾಮಕ್ಕೆ ಹೋದನೆಂದು ನೆನೆದಡೆ ಆ ಗ್ರಾಮಕ್ಕೆ
ಹೊಕ್ಕ ಹಾಗೆ ಇರುವದು. ಹಾಗೆ ಚಿದಾಕಾಶವು ತನ್ನಂಗೆ ಮಾಡಿ
ಕೊಂಡು ಜ್ಞಾನಕ್ರಿಯೆಗಳಿಂದ ಆಚರಿಸಿದಲ್ಲದೆ ಚಿದಾಕಾಶವು ತಾನೇನಾ
ಗಬಾರದೆಂಬುದೀಗ ಇವರೀರ್ವರೂ ಸತ್ತ ಠಾವನರಿದೆನೆಂದಡೆ ಆರಿಗೂ ಅಸ
ದಳ ಎಂಬುದರ್ಥ. ಶ್ರೀಗುರು ಕರುಣದಿಂದ ಜ್ಞಾನೋದಯ ತನ್ನೊ
ಳಗಂಗಲಿಂಗವ ತಿಳಿದು ಆಚರಿಸಿದ ಶರಣ ಒಬ್ಬ ಬಲ್ಲನೆಂಬುದೀಗ ನಿಜ
ಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಅವರು ಸತ್ತ ಠಾವ ನೀವೇ ಬಲ್ಲಿರಿ
ಎಂಬುದರ್ಥ.

ಮುಂದೆ ಜ್ಞಾನಗುರುವಿನುಪದೇಶವನೇ ಹೇಳಿ ಹಂಸಃ ಎಂಬ ಜೀವ
ಜಪವಳಿದು ಸೋಹಂ ಎಂಬ ಮಂತ್ರದ ನಿಲವನು ನಾದಾತ್ಮಕ ಲಿಂಗ
ದಲ್ಲಿ ಕೂಡುವುದೇ ಮಂತ್ರಯೋಗವೆಂದು ಪೇಳುತ್ತಿರ್ದಪಂ.

(೧೧) ಕಾಯದ ಸ್ಥಿತಿಗತಿಯನರಿದು ಕಾಯವ ಶೋಧಿಸಿ ಮುಂದೆ
ಸಾಧಿಸಿಕೊಳ್ಳಿರಣ್ಣಾ. ದೇಹ ಮಧ್ಯದ ಪರಮ ಪ್ರಕೃತಿಯಲ್ಲಿ ಪ್ರಾಣ
ವಾಯು ಹುಟ್ಟಿ ಅಲ್ಲಿಂದ ಲಂಬಿಕಾಸ್ಥಾನವ ತಾಗಿ ಸಕಾರಾಂತವಾಗಿ
ನಿವೃತ್ತಿ ಪ್ರವೃತ್ತಿಯಾಗಿ ಚರಿಸುವದು. ಅಲ್ಲಿಂದ ಇಪ್ಪತ್ತೊಂದು ಸಾವಿ
ರದ ಆರು ನೂರು ಜೀವ ಜಪಿಸುವುದು. ಶ್ರೀ ಗುರೂಪದೇಶದಿಂದರಿ
ದಡೆ ಅಂತ್ಯ ಆದಿಯಾಗಿ ಆದಿ ಅಂತ್ಯವಾಗಿ ನಡೆದು ಅಜಪವೆನಿಸಿತ್ತು.

ಅಜಪ ದಹರಾಕಾಶದ ನಾದಾತ್ಮಕ ಲಿಂಗದಲ್ಲಿ ಕೂಡಿದುದೇ ಶ್ರೀ ಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಮಂತ್ರಯೋಗವು.

ಟೀಕು.— ಗ್ರಂಥ "ಜಾತಸ್ಯ ಮರಣಂ ಧೃವಂ। ಮೃತಸ್ಯ ಜನನಂ ಧೃವಂ" ಎಂದು ರೇತ ರಕ್ತವು ಕೂಡಿ ಜನನಿಯು ಜಠರದಲ್ಲಿ ಬಲಿದು ಪಿಂಡ ಉಂಟೆಂಬ ಹುಟ್ಟಿದ್ದೀತೆಂಬ ಹೆಚ್ಚಲುದ್ಯೋಗಿಸುತ್ತಿದ್ದೀತೆಂಬ ಹೆಚ್ಚುತ್ತಿದ್ದೀತೆಂಬ ಕೆಡಲು ಕೆಡಲುದ್ಯೋಗಿಸುತ್ತಿದ್ದೀತೆಂಬ ಕೆಡುತ್ತಿದ್ದೀತೆಂಬ ಷಡ್ಭಾವ ವಿಕಾರಗಳಿಂದೆ ಸತ್ತು ಮರಳಿ ಮರಳಿ ಎಂಬರ್ಥ. ಕಂಗೊಳಿರ್ದ ಕಸವ ತೆಗೆದು ನೋಡುತ್ತಿದ್ದನಲ್ಲಾ ಎಂಬುದೀಗ ಕಾಯದ ಸ್ಥಿತಿ ಗತಿಯನರಿದು ಎಂಬುದರ್ಥ. ಕಂಗೊಳಿರ್ದ ಕಸವ ತೆಗೆದು ನೋಡಲು ಬಾಧೆ ತೊಲಗುವಂತೆ ಈ ಮಲ ಭಾಂಡದ ೨೫ ತತ್ವಗಳನ್ನು ಅಲಿಗಳಿದು ಬಿಟ್ಟು ಮತ್ತೆ ವಿಧಿಮುಖದಿಂದೆ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣವೆಂಬ ಪಂಚಪದಲಕ್ಷಿತವಾದ ನಿಷ್ಕಲ ಬ್ರಹ್ಮ ತಾನೋರ್ವನೇ ಎಂದು ತಿಳಿದು ತಾ ಶೋಧಿಸಿ ಮುಂದೆ ಸಾಧಿಸಿಕೊಳ್ಳಿರಣ್ಣಾ ಎಂಬುದರ್ಥ. ಆ ನಿಷ್ಕಲಬ್ರಹ್ಮವು ತಾನೆಂದು ತಿಳಿಯಬೇಕಾದರೆ ತೊಂಭತ್ತಾರಂಗುಲದ್ವಯದ ಮೇಲೆ ಲಿಂಗಸ್ಥಾನದಂಗುಲದಿಂ ಕೆಳಕ್ಕೆ ಮಧ್ಯಮಾರ್ಧೇಕಾಂಗುಲಿ ಪ್ರಮಾಣವೇ ದೇಹ ಮಧ್ಯವೆನಿಸುದು. ಆ ದೇಹ ಮಧ್ಯದಲ್ಲಿ ಮೂಲ ಪ್ರಕೃತಿ ಎಂಬ ಆದಿಶಕ್ತಿಯಲ್ಲಿ ಪ್ರಾಣಸ್ವರೂಪವಾದ ವಾಯು ಪುಟವೆದ್ದು ಮೇಲಕ್ಕೆ ಬರುವಲ್ಲಿ ಮೂಲಕಂದಧೋ ರಂಧ್ರದಲ್ಲಿ ಕುಂಡಲಿಯು ಆ ಬಂದ ವಾಯುವ ಉಗುಳಿ ಆ ಉಗುಳಿದ ವಿಷದೊಡನೆ ವಾಯು ಕೂಡಿ ನಾಭಿಸ್ಥಾನಕ್ಕೆ ಬಂದು ಸುಷುಮ್ನ ನಾಡಿಯತಾಗಿ ಅಲ್ಲಿಂದ ರೇಚಕದಲ್ಲಿ ಪೊರಮಟ್ಟು ಹದಿನಾರಂಗುಲ ಪೊರಸೂಸಿ ಮರಳಿ ಪೂರಕದಿಂ ಪನ್ನೆರಡಂಗುಲ ಒಳಿಯಕ್ಕೆ ಪೋಗುವಲ್ಲಿ 'ಸಾಕಾರಾಂತವಿದಂ ಬೀಜಂ ಬಹಿರ್ಯಾತಿಸಬಿಂದುಕಂ ಸವಿಸರ್ಗಹಂಕಾರಂತು। ತದ್ಬೀಜಂ ಪಂಡಿತಾಖ್ಯದಃ॥' ಎಂದು ರೇಚಕದಲ್ಲಿ ಹಂ ಎಂದು ಸೂಸುವದು. ಪೂರಕದಲ್ಲಿ ಸಃ ಎಂದು ಒಳಿಯಕ್ಕೆ ಹೋಗುತ್ತ ಸೂರ್ಯೋದಯ ಕಾಲದಲ್ಲಿ ತೊಡಗಿ ಮರಳಿ ಸೂರ್ಯೋದಯ ಪರಿಯಂತರವಾಗಿ ವಿಶ್ವಾಸ ನಿಶ್ವಾಸವು ಇಪ್ಪತ್ತೊಂದು ಸಾವಿರದ ನೂರು ಎಣಿಸಿ ಹಂ ಸಃ ಎಂದು ಚರಿಸುವದನು ಶ್ರೀ ಗುರು ಉಪದೇಶದಿಂದಾದ್ಯಂತವಾಗಿ ಸೋಹಂ, ಸೋಹಂ, ಎಂಬ ಮಂತ್ರವಾಯುವನ್ನು ಚಿದಾಕಾಶ



ನಾದಾತ್ಮಕ ಲಿಂಗದಲ್ಲಿ ಓಂ ಎಂಬ ಮಹಾ ಬಯಲೊಳಗೆ ಲಯಮಾಡಿದೊಡೆ ಅದೇ ಸರ್ವ ಪ್ರಾಣಿಗಳೊಳಹೊರಗೆಲ್ಲಿಯು ಹೊದ್ದಿಸಿಕೊಂಡಿರುವದನು ಪ್ರತ್ಯಕ್ಷವಂ ಮಾಡಿಕೊಂಡಿರುವದೇ ಮಂತ್ರಕೂಟವೆಂಬುದೀಗ ದೇಹ ಮಧ್ಯ ಪರಪ್ರಕೃತಿಯಲ್ಲಿ ಪಾಣವಾಯು ತಾಗಿ ನಿವೃತ್ತಿ ಪ್ರವೃತ್ತಿಯಾಗಿ ಚರಿಸುವುದು. ಅಲ್ಲಿ ೨೧೬೦೦ ಜೀವ ಜಪವನು ಜಪಿಸುವದನು ಶ್ರೀಗುರೂಪದೇಶದಿಂದರಿದೊಡೆ ಅಂತ್ಯವಾದಿಯಾಗಿ ಆದಿ ಅಂತ್ಯವಾಗಿ ನಡೆದು ಆ ಜಪವೆನಿಸಿತ್ತು. ಆ ಜಪ ದಹರಾಕಾಶದ ನಾದಾತ್ಮಕ ಲಿಂಗದಲ್ಲಿ ಕೂಡಿದುದೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಮಂತ್ರಯೋಗವು ಎಂಬುದರ್ಥವು.

ಇಂತು ಶ್ರೀಗುರು ಶಿಷ್ಯ ಸಂಯೋಗ ಹೇಳಿದ ನಂತರದಲ್ಲಿ ಆ ಗುರು ಶಿಷ್ಯತ್ವವು ತನಗೆ ಅಳವಟ್ಟಿತೆಂದು ಪೇಳುತಿರ್ದಪೆಂ.

(೧೨) ಶ್ರೀಗುರುವ ಬೆಸಗೊಳಹೋದರೆ ಗುರುವೆನ್ನಂತರಂಗವನರಿದು ಜೀವ ಪರಮರೇಕವಮಾಡಿ ತೋರಿ ಕಾಯದ ಕಂಗಳಲ್ಲಿರಿಸಿ ಮನದ ಕೊನೆಯಲ್ಲಿ ನೆಲೆಗೊಳಿಸಿ ಸರ್ವಾಂಗದಲ್ಲಿಯೂ ಲಿಂಗ ಸಂಬಂಧವ ಮಾಡಿ ತೋರಿದನೈಯ್ಯ ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟೀಕುಃ— ಗುರುವಿನ ಕೈಯ್ಯಲುಪದೇಶವ ಪಡೆವೆನೆಂದು ಹೋದಲ್ಲಿ ಆ ಗುರು ಶಿಷ್ಯನ ಹೃದಯದಲ್ಲಿ ತಾನೇ ಬೋಧಾಸ್ವರೂಪನಾಗಿ ನಿಂತನು. ಅದೇಕೆಂದಡೆ ಅಂತರಂಗವೆಂದಡೆ ಲಿಂಗ ಶರೀರ. ಆ ಲಿಂಗ ಶರೀರನ್ನ ನಾಶವಲ್ಲದೆ ಆ ಆತ್ಮಂಗೆ ಮಹಾಲಿಂಗದ ಕೂಟವಿಲ್ಲವಾಗಿ ಆ ಲಿಂಗದ ಶರೀರದಲ್ಲಿ ಅನುಗ್ರಹ ಶಕ್ತಿ ಸ್ವರೂಪಿನಿಂದ ಶ್ರೀಗುರುವೈದಿಹನೆಂಬುದೀಗ ಗುರು ಬೆಸಗೊಳಹೋದರೆ ಗುರುವೆನ್ನ ಅಂತರಂಗವನರಿದು ಎಂಬುದರ್ಥ. ಹೀಗೆ ಗೆದ್ದಲೆ ಮಾಡಿದ ಹುತ್ತದೊಳಗೆ ಸರ್ಪ ಸೇರಿದ ಪರಿ ಹಾಗೆ ಜೀವನದ ಮನೆಯು ಲಿಂಗ ಶರೀರದಲ್ಲಿ ಅನುಗ್ರಹಶಕ್ತಿ ನೆಲೆಗೊಳ್ಳಲು ಆ ವಿವೇಕವೇ ಸೋಹಂ ಸ್ವರೂಪವಾದಡೆ ಪರಮಾತ್ಮನು ಆ ಲಿಂಗ ಶರೀರದ ವಿವೇಕವೇ ಹಂಸ ಸ್ವರೂಪು. ಈ ಉಭಯ ವಿವೇಕ ಮಧ್ಯದಲ್ಲಿ ಜ್ಞಾನಾಗ್ನಿಯು ಗುರುವಾಜ್ಞೆಯಿಂದ ಪುಟ್ಟಿ ಆ ಅಗ್ನಿ ಉಭಯಕಾಷ್ಠವನು ಸುಟ್ಟು ತಾನುಪಶಮನವಾಗುವದು ಹೇಗೋ ಹಾಗೆ ಜೀವ ಪರಮರ ವಿವೇಕವನ್ನುಟ್ಟು ತಾನುಪಶಮನವಾಗುವದು. ಅದೀಗ ಜೀವ ಪರಮರ ಏಕ

ಮಾಡಿ ತೋರಿದನೆಂಬರ್ಥ. ಆ ಉಪಶಮನವಾದ ಅಗ್ನಿ ಯದೃಷ್ಟಂ ತನ್ನಷ್ಟಂ ಎಂದು ಆ ಗುರುವೆಂಬ ಶುದ್ಧ ಪ್ರಸಾದ ಮಹಾಬಯಲು ಕೂಡಿತ್ತು. ಆ ಮಹದಾಕಾರವೇ ತಾನೆಂದು ತಿಳಿದ ಶಿಷ್ಯನ ವಾಮದಕ್ಷಿಣ ನೇತ್ರಂಗಳು ಜೀವಪರಮರಾಗಿ ಪ್ರತ್ಯಕ್ಷದಿಂದ ಈರ್ವರೂ ಆತನ ಮನದಗ್ರದಲ್ಲಿ ಆ ಜೀವಪರಮರ ಕೂಟವೇ ಸಿದ್ಧವಾಗಿಹುದು. ಇಂತಾಗಲು ಆಪಾದಮಸ್ತಕದೊಳ ಹೊರಗೆಲ್ಲಿಯೂ ಶುದ್ಧ ಪ್ರಸಾದವೆಡೆಗೊಂಡು ಘಟಿಕಾಸಿದ್ಧಿಯ ಪ್ರಕಾಶದ ಹಾಗೆ ಮಾಡಿ ಕಾಣಿಸಿದನೆಂಬುದೀಗ ಜೀವಪರಮರ ಏಕ ಮಾಡಿ ಕಾಯದ ಕಂಗಳಲ್ಲಿಯೂ ಲಿಂಗ ಸಂಬಂಧವ ಮಾಡಿ ತೋರಿದನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಜ್ಞಾನಗುರು ಕೊಟ್ಟ ಲಿಂಗವಾವುದು ಎಂದಡೆ ಹೇಳುತ್ತಿದ್ದನು.

(೧೩) ಹುಸಿ ಇಲ್ಲದ ಶಿಷ್ಯನು ಮರಹಿಲ್ಲದ ಗುರುವಿನ ಪಾದವ ಹಿಡಿದೊಡೆ ಕುರುಹಿಲ್ಲದ ಲಿಂಗವ ಕೊಡಲಿಕ್ಕಾಗಿ ತೆರಹಿಲ್ಲದಿಪ್ಪಲೊಡನೆ ಬರಿದಾದವು ತನುಮನ ಪ್ರಾಣಂಗಳೆಲ್ಲವು. ಈ ಬೆಡಗಿನುಪದೇಶವ ಪಡೆದ ಶಿಷ್ಯನಲ್ಲಿ ಗುರುವಡಗಿ ಗುರು ಶಿಷ್ಯನಾಗಿ ಎರಡು ಒಂದಾದ ಪರಿಯನು ಏನೆಂದುಪಮಿಸುವೆನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಒಂದಾದ ಗುರು ಶಿಷ್ಯನು ?

ಟೀಕು:— ಹುಸಿ ಎಂದಡೆ ಪಂಚಭೂತದಿಂ ಪಂಚೀಕರಿಸಿದ ತನು, ಆ ತನುವ ಆತಿಗಳೆಯುತಿದ್ದ ಕಾರಣ ಅಂಥ ತನುವಿಲ್ಲದಾತ ಶಿಷ್ಯನೆಂಬುದರ್ಥ. ಮರವೆ ಎಂದಡೆ ಸ್ಥೂಲ ಸೂಕ್ಷ್ಮ ಶರೀರವೆರಡನು ಹುಟ್ಟಿಸಿ ತನ್ನ ತೋರದಿಹುದಾದ ಕಾರಣ ಶರೀರ. ಅಂಥ ಶರೀರವಿಲ್ಲದಾತನೇ ಗುರುವೆಂಬುದೀಗ ಮರಹಿಲ್ಲದ ಗುರುವಿನ ಪಾದವ ಹಿಡಿದಡೆ ಎಂಬುದಕ್ಕರ್ಥ. ಬಚ್ಚ ಬರಿಯ ಅರಿವನೇ ಘನಲಿಂಗವೆಂದು ತೋರಿದನಾಗಿ ಆ ಲಿಂಗ ಗ್ರಹಿಸಬೇಕಾದಡೆ ಸಚ್ಚಿದಾನಂದ ನಿತ್ಯ ಪರಿಪೂರ್ಣ ತಾನಾದವಂಗಲ್ಲದಾಗದಾಗಿ ಅದೀಗ ಕುರುಹಿಲ್ಲದ ಲಿಂಗವ ಕೊಡಲಿಕ್ಕಾಗಿ ತೆರಹಿಲ್ಲದಪ್ಪಲೊಡನೆ ಎಂಬುದಕ್ಕರ್ಥ. ಈ ಬಗೆಯ ಉಪದೇಶವ ಕೊಂಡ ಶಿಷ್ಯನು ತಾನೇ ಗುರುವಾಗಿ ಗುರುವಾದನೆಂದು ಇದಿರಿಟ್ಟು ನೋಡದೆ ಇದ್ದು ತನುಮನದ ಪ್ರಪಂಚ ಮುನ್ನವೇ ನಾಸ್ತಿಯಾಗಿ ಬಯಲೊಳಗೆ ಬಯಲಾಗಿ ಆಕಾಶ ಪ್ರಕಾಶ ಯೋಗವಾದಂತೆ ಇದ್ದರೆಂಬು



ದೀಗ ಬರಿದಾದವು ತನುಮನ ಪ್ರಾಣಂಗಳೆಲ್ಲವು ಈ ಬೆಡಗಿನುಪದೇಶವಂ ಪಡೆದ ಶಿಷ್ಯನಲ್ಲಿ ಗುರುವಡಗಿ ಗುರು ಶಿಷ್ಯನಾಗಿ ಎರಡು ಒಂದಾದ ಪರಿಯನು ಏನೆಂದುಪಮಿಸುವೆನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಒಂದಾದ ಗುರು ಶಿಷ್ಯನು ಎಂಬುದಕ್ಕರ್ಥ.

ಗುರು ಮುಖದಿಂ ಬಂದ ಲಿಂಗವು ಪ್ರಣವ ರೂಪಿನಿಂದೆ ಧ್ಯಾನಿಸು ಎಂದು ಪೇಳುತ್ತಿರ್ದಪಂ.

(೧೪) ಆದಿ ಬಿಂದು ಬೀಜವನರಿದು ಬಿಂದುಪರಿ ಅನಾಹತ ನಾದವನರಿದು ಆ ಪ್ರಣವದ ಸೂತ್ರವಿಡಿದು ಶಿವಧ್ಯಾನವ ಮಾಡಲು ಆ ಧ್ಯಾನಾಗ್ನಿಯಿಂದ ಯೋಜನಾಂತರ ಶೈಲಸಮಾನ ಪಾಪ ಬೆಂದು ಹೋಹುದು ನೋಡಯ್ಯ. ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರನೆಂಬ ನಿಜಪದವಿಯನೈದುವುದು ಬಳಿಕ ನೋಡಯ್ಯ.

ಟೀಕು:— ಪರನಾದ, ಪರಬಿಂದು, ಪರಕಳೆಗಳನು ಪಡೆಯದ ಅಖಂಡಗೋಳಕಾಕಾರ ಸಾಕಲ್ಯ ಪ್ರಣವವೆಂಬುದೀಗ ಆದಿ ಬಿಂದು ಬೀಜವನರಿದು ಎಂಬುದಕ್ಕರ್ಥ. ಆ ಸಾಕಲ್ಯ ಪ್ರಣವವು ಷಟ್ಕೃತಿಯನು ತಳೆದು ಊರ್ಧ್ವಸ್ವರ ಕೇಡಿಲ್ಲದೆ ಘೋಷಿಸುತ್ತಿದ್ದತೆಂಬುದೀಗ ಬಿಂದುಪರಿ ಅನಾಹತ ನಾದವನರಿದು ಎಂಬುದಕ್ಕರ್ಥ. ಗುರುಕರುಣದಿಂದೆ ಓಂ ಎಂಬ ಪ್ರಣವವ ತಿಳಿದು ಆ ಪ್ರಣವದ ತಾರಕಾಕೃತಿ ದಂಡಕಾಕೃತಿಗಳನೊಳಕೊಂಡು ನಾದವಿರುವುದು. ಕುಂಡಲಾಕೃತಿ ಅರ್ಧಚಂದ್ರಾಕೃತಿಗಳನೊಳಕೊಂಡು ಬಿಂದುವಿರುವುದು. ದರ್ಪಣಾಕೃತಿ ಜ್ಯೋತಿರಾಕೃತಿಗಳನೊಳಕೊಂಡು ಕಳೆ ಇರುವದು. ನಾದ ಬಿಂದು ಕಳೆಗಳೇ ಶಿವನ ದಿವ್ಯಶರೀರವು. ಆ ಶರೀರ ಧ್ಯಾನವೇ ಚಿದಗ್ನಿ. ಅಂತವನು ಧ್ಯಾನಿಸಿ ಪೂಜಿಸಿದಾತಂಗೆ ವಾಕ್ಕಾಯ ಮಾನಸಗಳಿಂದೆ ಹುಟ್ಟಿದ ಪಾಪವೆಂಬ ಕುಲಾದ್ರಿಗೆ ಪಾವಕನಾಗಿದ್ದಿತೆಂಬುದೀಗ ಆ ಪ್ರಣವ ಸೂತ್ರವಿಡಿದು ಶಿವಧ್ಯಾನವಂ ಮಾಡಲು ಆ ದಾವಾಗ್ನಿಯಿಂದ ಯೋಜನಾಂತರ ಶೈಲ ಸಮಾನವಾದ ಪಾಪ ಬೆಂದು ಹೋಹುದು ನೋಡಯ್ಯ ಎಂಬುದಕ್ಕರ್ಥ. 'ಯಾತೆ ರುದ್ರ ಶಿವಾತನೂರ ಘೋರಾ ಪಾಪ ಕಾಶಿನೀ' ಎಂದೊಡೆ ಭಯಂಕರವಲ್ಲದಂಥ ಶಿವತನು ಪಾಪರಹಿತವಾದವರಲ್ಲಿ ಪ್ರಕಾಶಿಸುವದೆಂಬ ಶ್ರುತಿಯಿಂದೆ ಅಂತಪ್ಪ ಶಿವಧ್ಯಾನಿಗಳು ಶಿವನಲ್ಲಿ ಕೂಡಿರ್ಪರು ಎಂಬುದೀಗ ನಿಜಗುರು

ಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ನಿಜಪದವಿಯನೈದುವದು ಬಳಿಕ ನೋಡಯ್ಯ ಎಂಬುದಕ್ಕರ್ಥ.

ಗುರುಕೃಪೆಯಿಂದ ಲಿಂಗಾಂಗ ಸಂಬಂಧವ ತಿಳಿವುದೆಂದು ಪೇಳುತ್ತಿರ್ದಪಂ.

(೧೫) ಷಡಧ್ವಾಶ್ರಯವಾದ ಪರಬಿಂದುಸ್ಥಾನದ ಮೇಲಿರ್ದ ಷಟ್‌ಸ್ಥಲ ಲಿಂಗಾಂಗ ಜನಿಸಿ ತೋರಿತ್ತೆಂದೊಡೆ, ಅಂಗ ಲಿಂಗಕ್ಕೆ ಭೇದ ಉಂಟೇ? ಇಲ್ಲವಾಗಿ ಬೀಜಾಂಕುರದಂತೆ ಒಂದು ಬಿಟ್ಟೊಂದು ತೋರದು. ಇಂತಪ್ಪ ಲಿಂಗಾಂಗ ಸಂಬಂಧದ ಸಕೀಲವನು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣ ಬಲ್ಲ.

ಟೀಕು: – ಷಡಧ್ವಾಶ್ರಯ ಪರಬಿಂದುವು ಅವಸ್ಥಾತ್ಮಕವೆಂದು ಶಬ್ದಾತ್ಮಕವೆಂದು ಎರಡು ಪ್ರಕಾರದ ಸ್ವರೂಪವನುಳ್ಳುದು ಅನ್ಯಾತ್ಮಕವಲ್ಲ. ಅದು ಹೇಗೆಂದೊಡೆ ವರ್ಣ, ಪದ, ಮಂತ್ರ ಈ ಮೂರು ಶಬ್ದಾತ್ಮಕಂಗಳು. ಭುವನ, ತತ್ವ, ಕಲೆ ಈ ಮೂರು ಅವಸ್ಥಾತ್ಮಕಂಗಳು. ಆದುದರಿಂದ ಮೂರು ದ್ವಯಂಗಳು ಭುವನ ಶರೀರವನಾಶ್ರೈಸಿಹವು. ಆ ಶರೀರವು ತತ್ವವನಾಶ್ರಯಿಸಿಹುದು. ಆತ್ಮತತ್ವಂಗಳು ಕಲೆಯನಾಶ್ರಯಿಸಿಹವು. ಆ ಕಲೆ ಪರಬಿಂದುವನಾಶ್ರಯಿಸಿಹುದು. ಆ ಬಿಂದು ಸಭಾಜ್ಯೋತಿಯಂತೆ ಸರ್ವಾತ್ಮಕ ಭ್ರೂಮಧ್ಯದೊಳಗೆ ಬೆಳಗುತ್ತಿರ್ಪುದು. ಗುರುಕರುಣದಿಂದೆ ಜ್ಞಾನೋದಯವಾದ ಜೀವನ್ಮುಕ್ತರುಗಳ ಬಿಂದು ಪೀಠದ ಮೇಲೆ ಒಳಹೊರಗೆನ್ನದೆ ದೇಹಾಳಿಯ ದೀಪದಂತೆ ನಾದಾತ್ಮಕ ಶುದ್ಧ ಪ್ರಸಾದ ಮೂರ್ತಿ ಇರುತಿಪ್ಪನೆಂಬುದೀಗ ಷಡಧ್ವಾಶ್ರಯವಾದ ಪರಬಿಂದು ಪೀಠದ ಮೇಲಿರ್ದ ಎಂಬುದಕ್ಕರ್ಥ. ಅನಾಹತನಾದೋಯವಾದ ಶುದ್ಧ ಪ್ರಸಾದವೇ ಮಹಾಲಿಂಗವೆನಿಸಿ, ಆಚಾರಾದಿ ಪಂಚಲಿಂಗಂಗಳನು ಆತನ ತನುವಿನಲ್ಲಿ ಸಂಬಂಧವಾಗಿ ಬಿಂದುವೆನಿಸಿ ಆ ಬಿಂದುವೇ ಮಹಾಲಿಂಗವೆನಿಸಿ ಲಯಾಭಿಧಾನವನುಳ್ಳದರಿಂದೆ ಐಕ್ಯನಾಗಿ, ಭಕ್ತಾದಿ ಪಂಚ ಅಂಗಂಗಳನೆ ತನ್ನೊಳಗೆ ತಳೆದು ಮಹಾಲಿಂಗಾದಿ ಆಚಾರಾಂತವಾದ ಷಡ್ಲಿಂಗಂಗಳನು ಕೂಡಿ ಭ್ರಮರ ಚಂಪಕದಂತೆ ನಿಶ್ಶಬ್ದಾತ್ಮಕ ಶಿವತತ್ವವೆನಿಸಿ ಆ ಬಿಂದುವೇ ತೋರುತ್ತಿರ್ಪುದೆಂಬುದೀಗ ಷಟ್‌ಸ್ಥಲವಾದ ಪರಶಿವತತ್ವದೊಳು ಷಟ್ಸ್ಥಲ ಲಿಂಗಾಂಗ ಜನಿಸಿ ತೋರಿತೆಂಬುದಕ್ಕರ್ಥ. ಅಂತಪ್ಪ



ಚಿಚ್ಛಕ್ತಿ ಸ್ವರೂಪವಾದ ಬಿಂದುವೇ ಚಿದಂಗವೆನಿಸಿ ಆ ಶುದ್ಧಪ್ರಸಾದವೇ ಚಿಲ್ಲಿಂಗವೆನಿಸಿ ಕನಕಕಾಂತಿಯರತ ಒಂದಕ್ಕೊಂದು ವಿರಳವಿಲ್ಲದೆ ಇದ್ದವೆಂಬುದೀಗ ಅಂಗಕ್ಕೆ ಲಿಂಗಕ್ಕೆ ಭೇದವುಂಟೇ? ಇಲ್ಲವಾಗಿ ಬೀಜಾಂಕುರದಂತೆ ಒಂದ ಬಿಟ್ಟೊಂದು ತೋರದು ಎಂಬುದಕ್ಕರ್ಥ. ಜಗದ್ವೈಭವವ ನಟಿಪ ಮೂಲಚಿತ್ತುವಿನ ಸಗುಣ ನಿರ್ಗುಣವೆನಿಪ ಪರನಾದ, ಪರಬಿಂದು, ಪರಕಳೆಗಳೇ ಅಂಗತ್ರಯಂಗಳಾಗಿ ಚಿನ್ನಾದ, ಚಿದ್ಬಿಂದು, ಚಿತ್ಕಳೆಗಳೇ ಲಿಂಗತ್ರಯಂಗಳಾಗಿ ಈ ಉಭಯ ರೂಪವೇ ಮೂಲಚಿತ್ತುವಾಗಿ, ಇಂತಪ್ಪ ಸಚ್ಚಿದಾನಂದ ನಿತ್ಯಪರಿಪೂರ್ಣ ಅಖಂಡನೆಂಬ ಷಟ್‌ಸ್ಥಲ ಲಕ್ಷಣಂಗಳ ತಳೆದು ಗೋಳಕಾಕಾರವಾದ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತೆಂಬುದೀಗ ಇಂತಪ್ಪ ಲಿಂಗಾಂಗ ಸಂಬಂಧದ ಸಕೀಲವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣ ಬಲ್ಲನು ಎಂಬುದಕ್ಕರ್ಥ.

ಇನ್ನು ಜ್ಞಾನೋದಯದ ಊರ್ಧ್ವ ಕುಂಡಲಿ ಎನಿಸಿದ ವಿವರವಂ ಹೇಳುತ್ತಿರ್ದಪಂ.

(೧೬) ಊರ್ಧ್ವಮುಖವಾದ ಅನಂತೇಶನೆಂಬ ವಾಸುಕಿಯ ಶಿರದ ಮೇಲಿಹ ಅಷ್ಟದಳಾಬ್ಜ ಮಧ್ಯದಲ್ಲಿ ಒಪ್ಪುತ್ತಿಹ ಶುದ್ಧವಿದ್ಯೆಯೇ ಪೀಠವಾದ ಶಿವಲಿಂಗ ಒಂದರಲ್ಲಿ ದೃಢಭಕ್ತಿಯುಳ್ಳಾತನ ದೇಹವೇ ಲಿಂಗದೇಹವು. ಆ ಚಿದ್ರೂಪವಾದ ಪರಮಸ್ವರೂಪನ ಮೂರ್ತಿ ತಾನೇ ಇಷ್ಟಲಿಂಗವು. ಆ ಇಷ್ಟಲಿಂಗದಲ್ಲಿ ದೇಹವನಡಗಿಸಿದ ಮಹಾತ್ಮನನ್ನು ಬುದ್ಧಿ ಅಹಂಕಾರ ಇಂದ್ರಿಯಾದಿ ಗುಣಂಗಳು ಜನನಾದಿ ವಿಕಾರಂಗಳು ಹೊದ್ದವಾಗಿ ಆತ ನಿರ್ದೇಹಿ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಶರಣನುಪಮಾತೀತನು.

ಟೀಕು: – ಪಶ್ಚಿಮ ಪದ್ಮಾಸನದಲ್ಲಿ ಕುಳಿತು ಅತ್ತಿತ್ತ ಚಲಿಸದೆ ನಿಜಜ್ಯೋತಿಗಳೆರಡನೂ ದೃಢವಾಗಿ ಪಿಡಿದು, ಶಿವಾನುಭವಯೋಗದಿಂ ಕುಂಡಲಾಗ್ನಿಯಂ ಬಲಿದೆತ್ತಲು ನಾಭಿಯಲ್ಲಿ ತನ್ನ ತೆಕ್ಕೆಯನಿಟ್ಟ ನಾಡೀಕಂದದಧೋರಂಧ್ರದಲ್ಲಿ ಪಡೆಯಂ ಮಡಗಿ ಬ್ರಹ್ಮರಂಧ್ರ ಪರ್ಯಂತರ ಪಶ್ಚಿಮದಿಂ ದೃಢವಾಗಿ ಬಂಧಿಸಿ ಪಶ್ಚಿಮವಾಯುವನು ನಿಲಿಸಿ, ಪ್ರಾಣವಾಯುವನು ಭಕ್ಷಿಸಿ ಕಂಡು ಆ ಶಿವಜ್ಞಾನ ಸ್ವರೂಪವಾದಗ್ನಿಯವೆಸೆಯಿಂದೆ

ಕುಂಡಲಿಸರ್ಪನು ಎದ್ದು ಊರ್ಧ್ವಮುಖವಾಗಿ ಉನ್ಮನಿಯಲ್ಲಿ ಉಸಿರ ಬಿಡುತ್ತಿರಲು, ಆಗ ಷಟ್‌ಚಕ್ರದ ಕಮಲಂಗಳೆಲ್ಲ ಊರ್ಧ್ವಮುಖವಾಗಿ, ಈಡಾ ಪಿಂಗಳ ಸುಷುಮ್ನ ನಾಳಂಗಳು ಕೂಡಿ ಸೂರ್ಯಚಂದ್ರಾಗ್ನಿಯೆಂಬ ಮಂಡಲತ್ರಯಂಗಳಾಗಿ ಒಪ್ಪುತ್ತಿಹವು. ಆ ಮಂಡಲತ್ರಯಂಗಳೇ ಅಷ್ಟದಳವಾಗಿ, ಆ ಅಷ್ಟದಳದ ಮಧ್ಯದಲ್ಲಿ ಶುದ್ಧವಿದ್ಯೆಯೆಂಬ ಸೂಕ್ಷ್ಮ ಕರ್ಣಿಕೆಯ ಚೌಪೀಠಾಗ್ರದಲ್ಲಿ ನಾದಾತ್ಮಕ ಸ್ವರೂಪಮಪ್ಪ ಲಿಂಗವನು ಪ್ರತ್ಯಕ್ಷವ ಮಾಡಿಕೊಂಡು ಶಿವಯೋಗೀಶ್ವರನ ಶರೀರವೇ ಉನ್ಮನಿಯು ಸ್ವರೂಪವಾಗಿ ಒಪ್ಪುತ್ತಿರ್ಪುದೆಂಬುದೀಗ ಊರ್ಧ್ವಮುಖವಾದ ಅನಂತೇಶನೆಂಬ ವಾಸುಕಿಯ ಶಿರದ ಮೇಲಿಪ್ಪ ಅಷ್ಟದಳಾಬ್ಜ ಮಧ್ಯದಲ್ಲಿ ಒಪ್ಪುತ್ತಿಹ ಶುದ್ಧ ವಿದ್ಯೆಯೇ ಪೀಠವಾದ ಶಿವಲಿಂಗ ಒಂದರಲ್ಲಿ ದೃಢಭಕ್ತಿಯುಳ್ಳಾತನ ದೇಹವೇ ಶಿವಲಿಂಗ ದೇಹವು, ಎಂಬುದಕ್ಕರ್ಥ. ಆ ಉನ್ಮನಿಯು ಸ್ವರೂಪವಾದ ಶಿವಯೋಗೀಶ್ವರನ ಕಾಯವೇ ಕ್ರಿಯಾಲಿಂಗವಾಗಲು, ಅದೆಂತೆಂದೊಡೆ ಆತ ಮಾಡುವ ವ್ಯವಹಾರವೆಲ್ಲವೂ ಉನ್ಮನಿಯ ಸ್ವರೂಪವಾದ ಕಾರಣ ಆ ಲಿಂಗದಲ್ಲಿ ಕಾಲೋಚಿತಕ್ಕೆ ಹುಟ್ಟಿದ ದೇಹಾದಿ ಗುಣಂಗಳು, ಹಂಸಸ್ವರೂಪವನೈದಿ ಉನ್ಮನಿಯಲ್ಲಿ ಲಯವಾಗಿ, ಜೀವನ್ಮುಕ್ತಿಯ ಸುಖವು ಫಲಿಸಿ ದಗ್ಧಪಟನ್ಯಾಯದಿಂ ತೋರಲ್ಪಟ್ಟ ಲಿಂಗವೆಂಬುದೀಗ, ಆ ಚಿದ್ರೂಪವಾದ ಪರಮಸ್ವರೂಪನ ಮೂರ್ತಿ ತಾನೇ ಇಷ್ಟಲಿಂಗವು, ಆ ಇಷ್ಟಲಿಂಗದಲ್ಲಿ ದೇಹವನಡಗಿಸಿದ ಮಹಾತ್ಮನ ಬುದ್ಧಿ ಅಹಂಕಾರ ಇಂದ್ರಿಯಾದಿ ಗುಣಂಗಳು ಜನನಾದಿ ವಿಕಾರಂಗಳು ಹೊದ್ದವಾಗಿ ಆತನು ನಿರ್ದೇಹಿ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಶರಣನುಪಮಾತೀತನು ಎಂಬುದಕ್ಕರ್ಥ.

ಶರಣನ ಅಂಗದಲ್ಲಿ ಮಹಾಲಿಂಗ ಹೇಗೆ ಇದ್ದಿತೆಂದೊಡೆ ಹೇಳುತ್ತಿರ್ದಪಂ.

(೧೭) ಪ್ರಕಾಶದ್ವಾರ, ಗಂಧದ್ವಾರ, ಶಬ್ದದ್ವಾರಗಳೆಂಬಾರು ದ್ವಾರಂಗಳು ಕೂಡಿದ ಠಾವಿನಲ್ಲಿ, ನಾದ ಬಿಂದು ಕಳೆಗಳೆಂಬ ಸಿಂಹಾಸನದ ಮೇಲೆ ಮೂರ್ತಿಗೊಂಡು ಶಬ್ದ ರೂಪ ಗಂಧಂಗಳಂ ಗ್ರಹಿಸುವಾತ ನೀನಲ್ಲದೆ ಮತ್ತಾರು ಹೇಳಾ? ಜಿಹ್ವೆಯಲ್ಲಿ ನಿಂದು ಷಡ್ರಸಾನ್ನದ ರುಚಿಯನಾಸ್ವಾದಿಸುವಾತ ನೀನಲ್ಲದೆ ಮತ್ತಾರು ಹೇಳಾ? ಸರ್ವಾಂಗದಲ್ಲಿ ನಿಂದು ತ್ವಗಿಂದ್ರಿಯ



ಮುಖದಲ್ಲಿ ಸ್ಪರ್ಶನವ ತೊಳೆದುಕೊಂಬಾತ ನೀನಲ್ಲದೆ ಮತ್ತಾರು ಹೇಳಾ? ಮನವೆಂಬ ಮುಖದಲ್ಲಿ ನಿಂದು ಪರಿಣಾಮವನನುಭವಿಸುವಾತ ನೀನಲ್ಲದೆ ಮತ್ತಾರು ಹೇಳಾ? ಸರ್ವಾವಯವಂಗಳೇ ಸರ್ವತೋಮುಖವಾಗಿ ಭೋಗಿಸುವ ಪ್ರಸಾದವಂ ಕರುಣಿದ ಕೃಪಾಮೂರ್ತಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನೀನಲ್ಲದೆ ಮತ್ತಾರು ಹೇಳಾ?

ಟೀಕು:- ಪ್ರಕಾಶದ್ವಾರ, ಗಂಧದ್ವಾರ, ಶಬ್ದದ್ವಾರಗಳೆಂಬ ಮೂರು ದ್ವಾರಂಗಳು ಕೂಡಿದ ಠಾವಾವುದೆಂದೊಡೆ ಭ್ರೂಮಧ್ಯಕ್ಕೆ ಪೆಸರು. ಅವು ಹೇಗೆಂದೊಡೆ ಆರು ದ್ವಾರಂಗಳು ತಮ್ಮ ತಮ್ಮ ಸ್ಥಾನದಲ್ಲಿ ವ್ಯವಹಾರ ಮಾಡುತ್ತಿದ್ದ ಕಾರಣ ವ್ಯವಹಾರದಲ್ಲಿ ಕೂಟವಿಲ್ಲವಾಗಿ ನಾಸಾಗ್ರವರ್ತೀ ನಯನಾಗ್ರವರ್ತೀ ಎಂದು ನಾಸಿಕಾಗ್ರ ನಯನಾಗ್ರಗಳಲ್ಲಿ ವರ್ತಿಸುತ್ತಿದ್ದ ಜೀವನು ಆವ ಕಾಲಕ್ಕೆ ಮಹಾಲಿಂಗದಲ್ಲಿ ಕೂಡಿಹನೋ ಆ ಕಾಲಕ್ಕೆ ಆರು ದ್ವಾರಂಗಳು ಕೂಡಿ ಯೋಗಪೀಠ, ಮಂತ್ರಪೀಠ, ಬಿಂದುಪೀಠವೆಂದು ಭ್ರೂಮಧ್ಯವೇ ಹೇಳಿಕೊಳ್ಳುತಿರ್ಪುದಾಗಿ, ಅದು ರಹಸ್ಯವಾಗಿಪ್ಪುದು ಎಂಬುದೀಗ, ಪ್ರಕಾಶದ್ವಾರ, ಗಂಧದ್ವಾರ, ಶಬ ದ್ವಾರಂಗಳು ಕೂಡಿದ ಠಾವಿನಲ್ಲಿ ಎಂಬುದಕ್ಕರ್ಥ. ಅಂತಪ್ಪ ಭ್ರೂಮಧ್ಯದಲ್ಲಿ ಪರನಾದ ಪರಬಿಂದು ಪರಕಳೆಗಳೇಕವಾಗಿ, ಬಿಂದು ಶಕ್ತಿಯ ಪೀಠಾಗ್ರದಲ್ಲಿ ಚಿನ್ನಾದ, ಚಿದ್ಬಿಂದು, ಚಿತ್ಕಳೆ, ಮೂಲಚಿತ್ತು ಈ ಚತುರ್ವಿಧವೂ ಗಟ್ಟಿಗೊಂಡು ಮಹಾಲಿಂಗವಾಗಿ ಮೂರ್ತಿಗೊಂಡು ಆರುದ್ವಾರವೆಂಬ ಜಾಳೇಂದ್ರದಲ್ಲಿ ರೂಪು, ಗಂಧ, ಶಬ್ದಗಳೆಂಬ ಪದಾರ್ಥವನ್ನು ಹಿಡಿದು ಜಿಹ್ವೆಯಲ್ಲಿ ನಿಂದು ಷಡುರಸಾನ್ನದ ರುಚಿಯಂ ಸ್ವೀಕರಿಸಿ ಸರ್ವಾಂಗದಲ್ಲಿ ನಿಂದು ತ್ವಗಿಂದ್ರಿಯ ಮುಖದಲ್ಲಿ ಸ್ಪರ್ಶನವ ತಳೆದು ಮನವೆಂಬ ಮುಖದಲ್ಲಿ ನಿಂದು ಪರಿಣಾಮವನನುಭವಿಸುವ ಕ್ರಮವೆಂತೆಂದೊಡೆ:- ಗುರುಕೃಪೆಯಿಂದೆ ಘುಣಾಕ್ಷರ ನ್ಯಾಯದ ಹಾಗೆ ನಾಸಿಕನಯನ ಮಧ್ಯದಲ್ಲಿ ಸಂಚಾರವನುಳ್ಳ ಜೀವ ಹಂಸನು ಭ್ರೂಮಧ್ಯದಲ್ಲಿ ಕೂಡಿದಾಕ್ಷಣವೇ ತನ್ನ ಪೂರ್ವವಳಿದು ಮಹಾಲಿಂಗದಲ್ಲಿ ಸಮರಸವಾಗಲು, ಆ ಸಮರಸವೇ ಐಕ್ಯನೆಂದು ಹೆಸರಂ ಪಡೆದು ಚಿಚ್ಛಕ್ತಿ ಸ್ವರೂಪವಾದ ಶಿವಶರಣನ ಕರಚರಣಾದ್ಯವಯವಂಗಳೆಲ್ಲವಂ ಭಕ್ತರ ಮಾಡಿ ಆ ಭಕ್ತಿ ಕಾಯದಲ್ಲಿ ಸರ್ವತೋಮುಖವಾಗಿ ಬಂದ ಪದಾರ್ಥವೆಲ್ಲವನ್ನು ಮಹಾಲಿಂಗಕ್ಕೆ ದಿವಾರಾತ್ರಿ ಎನ್ನದೆ

ಎಲ್ಲಾ ಕಾಲದಲ್ಲಿಯೂ ತಾನೇ ಸಮರ್ಪಣವ ಮಾಡಲು ಆ ಮಹಾಲಿಂಗವು ಪ್ರಸನ್ನ ಪ್ರಸಾದವ ಕರುಣಿಸಿದ ಶರಣನ ಸರ್ವಾಂಗವನು ಪ್ರಸಾದಕಾಯವ ಮಾಡಿದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

ಮುಂದೆ ಜೀವ ಪರಮರ ಭೇದವನು ಹೇಳಿ ಆ ಜೀವ ಪರಮರ ಮಧ್ಯದಲ್ಲಿ ನೀನು ನಿನ್ನ ಪ್ರಾಣಲಿಂಗವನು ನಿನ್ನನುಭಾವವನು ನೋಡೆಂದು ಪೇಳುತ್ತಿರ್ದಪಂ.

(೧೮) ಊರ್ಧ್ವಮೂಲ ಅಧೋಶಾಖೆಯನುಳ್ಳ ವೃಕ್ಷದ ಮೂಲದಲ್ಲಿ ಒಬ್ಬ ಯೋಗಿ ಇದ್ದಾನೆ. ಆ ಯೋಗಿಯ ಕೈಯ್ಯಲ್ಲೊಂದು ಅಮೃತಫಲವಿದೆ ನೋಡಾ. ಆ ಫಲವ ಮೆದ್ದವರೆಲ್ಲ ಅಮರರಾದುದಂ ಕಂಡು ನಾನು ಬೆರಗಾದೆನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟೀಕು:— ಊರ್ಧ್ವಮೂಲ ಅಧೋಶಾಖೆಯಾದ ವೃಕ್ಷವೆಂದೊಡೆ ಅಧೋಮೂಲ ಊರ್ಧ್ವಶಾಖೆಯಾಗಿರುವದು ಸಹಜಗುಣ. ಶರೀರವೆಂಬ ವೃಕ್ಷಕ್ಕೆ ಅಧೋಮೂಲ ಊರ್ಧ್ವಶಾಖೆ ಉಂಟು. ಊರ್ಧ್ವಮೂಲ ಅಧೋಶಾಖೆಯುಂಟು. ಅದು ಹೇಗಯ್ಯ ಎಂದೊಡೆ ಶರೀರವೆಂಬ ವೃಕ್ಷಕ್ಕೆ ಮೂಲಾಹಂಕಾರವೇ ಬೇರುಗಳಾದ ಕಾರಣ ಆ ಮೂಲಾಹಂಕಾರವು ಪ್ರಾಣವಾಯುವಿನೊಡನೆ ಕೂಡಿ ಮನಪವನಗಳೆಂಬ ರೆಕ್ಕೆಗಳ ಮಾಡಿಕೊಂಡು ಷಡಾಧಾರ ಚಕ್ರಂಗಳೊಳೈವತ್ತುದಳಂಗಳ ಮೇಲೆ ರೋಹಾರೋಹಂಗಳಿಂದ ತಿರುಗುತ್ತಿರ್ದ ಜೀವಹಂಸನೆಂಬುದೀಗ ಅಧೋಮೂಲ ಊರ್ಧ್ವಶಾಖೆ ಎನಿಸುವದು. ಶ್ರೀಗುರು ಕರುಣದಿಂದೆ ಜ್ಞಾನೋದಯವಾದ ಮಹಾಪುರುಷಂಗೆ ಆ ಮೂಲಾಹಂಕಾರವು ಚಿದಹಂಕಾರವೆನಿಸಿ ಸಂ, ಹಂ ಅನುಗ್ರಹಶಕ್ತಿಯಿಂದ ಭೇದಾಖ್ಯವಾದ ಜೀವ ತತ್ವ ಸ್ವರೂಪು ಅಹಮಿತಿ ನಾನು ಎಂದು ಸೋಹಂ ಎಂಬ ಪದವ ವ್ಯಕ್ತೀಕರಿಸಿ ಉಸಿರಲು ಉನ್ಮನಿಯನೆಯ್ದಿ ಷಟ್‌ಚಕ್ರ ಕಮಲಕರ್ಣಿಕೆಯಲ್ಲಿ ಅಚಲನಾಗಿರ್ಪುದೀಗ ಊರ್ಧ್ವಮೂಲ ಅಧೋಶಾಖೆಯಾದ ವೃಕ್ಷದ ಮೂಲದಲ್ಲಿ ಎಂಬುದರ್ಥ. ಉಚ್ಛ್ವಾಸ ನಿಶ್ವಾಸವಿಲ್ಲದಂತೆ ಅಚಲನಾಗಿರ್ದ ವಿವೇಕವೇ ಜೀವಪರಮರ ಕೂಟವನುಳ್ಳ ಯೋಗೀಶ್ವರನು. ಆ ಯೋಗಿಯ ಸುವಿಚಾರವೆಂಬ ಹಸ್ತದಲ್ಲಿ ಮಹಾಲಿಂಗವಿಹುದು ಎಂಬುದೀಗ ಒಬ್ಬ ಯೋಗಿ ಇದ್ದಾನೆ. ಆ ಯೋಗಿಯ



ಕಯ್ಯಲ್ಲೊಂದು ಅಮೃತಫಲವದೆ ನೋಡಾ ಎಂಬುದಕ್ಕರ್ಥ. ಭಕ್ತಿಕಾರಣದಿಂದ ಆ ಮಹಾಲಿಂಗವೇ ಇಷ್ಟಲಿಂಗವಾಗಿ ಶಿವಶರಣನ ಶರೀರಾದಿಂದ್ರಿಯಂಗಳನೆಲ್ಲವ ತಾನೇ ಭೋಗಿಸಲಾಗಿ ಆ ಶರೀರಾದಿಂದ್ರಿಯಂಗಳೆಲ್ಲವೂ ನಿತ್ಯ ಪದವಿಯ ಪಡೆದು ಮಹಾಲಿಂಗದ ಸೇವಕರುಗಳಾಗಿ ಇದ್ದುದೇ ಶಿವಶರಣನು ತನ್ನ ಜ್ಞಾನ ದೃಷ್ಟಿಯಲ್ಲಿ ಕಂಡು ಚೋದ್ಯಂಬಡುತ್ತಿದ್ದನೆಂಬುದೀಗ, ಆ ಫಲವ ಮೆದ್ದವರೆಲ್ಲರೂ ಅಮರರಾದುದ ಕಂಡು ನಾನು ಬೆರಗಾದೆನು ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರಾ ಎಂಬುದಕ್ಕರ್ಥ.

"ಭಾವ ಪ್ರಸಾದಂ ಕುರುತೆ ಪದಾರ್ಥಂ ಭೂಯಃ ಪ್ರಸಾದಂ ವಿನಿಯೋಗಕಾಲೆ । ಆದ್ಯಂತಯೋಗಂಪ್ರಮಿತಪ್ರಸಾದಂ ಮಧ್ಯಪದಾರ್ಥಂ ಕ್ಷಣಮಾತನೋತಿ ॥ ಎಂದು ಈ ಗ್ರಂಥದರ್ಥವನೆ ಪ್ರಕಟಿಸುತ್ತಿರ್ದಪಂ.

(೧೯) ಪ್ರಸಾದವನೂ ಪ್ರಸಾದಿಯನೂ ಪದಾರ್ಥದ ಭೇದವನೂ ಅರಿವುದರಿದು ನೋಡಾ. ಮುನ್ನಾದಿಯ ಪ್ರಸಾದವು ಅರ್ಪಣಕ್ಕೆ ಬಂದಲ್ಲಿ ಉಪಚಾರದಿಂದ ಪದಾರ್ಥವೆನಿಸಿತ್ತು. ಅರ್ಪಣದ ಮೇಲೆ ಪ್ರಸಾದವೆನಿಸಿತ್ತು. ಈ ಪ್ರಸಾದದಾದಿಕುಳವ ಬಲ್ಲಡೆ ಆತ ಪ್ರಸಾದಿ. ಆ ಪ್ರಸಾದವ ಬಿಟ್ಟು ಪ್ರಸಾದಿಯಿಲ್ಲ. ಈ ಪ್ರಸಾದಿಯೂ ಪ್ರಸಾದವೂ ಕೂಡಿ ನೋಂಕದ ಪದಾರ್ಥವಿಲ್ಲ. ಇದು ಕಾರಣ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಪ್ರಸಾದಿಯ ಪ್ರಸಾದದಿಂದ ಮೂರು ಲೋಕವೆಲ್ಲ ಜೀವಿಸಿತ್ತಾಗಿ ಆ ಪ್ರಸಾದಿಗೆ ನಮೋ ನಮೋ ಎನುತಿರ್ದೆನು.

ಟೀಕು — ಪ್ರಸಾದವೆಂದೊಡೆ ಪರಬ್ರಹ್ಮವು. ಪ್ರಸಾದಿಯೆಂದಡೆ ಆ ಪರಬ್ರಹ್ಮವ ಧರಿಸಿದಂಥ ಚಿಚ್ಛಕ್ತಿಯೆನಿಪ ಶರಣನು. ಪದಾರ್ಥವೆಂದಡೆ ಆ ಚಿಚ್ಛಕ್ತಿಯ ಲೀಲಾಮಾತ್ರವಾದ ಪಂಚವಿಂಶತಿ ತತ್ವವೇ ರೂಪಾದಾತ್ಮನು. ಆ ತ್ರಿವಿಧ ಭೇದವನು ತನ್ನೊಳಗೆ ತಿಳಿದು ಮಾಡುವದು ದುರ್ಲಭವಾಗಿರ್ಪರೆಂಬುದೀಗ ಪ್ರಸಾದವನೂ ಪ್ರಸಾದಿಯನೂ ಪದಾರ್ಥದ ಭೇದವನೂ ಅರಿವುದರಿದು ನೋಡಾ ಎಂಬುದಕ್ಕರ್ಥ. ಇಂತಪ್ಪ ಭೇದವನರಿಯದೆ ಶಿವಶರಣನ ಚೈತನ್ಯವೇ ಆದಿ ಪ್ರಸಾದವಾದ ಕಾರಣ, ಆ ಪ್ರಸಾದವು ಬಾಹ್ಯಾಭ್ಯಂತರದೊಳಹೊರಗೆ ಬೆಳಗುತ್ತಿರ್ದರೂ ತನ್ನ

ಮುಖವ ನೋಡಿಹೆನೆಂಬ ಆಸ್ತಿಕ್ಯ ಬುದ್ಧಿಯುಳ್ಳವನಿಗೆ ಕನ್ನಡಿಯ ನೋಡಿದಲ್ಲದೆ ಕಾಣಬಾರದು ಎಂಬುದು ಹೇಗೋ ಹಾಗೆ ಆ ಶಿವಶರಣನು ಆದಿ ಪ್ರಸಾದವ ಮುಂದಿಟ್ಟುಕೊಂಡು ಕಾಯದ ಕೈಯುಟ್ಟಿ ಕ್ರಿಯಾರ್ಪಣವ ಮಾಡುವೆನೆಂಬ ಕಾಲದಲ್ಲಿ ಆ ಪ್ರಸಾದವು ಪದಾರ್ಥವೆನಿಸಿತ್ತು, ಅದೆಂತೆಂದೊಡೆ— ಆ ಪದಾರ್ಥದೊಳಗೆ ಪ್ರಸಾದವು ಗೋಪ್ಯವಾಗಿದ್ದ ಕಾರಣ "ಚಿತ್ತಾವಲೋಕನೇ ಭುಕ್ತಃ ಪ್ರಸಾದಶ್ಶಿವಸಂಗಮಃ । ನಚಿತ್ತಾಲೋಕನೇಭುಕ್ತಃ ಕ್ರಿಮಿಕೀಟ ಸಮೋಭವೇತ್" ಎಂದು ಜ್ಞಾನಾವಲೋಕನದಿಂದೆ ಆ ಪದಾರ್ಥದಲ್ಲಿಯ ಪ್ರಸಾದವು ಪ್ರಕಟವಾಗಿ ಮೇಳಿ ಅರ್ಪಣದ ಮೇಲೆ ಪ್ರಸಾದವೆನಿಸಿತೆಂಬುದೀಗ, ಮುನ್ನಾದಿಯ ಪ್ರಸಾದವು ಅರ್ಪಣಕ್ಕೆ ಬಂದಲ್ಲಿ ಉಪಚಾರದಿಂದ ಪದಾರ್ಥವೆನಿಸಿತ್ತು. ಅರ್ಪಣದ ಮೇಲೆ ಪ್ರಸಾದವೆನಿಸಿತ್ತು ಎಂಬುದಕ್ಕರ್ಥ. ಆ ಆದಿ ಪ್ರಸಾದವನ್ನೂ ಜ್ಞಾನ ಕ್ರಿಯೆಗಳಿಂದಾಚರಿಸಿ ಜ್ಞಾನದೃಷ್ಟಿಯ ಮುಂದೆ ಸರ್ವತೋಮುಖವಾಗಿ ಪ್ರಕಾಶಿಸುವ ಪ್ರಸಾದವು ತಾನೇಯೆಂದು ತಿಳಿದ ಶಿವಶರಣನೇ ಆದಿ ಪ್ರಸಾದವಾಗಿ ಒಪ್ಪುತ್ತಿದ್ದ ಕಾರಣ, ಪ್ರಸಾದ ಪ್ರಸಾದಿಗಳು ಸೋಂಕದ ಪದಾರ್ಥವೇ ತದ್ರೂಪವಾಗಿ ಕಾಣುತ್ತಿರಲು ಅಂತಪ್ಪ ಆದಿ ಪ್ರಸಾದವನೇ ಸ್ವರ್ಗ ಮರ್ತ್ಯ ಪಾತಾಳದ ಜನರೆಲ್ಲರೂ ಸ್ವೀಕರಿಸಿ ಬದುಕುತ್ತಿರಲು, ಆ ಪ್ರಸಾದದ ಮಹಿಮೆಯನೆ ಕಂಡು ಶರಣನು ತನಗೆ ತಾನೇ ಶರಣೆನುತ್ತಿರ್ದನೆಂಬುದೀಗ ಈ ಪ್ರಸಾದದಾದಿಕುಳವ ಬಲ್ಲಡೆ ಆತ ಪ್ರಸಾದಿ. ಆ ಪ್ರಸಾದಿಯ ಬಿಟ್ಟು ಪ್ರಸಾದವಿಲ್ಲ. ಪ್ರಸಾದವೂ ಪ್ರಸಾದಿಯೂ ಕೂಡಿ ಸೋಂಕದ ಪದಾರ್ಥವಿಲ್ಲ. ಇದು ಕಾರಣ ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಪ್ರಸಾದಿಯ ಪ್ರಸಾದದಿಂದೆ ಮೂರು ಲೋಕವೆಲ್ಲ ಜೀವಿಸಿತ್ತಾಗಿ ಇಂತಪ್ಪ ಪ್ರಸಾದಿಗೆ ನಮೋ ನಮೋ ಎನುತಿರ್ದೆನು ಎಂಬುದಕ್ಕರ್ಥ.

ಆ ಪ್ರಸಾದಿಯ ಅನುಭಾವವು ಹೇಗೆ ಇದ್ದಿತೆಂದೊಡೆ ಹೇಳುತ್ತಿರ್ದಪಂ.

(೨೦) ಅನುಭಾವ ನೆಲೆಗೊಂಡಲ್ಲದೆ ಅಂಗಲಿಂಗದ ಹೊಲಬನರಿಯಬಾರದು. ಅನುಭಾವ ನೆಲೆಗೊಂಡಲ್ಲದೆ ಭಕ್ತಿವಿರಕ್ತಿ ನೆಲೆಗೊಳ್ಳದು.



ಅನುಭಾವ ನೆಲೆಗೊಂಡಲ್ಲದೆ ಜ್ಞಾನ ಸುಜ್ಞಾನದ ನೆಲೆಯ ಕಾಣಬಾರದು. ಅನುಭಾವ ನೆಲೆಗೊಂಡಲ್ಲದೆ ತಾನಿದಿರೆಂಬುದ ತಿಳಿದು ತಾನು ತಾನಾಗಬಾರದು. ಇದು ಕಾರಣ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮನುಭಾವದಲ್ಲಿಪ್ಪವರ ನೀವೆಂದೇ ಕಾಂಬೆನು.

ಟೀಕು॥ ಉಭಯ ಕರ್ಮಂಗಳು ಸಮವಾಗಿ ಉಳಿದ ಕರಣಂಗಳು ಪಾಕವಿಲ್ಲದೆ ಇದ್ದರೆ ಪರಮೇಶ್ವರ ಜ್ಞಾನ ಶಕ್ತಿ ವಿರುದ್ಧವಾಗಿ, ತಿರೋಧಾನ ಶಕ್ತಿಯೆನಿಸಿ ಭೋಗವನು ಕೊಡುವದು. ಅಂಥ ಭೋಗಂಗಳಿಂದೆ ಪ್ರತಿಕಲ್ಪಂಗಳಲ್ಲಿಯೂ ಆತ್ಮನು ತೊಳತೊಳಲಿ ಬರುತ್ತಿರಲು, ಒಂದಾನೊಂದು ಕಾಲದಲ್ಲಿ ಭೋಗ್ಯವಾದ ಸಮಸ್ತ ಕರ್ಮವು ಪರಿಪಕ್ವವಾಗಿ ಅವರೊಳು ಉಭಯ ಕರ್ಮ ಸಾಮ್ಯವಾದೊಡೆ ಆತ್ಮಂಗೆ ಜಗದ್ಬಂಧುವಾದ ಶಿವನು ತನ್ನ ಜ್ಞಾನ ಶಕ್ತಿಯನ್ನು ಪರಾಭಿಮುಖವಾಗಿ ಪ್ರಸಾದವನು ಕರ್ಮ ಸಾಮ್ಯವೇ ಭಕ್ತಿ ಪಾತಕ್ಕೆ ಕಾರಣವಲ್ಲ. ಅದೇಕೆಂದೊಡೆ "ಬುದ್ಧಿಃ ಕರ್ಮಾನುಸಾರಿಣೀ" ಎಂದು ಆ ಕರ್ಮವು ಬುದ್ಧಿಯಲ್ಲಿರುವುದು. ಆ ಬುದ್ಧಿ ಮಾಯಾಧೀನವಾಗಿರಲು, ಆ ಮಾಯೆಯಲ್ಲಿ ಮಲತ್ರಯಂಗಳಿರುವವು. ಆ ಮಲತ್ರಯಂಗಳ ಪರಿಪಾಕವು ಶಕ್ತಿಪಾತಕ್ಕೆ ಕಾರಣವಪ್ಪುದು. ಅಂತದರಿಂ ವಿಮಲಶಕ್ತಿಯು ಅಧಿಕಾರ ನಿವೃತ್ತಿಯಿಂದ ಆ ಮಲಶಕ್ತಿ ತೊಲಗುವಲ್ಲಿ ಜಗದ್ಬಂಧುವಾದ ಶಿವನು ಆತ್ಮಂಗೆ ಜ್ಞಾನ ಕ್ರಿಯಾ ಶಕ್ತಿಗಳ ಅನಂತತೆಯನು ಪ್ರಕಟವ ಮಾಡುತ್ತಿಹನು. ಇಂತು ಶಕ್ತಿಪಾತೋದಯವಾದಾತಂಗೆ ಆ ಜ್ಞಾನಪಾತಪತ್ತಣಿಂದ ಆತ್ಮಾನಾತ್ಮವಿವೇಕವು ಆಕಸ್ಮಿಕವಾಗಿ ಪುಟ್ಟುವುದು. ಪಿಂಡ ಜ್ಞಾನಿಗಳಾದ ಕೆಲವಾತ್ಮರುಗಳಿಗೆ ಪುನರಾವೃತ್ತಿ ಇಲ್ಲದಿರಲೋಸ್ಕರವಾಗಿ ಶಿವಭಕ್ತಿ ಪಾತವಾಯಿತು. ಅವರುಗಳಿಗೆ ಮುಕ್ತಿಯೆಲ್ಲಿಯದು ? ಲವಲವಿಕೆಯಾದ ಸಂಸಾರದಲ್ಲಿಯ ಹೇಯವೂ ಶಿವಭಕ್ತರಲ್ಲಿಯ ಶಿವನಲ್ಲಿಯ ಶಿವಾಗಮಂಗಳಲ್ಲಿಯ ಭಕ್ತಿ ವಿಶ್ವಾಸವೂ ಪುಟ್ಟುವವು. ಈ ಗುಣಂಗಳಾದಿಯಾಗಿ ಜ್ಞಾನಕ್ರಿಯಾ ಭೇದವಾದ ಅನಂತ ವಿಚಾರವು ಆವನಾನೊಬ್ಬನ ಹೃದಯದೊಳಗೆ ಶಿವಭಕ್ತಿ ಪಾತಚಿನ್ಹವು ಆ ವೇಳೆಗೆ ಹೊಳೆವುದು. ಆ ಹೊಳೆದಾಕ್ಷಣದಲ್ಲಿಯೇ ಆತನ ಮನವು ಆ ಹೊಳಹಿನೊಳಗಳಿದು ಆವ ಲಕ್ಷಣ

ದೊಳಗೆ ನಿಲುವುದು ಆ ಲಕ್ಷಣವೇ ಅಂಗವೆನಿಸುವುದು. ಆ ಅಂಗದಲ್ಲಿ ಕನಕಕಾಂತಿಯಂತೆ ಲಿಂಗವು ಹೆರೆಹಿಂಗದೆ ಇದ್ದಿತೆಂಬುದೀಗ ಅನುಭಾವ ನೆಲೆಗೊಂಡಲ್ಲದೆ ಅಂಗ ಲಿಂಗದ ಹೊಲಬನರಿಯಬಾರದು ಎಂಬುದಕ್ಕರ್ಥ. ಆ ವಿವೇಕವೇ ಪಂಚೇಂದ್ರಿಯಂಗಳ ಪ್ರಪಂಚವನಳಿದು ಪಂಚಾಚಾರ ದಲ್ಲಿ ಪರಿಪೂರ್ಣವಾಗಿ ಅಷ್ಟಾವರಣದಲ್ಲಿ ದೃಷ್ಟಿಯಾಗಿಪ್ಪುದೀಗ ಭಕ್ತಿ ಮಾಯಾಜನಿತದ ಸಮಸ್ತ ಪದಾರ್ಥದ ಮೇಲಣ ಹೇಯೋಪಾದೇಯ ಗಳಿಲ್ಲದೆ ಉದಾಸೀನವಾಗಿಪ್ಪುದೀಗ "ವಿರಕ್ತಿರ್ವ್ಯಾಲುಂಪೆದ್ವ್ಯಂಜನೆದ್ವೆ" ಎಂದುದಾಗಿ ಜ್ಞಾತೃಜ್ಞೇಯ ರೂಪಂಗಳಾದ ಸಕಾರ ಹಕಾರವೆಂಬ ವ್ಯಂಜ ನಾಕ್ಷರಂಗಳ ಲೋಪದಿಂದುಳಿದ ಸರ್ವಜ್ಞೈತನ್ಯಾಂತರ್ಯಾಮಿಯಾದ ಪ್ರಣವ ಬೀಜದಲ್ಲಿ ಗುರು ಕಾರುಣ್ಯದ ದೃಷ್ಟಿ ಯಾವುದುಂಟು ಅದೀಗ ಜ್ಞಾನ. ಅಂಥ ಗುರು ಕಾರುಣ್ಯದ ದೃಷ್ಟಿಯಲ್ಲಿ ಮನೋಲಯವಹುದು ಅದೀಗ ಸುಜ್ಞಾನ. ದೃಗ್ದೃಶ್ಯದಿಂದಿದಿರಿಟ್ಟ ಆ ದೃಗ್ದೃಶ್ಯಂಗಳನು ತಿಳಿದು ಚಿದಾಕಾಶ ಮಧ್ಯದಲ್ಲಿ ತಾನು ತಾನಾಗಿರುವುದು ಪೂರ್ವೋಕ್ತ ವಿವೇಕ ಜಿತವಾದಲ್ಲದಾಗದಾಗಿ ಅದೀಗ ಅನುಭಾವ ನೆಲೆಗೊಂಡಲ್ಲದೆ ಭಕ್ತಿ ವಿರಕ್ತಿ ನೆಲೆಗೊಳ್ಳದು. ಅನುಭಾವ ನೆಲೆಗೊಂಡಲ್ಲದೆ ಜ್ಞಾನ ಸುಜ್ಞಾನದ ನೆಲೆಯ ಕಾಣಬಾರದು. ಅನುಭಾವ ನೆಲೆಗೊಂಡಲ್ಲದೆ ತಾನು ತಾನಾಗ ಬಾರದು ಎಂಬುದಕ್ಕರ್ಥ. ಹಿಂದೆ ಹೇಳಿದ ರಮಣೀಯ ಗುಣಂಗಳು ಊರ್ಧ್ವ ಹೃದಯವೆಂಬ ಬಿಂದು ದ್ವಾರದಲ್ಲಿ ಹುಟ್ಟಿ ಕಾಯಗುಣ ಕಮಲಗಳಿಗೆ ಮತ್ತ ಕುಂಜರವೆನಿಸಿ ಆ ದ್ವಾರದಲ್ಲಿಯೇ ನಿವೃತ್ತಿ ಜ್ಞಾನ ವಳಿದು ಸರ್ವತೋ ಮುಖ ತಾನೆಯಾಗಿ ನಿಂದ ಶಿವಯೋಗಿ ಶಿವನೆಂಬು ದೀಗ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮನುಭಾವದಲ್ಲಿಕ್ಷ ಪರನು ನೀವೆಂದು ಕಾಂಬೆನು ಎಂಬುದಕ್ಕರ್ಥ.

"ಅಕಾರೊ ಲಿಂಗಮೇವೋಕ್ತಂ ನುಕಾರೊ ಜೀವ ಉಚ್ಯತೆ। ಭಾವ ಸ್ಸಂಯೋಗ ಏವೋಕ್ತೊ ಅನುಭಾವೊ ನಿಗದ್ಯತೆ" ಎಂದು ಈ ಗ್ರಂಥಾರ್ಥ ವನೆ ಮುಂದೆ ಪೇಳುತ್ತಿದ್ದಾನು.

(೨೧) ಅನುಭಾವವ ನುಡಿವ ಅಣ್ಣಗಳಿರಾ ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ. ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂದು



ತಾನಿದಿರೆಂಬುದ ತೋರದು. ಅನುಭಾವವೆಂಬುದು ನಿಜ ನಿವಾಸದಲ್ಲಿ ರಿಸುವುದು. ಇಂತಪ್ಪ ಅನುಭಾವದನುವನರಿಯದೆ ಶಾಸ್ತ್ರ ಜಾಲದ ಪಸ ರವನಿಕ್ಕಿ ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ ನೀವೆತ್ತ ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರನ ಅನುಭಾವವೆತ್ತ ಹೋಗಿರಣ್ಣಾ.

ಟೀಕು— ವಿವೇಕದಿಂದ ಪರಬ್ರಹ್ಮದ ಮಾತ ನುಡಿವವರಿಗೆ ಆ ಪರ ಬ್ರಹ್ಮವು ಸಾಕ್ಷಿಯಾಗಿಪ್ಪುದಲ್ಲದೆ ಅವರೊಳಗೆ ಬೆರೆದು ನಿಜಮೋಕ್ಷವ ಕೊಡಲರಿಯದು. ಅದೆಂತೆಂದೊಡೆ:—ಅವರು ಪ್ರಾರಬ್ಧ ಕರ್ಮದ ಎಂಜಲ ಮಾತನೆ ಕಲಿತು ಅಂಜದೆ ಮಾತಿನ ಬಣಬೆಯ ಮುಂದಿಟ್ಟುಕೊಂಡು ನೀತಿಶಾಸ್ತ್ರದ ಒಂದೊಂದು ಗ್ರಂಥಂಗಳನೆ ನುಡಿದು ಇಲ್ಲದರಿವನುಂಟು ಮಾಡಿಕೊಂಡು ನುಡಿವವರಲ್ಲದೆ ತಮ್ಮ ನಿಜವ ತಿಳಿದು ಪರಿಣಾಮಿಸ ಲರಿಯದ ಕಾರಣ ಅವರಿಗೆ ಪರಬ್ರಹ್ಮವು ಬೇರಾಗಿದ್ದಿತೆಂಬುದೀಗ ಅನು ಭಾವವ ನುಡಿವ ಅಣ್ಣಗಳಿರಾ, ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ ಎಂಬುದಕ್ಕರ್ಥ. ವಿವೇಕವೆಂಬುದು ಆತ್ಮಜ್ಞಾನ. ಅದು ಹೇಗೆಂದೊಡೆ; "ಅಶರೀರಂ ಯಥಾತ್ಮಾನಂ ಪಶ್ಯಂತಿ ಜ್ಞಾನಚಕ್ಷುಷಾ। ತಥಾಭವತಿಶಾಂ ತಾತ್ಮಾ ಸರ್ವತೋಭಿಗತಃ ಸ್ಮೃತಃ" ಎಂದು ಆವುದಾನೊಂದು ವೇಳೆ ಯಲ್ಲಿ ಜ್ಞಾನಚಕ್ಷುವಿನಿಂದ ತನ್ನನು ಶರೀರವಿಲ್ಲದಾತನಾಗಿ ಕಾಣುತ್ತಿ ಹನು, ಆ ವೇಳೆಯಲ್ಲಿ ಪ್ರಸನ್ನಾತ್ಮನಾದಂಥಾತನು ಎಲ್ಲಾ ಕಡೆಯಲ್ಲಿಯೂ ಹೋಗಲ್ಪಟ್ಟ ಆಸೆಗಳನುಳ್ಳಂಥಾತನಾಗುತ್ತಿಹನೆಂಬುದೀಗ ಅನುಭಾವ ವೆಂಬುದು ಆತ್ಮ ವಿದ್ಯೆ ಎಂಬುದಕ್ಕರ್ಥ. ಅಂತಪ್ಪ ಜ್ಞಾನಚಕ್ಷು ಆವಾ ತಂಗುಂಟು ಅಂಥಾತಂಗೆ ಶರೀರವಿದಿರಿಟ್ಟು ಇಹುದೆಂಬುದೀಗ ಅನುಭಾ ವವೆಂಬುದು ತಾನಿದಿರೆಂಬುದ ತೋರದು ಎಂಬುದಕ್ಕರ್ಥ. ಅಂಥ ಸೋಹಂ ಎಂಬ ಜ್ಞಾನ ಚಕ್ಷುವಿನ ಮುಂದಿದಿರಿಟ್ಟ ಆ ಶರೀರವನು ಆ ಜ್ಞಾನಚಕ್ಷುವಿನಲ್ಲಿ ಲೀನಮಾಡಿ ತಾನು ಅತೀಂದ್ರಿಯದಲ್ಲಿ ಲಯವಾಗಲು ಎಂಬುದೀಗ ಅನುಭಾವವೆಂಬುದು ನಿಜ ನಿವಾಸದಲ್ಲಿರಿಸುವುದು ಎಂಬುದ ಕ್ಕರ್ಥ. ಅಂಥ ಅತೀಂದ್ರಿಯದ ಪ್ರತ್ಯಕ್ಷವನರಿಯದೆ ಸಂಸ್ಕೃತಪ್ರಾಕೃತ

ತತ್ವ ಶಾಸ್ತ್ರಂಗಳ ಮಾತನೆ ಕಲಿತು ಪಠಿಸಿ ಅರಿಯದವರ ಗೆಲಬೇಕೆಂದು ಇದಿರು ವಾದವನೆ ಮಾಡಿ ಹೊತ್ತಿನ ಹೊರಟೆಯಂತೆ ವೃಥಾ ಆದರೆಂಬುದೀಗ ಇಂತಪ್ಪ ಅನುಭಾವದನುವನರಿಯದೆ ಶಾಸ್ತ್ರಜಾಲದ ಪಸರವನಿಕ್ಕಿಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ ನೀವೆತ್ತ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಅನುಭಾವವೆತ್ತ ಹೋಗಿರಣ್ಣ ಎಂಬುದಕ್ಕರ್ಥ.

ದಯೆಯಿಂ ಶ್ರೀಗುರುಸಿದ್ಧಲಿಂಗಯತಿವರ್ಯಂಸಾಧಕರ್ಗೆಪೇಳ್ದೆ ಸಂ ।
ದೆಯುಮೆಲ್ಲಂ ಪರಿವಂತಿರೊಲ್ದೊರೆದ ವಾಕ್ಯಾನೀಕದೊಳ್ನಿರ್ಮಲಾ ॥
ಶಯರಾನಂದಿಸಲಾಯ್ತು ಟೀಕಿಸುತದಂ ಮುಕ್ತ್ಯಂಗನಾಕಂಠಮಾ ।
ಲೆಯದೆಂಬಾ ಪೆಸರಿಟ್ಟು ತೋರ್ಪಡಿಸಿದಂ ಶ್ರೀಚೆನ್ನದೇವಾಹ್ವಯಂ॥

---

# ಜ್ಯೋತಿರ್ಮಯಶಾಂಭವೀಜ್ಞಾನ ದೀಕ್ಷಾಬೋಧೆ.

(೧) ವೀರಶೈವವೆಂಬುದು ಒಂದು ಅರಣ್ಯ ಮಧ್ಯದಲ್ಲಿ ಒಬ್ಬ ಪರ್ಣ ಭಕ್ಷಕನು ಹೇಳಿದುದು ಅಲ್ಲ, ಒಬ್ಬ ಮಾಂಸ ಭಕ್ಷಕನು ಕೇಳಿದುದು ಅಲ್ಲ. ವೀರಶೈವವೆಂಬುದು ಒಂದು ವನದಲ್ಲಿರ್ದ ವಾಯು ಭಕ್ಷಕನು ಹೇಳಿದುದು ಅಲ್ಲ, ಒಬ್ಬ ಸುರಾಪಾನ ಮಾಡುವವನು ಕೇಳಿದುದು ಅಲ್ಲ. ವೀರಶೈವವೆಂಬುದು ಒಂದು ಪರ್ವತದಲ್ಲಿ ಒಬ್ಬ ದೇಹಿ ಹೇಳುದುದು ಅಲ್ಲ, ಒಬ್ಬ ದೇಹಧಾರಕನು ಕೇಳಿದುದು ಅಲ್ಲ. ವೀರಶೈವವೆಂಬುದು ಅನಂತಕೋಟಿ ವೇದ ಶಾಸ್ತ್ರ ಪುರಾಣಾಗಮ ಮಂತ್ರಾರ್ಥ ಸಾರಸುಧಾರಸವು. ಪರಮಶಿವ ಪರಮಾರ್ಥ ಪರತತ್ವ ಪರಮಾತ್ಮ ಪರಬ್ರಹ್ಮ ಪರಮಲಿಂಗ ಪರಾಪರ ವಸ್ತುವಾದ ಪರಮೇಶ್ವರನು. ಈ ವೇದಾರ್ಥಸಾರಸುಧಾರಸವನು ಸೂಕ್ಷ್ಮವಾಗಿ ಸಂಗ್ರಹಿಸಿ, ಹನ್ನೆರಡು ಕೋಟಿ ಹನ್ನೆರಡು ಲಕ್ಷ ಹನ್ನೆರಡು ಸಾವಿರ ಪರಮ ರಹಸ್ಯವ ಮಾಡಿ, ಶಂಭುಮೂರ್ತಿ ಶಾಂಭವಿಗೆ ಉಪದೇಶವಿತ್ತ ತಾವು ಎಲ್ಲಿ ಎಂದರೆ ಪರಮಚಿದಬ್ಧಿ ಎಂಬ ಸಮುದ್ರ ಮಧ್ಯದಲ್ಲಿ ಜ್ಯೋತಿರ್ಮಯ ವಡಬಾನಲ ಮಂಟಪದಲ್ಲಿ ಒಂದು ನಿರುಪಮ ದಿವ್ಯ ಮಾಣಿಕ್ಯಸಿಂಹಾಸನ, ಆ ಸಿಂಹಾಸನ ಮಧ್ಯದಲ್ಲಿ ಅನಂತ ಕೋಟಿ ವೇದಂಗಳಿಗೆ ತಾಯಿಯಾದ ಗಾಯತ್ರೀ ಮಂತ್ರವ ಹಾಸಿಗೆಯ ಮಾಡಿ, ಚಿತ್ಪ್ರಣವವ ಪಾದದ ಕಡೆ, ಶುದ್ಧ ಪ್ರಣವವ ಮಸ್ತಕದ ಕಡೆ ಮಾಡಿ, ಆ ಮಧ್ಯದಲಿ ಪರಶಿವನು ಶಾಂಭವಿಗೆ ನಿರಂಜನಪ್ರಣವ ಯುಕ್ತವಾಗಿ ಉಪದೇಶಿಸಿದ ಪರಮರಹಸ್ಯ. ಈ ರಹಸ್ಯವನು ಪರಮಪರಾಪರ ಪರಮಾರ್ಥ ಪರಮಾತ್ಮ ಪರಬ್ರಹ್ಮ ಪರಶಿವಮೂರ್ತಿಯಾದ ಅಲ್ಲಮಪ್ರಭುದೇವರು ಕಲ್ಯಾಣ ಪಟ್ಟಣದಲ್ಲಿ ಬಸವಾದಿ ಪ್ರಮಥ ಗಣಂಗಳಿಗೆ ಎರಡೆಂಬತ್ತು ಕೋಟಿ ಬೆಡಗಿನ ವಚನಂಗಳಿಂದೆ ಉಪದೇಶವ ಮಾಡಿದರು. ಆ ಪರಮ ರಹಸ್ಯಾರ್ಥವನು ಪಾಲ್ಕುರಿಕೆ

ಸೋಮೇಶ್ವರನು ಸಂಗಯ್ಯನೆಂಬ ಶರಣನಿಗೆ ನೂರರುವತ್ತು ವಚನವ ಉಪದೇಶಿಸಿದನು ಗುಹೇಶ್ವರಾ.

(೨) ಆದಿಮಧ್ಯಾಂತವಿಲ್ಲದ, ನಾದಬಿಂದು ಕಳೆಗಳಿಲ್ಲದ, ಸಾವಯವ ನಿರವಯವವಿಲ್ಲದ, ರೂಪು ನಿರೂಪವಿಲ್ಲದ, ನಾಮ ನಿರ್ನಾಮವಿಲ್ಲದ, ಸೀಮೆ ನಿಸ್ಸೀಮೆಯಿಲ್ಲದ, ಕಾಣುವದಕ್ಕೆ ಕೇಳುವದಕ್ಕೆ ಇಲ್ಲದ, ನಿನ್ನ ನೀನರಿಯದೆ ನೀನೇ ನೀನಾಗಿರ್ದಲ್ಲಿ ನಿನ್ನ ಕೋಟ್ಯಂಶದಲ್ಲಿ ನಿರಂಜನ ಕಳೆ ಹುಟ್ಟಿತು. ಆ ನಿರಂಜನ ಕಳೆಗೆ ನಾದಬಿಂದು ಕಳೆಗಳಿಲ್ಲದೆ ಆದಿ ಮಧ್ಯಾಂತವಾದ ಅಂಗವಿಲ್ಲದ ಕಳೆ, ಆ ಕಳೆಯೇ ನಾನು, ಆ ವಸ್ತುವೇ ನೀನು, ಆ ನಿರಂಜನ ಕಳೆಯೇ ಅಂಗವಾಗಿ, ಆ ವಸ್ತುವೇ ಲಿಂಗವಾಗಿ, ಕೂಡಲಿಕ್ಕೆ ಕಾಷ್ಠದಲ್ಲಿ ಅಗ್ನಿ ಇದ್ದ ಹಾಗೆ ನಿರಂಜನ ಪ್ರಣವ ಒಂದು ಮಹಾ ಶೂನ್ಯಲಿಂಗವೆಂದು ಹೇಳಲ್ಪಟ್ಟಿತು ಗುಹೇಶ್ವರಾ.

(೩) ನೀವು ನಿಮ್ಮ ಸ್ವಲೀಲೆಯಿಂದ ನಿರಂಜನಪ್ರಣವದ ಕೋಟ್ಯಂಶ ದಲ್ಲಿ ಶೂನ್ಯಲಿಂಗವಾದಲ್ಲಿ ಆದಿಮಧ್ಯಾಂತಂಗಳಿಲ್ಲದ. ನಾದಬಿಂದು ಕಳೆ ಗಳಿಲ್ಲದ, ಸಾವಯವ ನಿರವಯವ ನಾಮ ನಿರ್ನಾಮಂಗಳಿಲ್ಲದ, ರೂಪು ನಿರೂಪು ಸೀಮೆ ನಿಸ್ಸೀಮೆಗಳಿಲ್ಲದ, ಕಾಣುವದಕ್ಕೆ ಕೇಳುವದಕ್ಕೆ ಇಲ್ಲದ, ನಿನ್ನ ನೀನರಿಯದೆ, ನೀನೇ ನೀನಾಗಿರ್ದ ಕೋಟ್ಯಂಶದಲ್ಲಿ ಪರಮ ಚಿತ್ಕಳೆ ಪುಟ್ಟಿತು. ಆ ಪರಮ ಚಿತ್ಕಳೆಗೆ ನಾದಬಿಂದು ಕಳೆಗಳಿಲ್ಲದ ಆದಿ ಮಧ್ಯ ಅಂತ್ಯವಾದ ಅಂಗವಿಲ್ಲದ ಕಳೆ, ಆ ಕಳೆಯೇ ನಾನು, ಆ ವಸ್ತುವೇ ನೀನು. ಆ ಪರಮ ಚಿತ್ಕಳೆಯೆ ಅಂಗವಾಗಿ ಆ ಶೂನ್ಯ ವಸ್ತುವೇ ಲಿಂಗ ವಾಗಿ ಕೂಡಲಿಕ್ಕೆ ರನ್ನವು ರನ್ನದ ಕಾಂತಿ ಇದ್ದ ಹಾಗೆ ಪ್ರಣಮವೆಂದ, ಸ್ವಯಂಭುಲಿಂಗವೆಂದು ಹೇಳಲ್ಪಟ್ಟಿತು ಗುಹೇಶ್ವರಾ.

(೪) ನೀವು ನಿಮ್ಮ ಸ್ವಲೀಲೆಯಿಂದ, ಶುದ್ಧಪ್ರಣವದಕೋಟ್ಯಂಶ ದಲ್ಲಿ ನಿಷ್ಕಳ ಲಿಂಗವಾದಲ್ಲಿ ಆದಿಮಧ್ಯಾಂತಂಗಳಿಲ್ಲದ, ನಾದಬಿಂದುಕಳೆಗಳ ಲ್ಲದ, ಸಾವಯವ, ನಿರವಯವ, ಭಾವ, ಸದ್ಭಾವ, ನಿರ್ಭಾವವಿಲ್ಲದ, ರೂಪು ನಿರೂಪು ನಿಷ್ಕಾಮ ನಿರ್ನಾಮ ನಿರ್ಮಾಯವಿಲ್ಲದ ಕಾರಣ ಅರಿವು ಮರವೆಯಿಲ್ಲದ, ಮನೋಜ್ಞಾನಭಾವಮುದಗಳಿಲ್ಲದ ಜ್ಞಾತೃಜ್ಞಾನ ಜ್ಞೇಯ



ಅಜ್ಞಾನ ಸುಜ್ಞಾನಂಗಳಿಲ್ಲದ, ದ್ವೈತಾದ್ವೈತವಿಲ್ಲದ, ನಿನ್ನ ನೀನರಿಯದೆ ನೀನೇ ನೀನಾಗಿರ್ದ ಕೋಟ್ಯಂಶದಲ್ಲಿ ಸಚ್ಚಿದಾನಂದ ಕಳೆ ಪುಟ್ಟಿತು. ಆ ಸಚ್ಚಿದಾನಂದಕಳೆಗೆ ನಾದಬಿಂದುಕಳೆಗಳಿಲ್ಲದ ಆದಿಮಧ್ಯ ಅಂತ್ಯವಾದ ಅಂಗವಿಲ್ಲದ ಕಳೆ. ಆ ಕಳೆಯೇ ನಾನು ಆ ವಸ್ತುವೇ ನೀನು. ಆ ಕಳೆಯೇ ಅಂಗವಾಗಿ ಆ ವಸ್ತುವೇ ಲಿಂಗವಾಗಿ ಕೂಡಲು, ಮಂಜಿನ ಶೈತ್ಯದ ಹಾಗೆ ಚಿತ್ಪ್ರಣವವೆಂದು ಆದಿಮಹಾಲಿಂಗವೆಂದು ಹೇಳಲ್ಪಟ್ಟಿತು ಗುಹೇಶ್ವರಾ.

(೫) ನೀವು ನಿಮ್ಮ ಸ್ವಲೀಲೆಯಿಂದ ಚಿತ್ಪ್ರಣವದ ಕೋಟ್ಯಂಶದಲ್ಲಿ ನಿಷ್ಕಳಶಿವನಾದಲ್ಲಿ ಘೃತಕಾಠಿಣ್ಯನ್ಯಾಯದ ಹಾಗೆ ಸಮಸ್ತ ಮೂರ್ತಿಗಳ ಸಮಸ್ತ ಶಕ್ತಿಗಳ, ಸಮಸ್ತ ಬ್ರಹ್ಮಾಂಡಗಳ ಉತ್ಪತ್ತಿ ಸ್ಥಿತಿಲಯಗಮ ನಂಗಳ ತನ್ನಲ್ಲಿಯೇ ಮಾಡಿ ತಾನೇ ಆಶ್ರಯವಾಗಿ ತಾನೇ ನೋಡಿ ಸಂತೋಷಿಸಿ, ತನ್ನ ಹೊರಗೆ ಕಾಣಿಸದೆ ಅನಂತಕೋಟಿ ಸೂರ್ಯ ಚಂದ್ರಾಗ್ನಿ ಕಳೆಗಳಂ ಮೀರಿ ಅನುಪಮ ಚಿದ್ರೂಪ ಸ್ವರೂಪವಾದ ನಿಷ್ಕಳ ಶಿವನ ಕೋಟ್ಯಂಶದಲ್ಲಿ ಪರಮಕಳೆ ಹುಟ್ಟಿತ್ತು. ಆ ಪರಮ ಕಳೆ ನಾದಬಿಂದುಕಳಾಸ್ವರೂಪವಾಗಿ ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವಾಗಿ ಸಮಸ್ತ ಮೂರ್ತಿಗಳೊಡನೆ ಸಮಸ್ತ ಶಕ್ತಿಗಳೊಡನೆ ಸಮಸ್ತ ತತ್ವಂಗಳೊಡನೆ ಸಮಸ್ತ ಬ್ರಹ್ಮಾಂಡಗಳೊಡನೆ ಹುಟ್ಟಿದ ಆ ಪರಮಕಳೆಯೇ ನಾನು, ಆ ವಸ್ತುವೇ ನೀನು. ಆ ಪರಮಕಳೆಯೇ ಅಂಗವಾಗಿ ಆ ವಸ್ತುವೇ ಲಿಂಗವಾಗಿ ಕೂಡಲು, ಕ್ಷೀರದೊಳಗಣ ಘೃತದ ಹಾಗೆ ಸಮಸ್ತಭಕ್ತಹಿತಾರ್ಥವಾಗಿ ಸಾಕಾರವೆನಿಸಿ, ಓಂಕಾರಪ್ರಣವ ವೆಂದು ಮಹಾಲಿಂಗವೆಂದು ಹೇಳಲ್ಪಟ್ಟಿತು ಗುಹೇಶ್ವರಾ. ಇದು ಸರ್ವ ಶೂನ್ಯನಿರಾಲಂಬಸೃಷ್ಟಿ.

(೬) ಆ ಅಖಂಡಪರಿಪೂರ್ಣ ತೇಜೋಮಯಗೋಳಕಾಕಾರ ಮಹಾಲಿಂಗದಲ್ಲಿ ವಾಚ್ಯಸೃಷ್ಟಿ, ಅವಾಚ್ಯಸೃಷ್ಟಿಯೆಂದು ಎರಡು ಪ್ರಕಾರವಾ ಯಿತು. ಆ ಎರಡರಲ್ಲಿ ವಾಚ್ಯಸೃಷ್ಟಿ ಹೇಗೆಂದೊಡೆ;— ಆ ಮಹಾಲಿಂಗ ದಲ್ಲಿ ಈಶ್ವರ, ಮಹೇಶ್ವರ, ಸದಾಶಿವರೆಂದು ತ್ರಿಮೂರ್ತಿಗಳು ಹುಟ್ಟಿ

ಸಕಲ, ನಿಷ್ಕಲ, ಕೇವಲನಿಷ್ಕಲರೆನಿಸಿ, ಸಕಲ ಮೂರ್ತಿಗಳ ಸಕಲ ಶಕ್ತಿಗಳ ಸಕಲ ತತ್ವಂಗಳ ಸಕಲ ಚಿದ್ಬ್ರಹ್ಮಾಂಡಂಗಳ ಹುಟ್ಟಿಸಿ, ತಮ್ಮಲ್ಲಿಯೇ ವಿನೋದಿಸುವರು ಗುಹೇಶ್ವರಾ. ಇದು ಶೂನ್ಯ ನಿರಾಲಂಬ ಸೃಷ್ಟಿ.

(೭) ಅಖಂಡಪರಿಪೂರ್ಣ ತೇಜೋಮಯ ಗೋಳಕಾಕಾರಮೂರ್ತಿಯಾದ ಮಹಾಲಿಂಗವು ವಿಶ್ವತೋಮುಖ, ವಿಶ್ವತೋ ನೇತ್ರ. ವಿಶ್ವತೋ ಬಾಹು, ವಿಶ್ವತಃ ಪಾದ ಸರ್ವಪರಿಪೂರ್ಣಸರ್ವಜ್ಞ ಮೂರ್ತಿಯಾಗಿರುವುದು. ವಟಬೀಜನ್ಯಾಯದಂತಿರ್ದ ಆ ಮಹಾಲಿಂಗದ ಸಹಸ್ರಾಂಶದಲ್ಲಿ ಚಿಚ್ಛಕ್ತಿ ಹುಟ್ಟಿತು. ಆ ಚಿಚ್ಛಕ್ತಿಯ ಸಹಸ್ರಾಂಶದಲ್ಲಿ ಪರಮೇಶ್ವರ ಹುಟ್ಟಿದನು. ಆ ಪರಮೇಶ್ವರನಿಗೆ ಏಕಮುಖ, ತ್ರಿನೇತ್ರ, ದ್ವಿಹಸ್ತ, ದ್ವಿಪಾದ, ತನುವೇಕವು. ಆನಂದಮಯನಾಗಿ ಕಳೆಗಳನ್ನೆಲ್ಲಾ ಮೀರಿ ಜ್ಞಾನಗಮ್ಯನಾಗಿರ್ದ ಆ ಪರಮೇಶ್ವರನ ಸಹಸ್ರಾಂಶದಲ್ಲಿ ಪರಾಶಕ್ತಿ ಹುಟ್ಟಿತು. ಆ ಪರಾಶಕ್ತಿಯ ಸಹಸ್ರಾಂಶದಲ್ಲಿ ಸದಾಶಿವಮೂರ್ತಿ ಹುಟ್ಟಿದನು. ಆ ಸದಾಶಿವನಿಗೆ, ದ್ವಿಮುಖ, ಷಣ್ಣೇತ್ರ, ನಾಲ್ಕುಹಸ್ತ, ದ್ವಿಪಾದ, ಸುವರ್ಣ ವರ್ಣದೇಹವು. ಮನೋಗಮ್ಯಮೂರ್ತಿಯಾಗಿರ್ದ ಆ ಸದಾಶಿವನ ಸಹಸ್ರಾಂಶದಲ್ಲಿ ಆದಿಶಕ್ತಿ ಹುಟ್ಟಿತು. ಆ ಆದಿಶಕ್ತಿಯ ಸಹಸ್ರಾಂಶದಲ್ಲಿ ಈಶ್ವರನು ಹುಟ್ಟಿದನು. ಆ ಈಶ್ವರನಿಗೆ, ತ್ರಿಮುಖ, ನವನೇತ್ರ. ಷಟ್ ಹಸ್ತ, ದ್ವಿಪಾದ, ಧವಳವರ್ಣ ಶರೀರವು. ಅಹಂಕಾರಗಮ್ಯಮೂರ್ತಿಯಾಗಿರ್ದ ಆ ಈಶ್ವರನ ಸಹಸ್ರಾಂಶದಲ್ಲಿ ಇಚ್ಛಾಶಕ್ತಿ ಹುಟ್ಟಿತು. ಆ ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಮಹೇಶ್ವರ ಹುಟ್ಟಿದನು. ಆ ಮಹೇಶ್ವರನಿಗೆ, ಚತುರ್ಮುಖ, ದ್ವಾದಶನೇತ್ರ, ಎಂಟು ಹಸ್ತ, ದ್ವಿಪಾದ, ಸ್ಫಟಿಕವರ್ಣ ಶರೀರವು. ಬುದ್ಧಿಗಮ್ಯನಾಗಿರ್ದ ಆ ಮಹೇಶ್ವರನ ಸಹಸ್ರಾಂಶದಲ್ಲಿ ಜ್ಞಾನಶಕ್ತಿ ಹುಟ್ಟಿತು. ಆ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಶ್ರೀರುದ್ರಮೂರ್ತಿ ಹುಟ್ಟಿದನು. ಆ ಶ್ರೀರುದ್ರಮೂರ್ತಿಗೆ ಪಂಚಮುಖ, ದಶಭುಜ, ಪಂಚದಶನೇತ್ರ, ದ್ವಿಪಾದ, ಕುಂಕುಮ ವರ್ಣದ ಶರೀರವು. ಚಿತ್ತಗಮ್ಯಮೂರ್ತಿಯಾಗಿರ್ದ ಆ ಶ್ರೀರುದ್ರಮೂರ್ತಿಯ ಸಹಸ್ರಾಂಶದಲ್ಲಿ ಕ್ರಿಯಾಶಕ್ತಿ ಹುಟ್ಟಿತು. ಆ ಕ್ರಿಯಾಶಕ್ತಿಯ ಸಹಸ್ರಾಂಶದಲ್ಲಿ ನಾನಾ ವರ್ಣರೂಪವಾದ



ಈಶಾನಮೂರ್ತಿ ಹುಟ್ಟಿದನು. ಆ ಈಶಾನಮೂರ್ತಿಯು ಸಮಸ್ತವರ್ಣಂಗಳೊಡನೆ ಸಮಸ್ತನಾದಂಗಳೊಡನೆ ಸಮಸ್ತರೂಪಂಗಳೊಡನೆ ಸಮಸ್ತವ್ಯಾಪ್ತ ತಾನೆಯಾದ ಹಾಗೆ ಸಗುಣನಾಗಿ ಸಗುಣನಿರ್ಗುಣನಾಗಿ, ಕೇವಲ ನಿರ್ಗುಣನಾಗಿ ವರ್ತಿಸುವನು. ಸಾವಯವನಾಗಿ, ನಿರವಯವನಾಗಿ, ಷಟ್ ವಕ್ತ್ರ, ದ್ವಾದಶಹಸ್ತ, ಅಷ್ಟಾದಶನೇತ್ರ, ದ್ವಿಪಾದ, ತನುವೇಕವಾಗಿರ್ದೆಯಲ್ಲಾ ಗುಹೇಶ್ವರಾ. ಇದೀಗ ನಿರಾಳಸೃಷ್ಟಿ.

(೮) ಆ ಈಶಾನಮೂರ್ತಿಯ ಆರು ಮುಖವ ವೇದಶಾಸ್ತ್ರ ಪುರಾಣಾಗಮತಂತ್ರಂಗಳು ನಿರ್ಣಯಿಸಲಾರವು. ಮನು ಮಾಂಧಾತರಿಗೆ ವಾಙ್ಮನಕ್ಕಗೋಚರ. ಅಂತಿರ್ದ ನಿಜ ಚಿನ್ಮಯಮಹಾತತ್ವದ ಗೋಪ್ಯಮುಖದಲ್ಲಿ ನಂದೀಶ್ವರ, ಭೃಂಗೀಶ್ವರ, ದಾರುಕ, ರೇಣುಕ, ಸೌಂದರ, ಸುಮುಖ, ಸುನಾದ, ಭದ್ರ, ವೀರಭದ್ರ ಮೊದಲಾದ ಪ್ರಮಥಗಣಂಗಳು ಮೃಣ್ಮಯರುದ್ರ, ಕಾಲಾಗ್ನಿ ರುದ್ರ, ಶರಭರುದ್ರ, ಸದಾಶಿವರುದ್ರ, ಮೊದಲಾದ ರುದ್ರ ಗಣಂಗಳುದ್ಭವಿಸಿ, ಅವರು ಲಿಂಗಾಂಗ, ಲಿಂಗೇಂದ್ರಿಯ, ಲಿಂಗಪ್ರಾಣ, ಲಿಂಗಮನೋಗತರಾಗಿರ್ದರು ಗುಹೇಶ್ವರಾ. ಇದು ಈಶಾನಮೂರ್ತಿಯ ನಿರ್ಮಲ ಸೃಷ್ಟಿ.

(೯) ಆ ನಿರಾಲಂಬಮೂರ್ತಿಯಾದ ಈಶಾನ್ಯ ಮೂರ್ತಿಯ ಸಹಸ್ರಾಂಶದಲ್ಲಿ ಸದಾಶಿವ ಮೂರ್ತಿ ಹುಟ್ಟಿದನು. ಆ ಸದಾಶಿವ ಮೂರ್ತಿಗೆ ಪಂಚವಕ್ತ್ರ, ದಶಭುಜ, ದಶಪಂಚನೇತ್ರ, ದ್ವಿಪಾದ, ತನುವೇಕ, ಶುದ್ಧ ಸ್ಫಟಿಕ, ಪ್ರದ್ಯೋತ ಸಕಲಾಭರಣ ಭೂಷಿತನಾದ ಸದಾಶಿವ ಮೂರ್ತಿಯ ಸಹಸ್ರಾಂಶದಲ್ಲಿ ಸುವರ್ಣಚ್ಛಾಯೆಯುಳ್ಳ ಚಿಚ್ಛಕ್ತಿ ಹುಟ್ಟಿತು. ಆ ಚಿಚ್ಛಕ್ತಿಯ ಸಹಸ್ರಾಂಶದಲ್ಲಿ ಶಿವನು ಹುಟ್ಟಿದನು. ಆ ಶಿವಮೂರ್ತಿಗೆ ತ್ರಿಮುಖ, ನವನೇತ್ರ, ಷಡುಹಸ್ತ, ದ್ವಿಪಾದ, ತನುವೇಕ, ಧವಳವರ್ಣವುಳ್ಳ ಶಿವಮೂರ್ತಿಯ ಸಹಸ್ರಾಂಶದಲ್ಲಿ ಧವಳವರ್ಣದ ಜ್ಞಾನಶಕ್ತಿ ಹುಟ್ಟಿತು. ಆ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಒಬ್ಬ ಶ್ರೀಕಂಠರುದ್ರ ಮೂರ್ತಿ ಹುಟ್ಟಿದನು. ಆ ಶ್ರೀಕಂಠರುದ್ರಮೂರ್ತಿಗೆ ಏಕವಕ್ತ್ರ. ದ್ವಿಪಾದ, ದ್ವಿಹಸ್ತ, ಕೆಂದಾವರೆಯ ವರ್ಣದ ಶರೀರದ ಶ್ರೀಕಂಠಮೂರ್ತಿಯ ಸಹಸ್ರಾಂಶದಲ್ಲಿ ಹರಿತವರ್ಣದ ಕ್ರಿಯಾಶಕ್ತಿ ಹುಟ್ಟಿತು. ಆ ಕ್ರಿಯಾಶಕ್ತಿಯ ಸಹ

ಸ್ರಾಂಶದಲ್ಲಿ ವಿಷ್ಣು ಹುಟ್ಟಿದನು. ಆ ವಿಷ್ಣುವಿನ ಸಹಸ್ರಾಂಶದಲ್ಲಿ ಲಕ್ಷ್ಮಿ ಹುಟ್ಟಿದಳು. ಆ ಲಕ್ಷ್ಮಿಯ ಸಹಸ್ರಾಂಶದಲ್ಲಿ ಬ್ರಹ್ಮ ಹುಟ್ಟಿದನು. ಆ ಬ್ರಹ್ಮನ ಸಹಸ್ರಾಂಶದಲ್ಲಿ ಸರಸ್ವತಿ ಹುಟ್ಟಿದಳು. ಆ ಸರಸ್ವತಿಯ ಸಹಸ್ರಾಂಶದಲ್ಲಿ ಸಕಲ ಚರಾಚರಂಗಳು ಹುಟ್ಟಿದವು. ಇವೆಲ್ಲವು ಸರ್ವಶೂನ್ಯನಿರಾಲಂಬ ಮೂರ್ತಿ ಆಡಿಸಿದರೆ ಆಡುವವು, ಬೇಡವೆಂದರೆ ಮಾಣುವವು ಗುಹೇಶ್ವರಾ. ಇದು ಸೃಷ್ಟಿ.

(೧೦) ಈ ಸೃಷ್ಟಿಯಲ್ಲಿ ರುದ್ರ, ಮಹೇಶ್ವರ ಸದಾಶಿವಮೂರ್ತಿಗಳು ಶುದ್ಧ ತತ್ವ ಸ್ವರೂಪು. ಲಿಂಗಧ್ಯಾನದಿಂದ ದೇವತ್ವವುಂಟಾಗಿ, ಕಾಮುಕಾಲಾದಿಗಳಂ ಜಯಿಸಿದ ಕಾರಣ ಪರಮಾತ್ಮರಾದರು. ಹರಿಬ್ರಹ್ಮಾದಿಗಳು ಶುದ್ಧಾಶುದ್ಧ ತತ್ವ ಸ್ವರೂಪಮೂರ್ತಿಗಳಾಗಿ ಆತ್ಮಧ್ಯಾನದಿಂದೆ ದೇವತ್ವವುಂಟಾಗಿ ಕಾಮುಕಾಲಾದಿಗಳಿಗೆ ವಶಂಗತರಾದ ಕಾರಣ ಅಂತರಾತ್ಮರಾದರು. ನರಸುರಾಸುರರು ಅಶುದ್ಧತತ್ವ ಸ್ವರೂಪ ಶರೀರಧ್ಯಾನದಿಂದೆ ಜೀವರುಗಳಾಗಿ, ಕಾಮುಕಾಲಾದಿಗಳ್ಗೆ ಒಳಗಾದ ಕಾರಣ ಜೀವಾತ್ಮರಾದರು. ಇದು ವೇದಂಗಳಲ್ಲಿ ವಿವರಿಸಿ ನೋಡಿದರೆ ಇಲ್ಲ. ಲಿಂಗಲೀಲೆಯಿಂದಾದುದು ಗುಹೇಶ್ವರಾ.

(೧೧) ಈ ಶರೀರದ ಧ್ಯಾನದಿಂದೆ ಸರ್ವ ಜಗತ್ತು ಮುವ್ವತ್ತು ಮೂರುಕೋಟಿ ಇಂದ್ರಿಯಂಗಳಿಗೆ ಅರುವತ್ತಾರುಕೋಟಿ ಕರಣಂಗಳಿಗೆ ಅನುಕೂಲರಾಗಿ ಸ್ತುತಿಗೆ ಹಿಗ್ಗುತ್ತ ನಿಂದೆಗೆ ತಗ್ಗುತ್ತ ದುಃಖಕ್ಕೆ ಕುಗ್ಗುತ್ತ ಸುಖಕ್ಕೆ ಹಿಗ್ಗುತ್ತ ಸತ್ಯ, ಶೌಚ, ಶಾಂತಿ, ದಾಂತಿ, ಸಮತೆ, ಸೈರಣೆ, ದಯೆ, ದಾಕ್ಷಿಣ್ಯ, ದಾನಧರ್ಮಂಗಳು ಇಲ್ಲದೆ, ದುರಾಚಾರ, ದುರ್ಮಾರ್ಗ ದುಷ್ಚಿಂತೆ, ದುರ್ಮೋಹ, ದುರ್ವಾಕ್ಯಗಳಿಂದ ಮಹಾಪಾತಕ ಸ್ವರೂಪರಾಗಿ ಭವಾಂಬುಧಿಯೊಳ್ಗೆ ಮುಳುಗುತ್ತೇಳುತ್ತ ತಡಿಯ ಸೇರಲಾರದಿರ್ದ ಕಾರಣ ಗುಹೇಶ್ವರನು ಅವರಿಗೆ ಸಾಕ್ಷಿಯಾಗಿರ್ಪನು.

(೧೨) ಈ ರೀತಿಯಲ್ಲಿ ಜೀವಕೋಟಿಗಳಿರುತ್ತಿರಲಾಗಿ ಒಬ್ಬ ಪುಣ್ಯಾತ್ಮನುದಯಿಸಿ, ಸತ್ಯ, ಶೌಚ, ಶಾಂತಿಯುಳ್ಳವನಾಗಿ, ಅನೇಕ ಜಪತಪನೇ

ಕ್ರಮಾಂಕ
2440.



ಮನಿಷ್ಠೆ ದಾನಧರ್ಮಂಗಳ ಮಾಡಲಾಗಿ ಮನಸ್ಸಿನ ಮಾಲಿನ್ಯವು ಹೋಗಿ ಈ ದೇಹವು ಮಹಾಪಾತಕಂಗಳಿಗೆ ಆಶ್ರಯವೆಂದು ತಿಳಿದು ಎಲೆ ಪರಮೇಶ್ವರ ಈ ದೇಹರೂಪವಂ ನೋಡಲು ಇದು ಚರ್ಮ, ರೋಮ, ನರ, ಮಜ್ಜೆ, ಮಾಂಸ, ಅಸ್ಥಿ, ಶುಕ್ಲ, ಶ್ರೋಣಿತ, ಮಲ, ಮೂತ್ರಂಗಳಿಂದಾದುದು. ಈ ದೇಹ ಲಕ್ಷಣವ ನೋಡಿದರೆ ಮಾತೃಗರ್ಭದಲ್ಲಿ ಅಮೇಧ್ಯ, ಮಲ ಮೂತ್ರ ಮಧ್ಯದಿ ನೆನೆದು ಆದರ ಮೇಲೆ ಮೂತ್ರದ್ವಾರದಲ್ಲಿ ರಕ್ತಮಯವಾಗಿ ಹುಳುವಿನಂದದಿ ಬಿದ್ದುದು. ಮತ್ತಂ ಶಿಶುವಾಗಿ ಕೆಲವು ದಿನ ಅಮಂಗಲವಾಗಿದ್ದುದು. ಆದರ ಮೇಲೆ ಬಾಲ್ಯ, ಯೌವ್ವನ, ಕೌಮಾರ ಮುಪ್ಪುಳ್ಳದ್ದು. ಮತ್ತಂ ಗುಣಂಗಳ ನೋಡಲು, ಕಾಮ, ಕ್ರೋಧ, ಲೋಭ ಮೋಹ, ಮದ, ಮತ್ಸರಂಗಳುಳ್ಳದ್ದು. ಸುಖವ ನೋಡಲು.- ಫಣಿ, ರಾಜ ಪಶು, ಪಕ್ಷಿ ಮೃಗ, ಜಲ, ವಾಯು, ಸಿಡಿಲು, ಶೀತ, ಉಷ್ಣ, ಕ್ಷುಧೆ, ತೃಷ್ಣೆ, ಮಹಾರೋಗಾದಿಗಳುಳ್ಳದ್ದು. ಮತ್ತಂ ಆಯುಷ್ಯವಂ ನೋಡಲು ಗಳಿಗೆಯೋ, ಎರಡು ಗಳಿಗೆಯೋ, ಜಾವವೋ, ದಿನವೋ, ಮಾಸವೋ, ವರ್ಷವೋ, ತಿಳಿಯಬಾರದು. ಈ ದೇಹವನಾದರೂ ನಂಬಿದ್ದೇನೆಂದೊಡೆ ಐಶ್ವರ್ಯವು ಮರೀಚಿಕಾಜಲದಂತೆ, ಮನದಾಸೆ ಬೆಟ್ಟದಂತೆ, ಯೌವ್ವನವು ಮಿಂಚಿನಂತೆ, ಧೈರ್ಯವು ಬಿಸಿಲಿನಂತೆ, ಸಂಸಾರವು ಇಂದ್ರಜಾಲದಂತೆ, ಭೋಗವು ದರ್ಪಣದ ಪ್ರತಿಬಿಂಬದಂತೆ, ಶರೀರವು ನೀರಗುಳ್ಳೆಯಂತೆ, ಪ್ರಾಣವು ಬಯಲಿನಂತೆ, ಬಾಧೆಗಳು ಸಮುದ್ರದ ತೆರೆಗಳಂತೆ, ಈ ದೇಹಭಾರವನು ಆವ ಉಪಾಯದಿಂದ ಇಳುಹಬೇಕೆಂದೊಡೆ ರೂಪವುಳ್ಳದಾದ ವಸ್ತುವಿನಿಂದ ಇಳುಹುವೆನೆಂದೊಡೆ ರೂಪವೆಲ್ಲ ನಷ್ಟ, ಅರೂಪವಾದ ವಸ್ತುವಿನಿಂದ ಇಳುಹುವೆನೆಂದೊಡೆ ಅರೂಪು ಕಾಣಬಾರದು. ಈ ದೇಹಭಾರವು ಆರಿಂದ ಇಳಿವುದೋ ಗುಹೇಶ್ವರಾ?

(೧೩) ಈ ರೀತಿಯ ದುರ್ಗಂಧ ಶರೀರೋಪಾಯವ ನೀಗುವ ತೆರನೆಂತೊ? ಕರ್ಮದಿಂದ ಬಿಡಿಸುವೆನೆಂದೊಡೆ, ಕರ್ಮವ ಮಾಡಿದಲ್ಲಿ ದೇಹವನೆತ್ತಬೇಕು. ದೇಹವನೆತ್ತಿದಲ್ಲಿ ಕರ್ಮವ ಮಾಡಬೇಕು. ಕರ್ಮಕ್ಕೂ ದೇಹಕ್ಕೂ ಬೀಜವೃಕ್ಷನ್ಯಾಯವು. ಅದೆಂತೆಂದೊಡೆ ಕರ್ಮವು ಜಡವು. ಕರ್ಮಕರ್ತೃ ಬೇರುಂಟು. ಕರ್ಮದಿಂದ ದೇಹಭಾರವು ತೀರದು. ಕಾಣ

ಲ್ಪಟ್ಟ ಕ್ರಿಯೆಗಳೆಲ್ಲಾ ಅಬದ್ಧ. ಜ್ಞಾನದಿಂದ ದೇಹಭಾರವನಿಳುಹುವೆನೆಂದೊಡೆ, ಜ್ಞಾನವು ಹೇಗೋ ತಿಳಿಯದು. ಶಾಸ್ತ್ರಜನ್ಯಜ್ಞಾನದಿಂದೆ ದೇಹಭಾರವನಿಳುಹುವೆನೆಂದೊಡೆ— ಶಾಸ್ತ್ರಜನ್ಯಜ್ಞಾನದಿಂದ ತೀರದು. ಸಹಜಜ್ಞಾನ ಹೇಗೆಂದೊಡೆ—ಗಾಳಿಯಿಲ್ಲದ ದೀಪದಂತೆ, ಚಂದ್ರಸೂರ್ಯ ನಕ್ಷತ್ರ ಮೇಘಂಗಳಿಲ್ಲದ ನಿರ್ಮಲಾಕಾಶದಂತೆ, ರೆಕ್ಕೆಗಳಿಲ್ಲದ ಪಕ್ಷಿಯಂತೆ ಎಲೆಗಳಿಲ್ಲದ ವೃಕ್ಷದಂತೆ, ತ್ರೈಲೋಕ್ಯದಲ್ಲಿ ಇದು ದುರ್ಲಭ. ಇದರಿಂದ ದೇಹಭಾರವು ತೀರುವದು. ಇಂತಪ್ಪ ಜ್ಞಾನವೆಂದಿಗೆ ಸಾಧ್ಯವಹುದೋ ಗುಹೇಶ್ವರಾ?

(೧೪) ಸೌತೆಯ ಹಣ್ಣಿಗೆ ವಜ್ರದ ಕಟ್ಟುಹಾಕಿದಂತೆ, ಬಾಳೆಯಹಣ್ಣು ಕಬ್ಬಿಣದುಗುರಿನಲ್ಲಿ ಸುಲಿವಂತೆ ಜಾಜಿಯ ಹೂವನ್ನು ಹುರಿದಂತೆ, ಶಿಶುವಿನ ಶಿರದಲ್ಲಿ ಪರ್ವತವಂ ಮಡಗಿದಂತೆ, ಈ ದೇಹಭಾರವ ಹೊರಲಾರೆನಯ್ಯ. ಅದೆಂತೆಂದೊಡೆ – ತಾಯ ಗರ್ಭದಲ್ಲಿ ಪಿಂಡವಿರುವದು. ಮೊಟ್ಟೆಯ ಕಟ್ಟಿ ನೀರಿನಲ್ಲಿ ಹಾಕಿ, ಮೇಲೆ ಪರ್ವತವನಿರಿಸಿದಂತೆ, ಅಮೇಧ್ಯಮೂತ್ರ ಮಧ್ಯದಲ್ಲಿ ನಿಲಬಾರದ ದುರ್ಗಂಧ. ಆ ತಾಯಗರ್ಭದಲ್ಲಿ ಅಸ್ಥಿ ತಾಕಿದರೆ ತ್ರಿಶೂಲದಲ್ಲಿ ಇರಿದಂತೆ, ಆ ತಾಯಿ ನೀರ ಕುಡಿದರೆ ಹಿಡಿಗಲ್ಲು ಬಿದ್ದಂತೆ, ಆ ತಾಯಿ ಉಂಡ ಅನ್ನದ ತುತ್ತು ಕಾರಸಿಡಿಲು ಬಿದ್ದಂತೆ, ಆ ತಾಯಿ ಕುಡಿವ ಕಾರವು ಕಾಳಕೂಟ ವಿಷದಂತೆ, ಆ ತಾಯಿ ಹಸಿದಿದ್ದರೆ ಕಾಡ ಗಿಚ್ಚಿನಲ್ಲಿ ಸಿಕ್ಕಿದಂತೆ, ಆ ತಾಯಿ ಸೀರೆಯಂ ಬಿಗಿದುಟ್ಟರೆ ಕಾಲಪಾಶದಲ್ಲಿ ಬಿಗಿದಂತೆ, ಆ ತಾಯಿ ನಡೆವಲ್ಲಿ ಕುಂಬಳ ಕಾಯನೆತ್ತಿ ಹಾಕಿದಂತೆ, ಆ ತಾಯಿ ಕೋಪಿಸಿದರೆ ಕುಮ್ಮಟಿಯಲ್ಲಿದ್ದಂತೆ, ಆ ತಾಯಿ ನಿದ್ರೆಯಲ್ಲಿ ಉಚ್ಛ್ವಾಸ ನಿಶ್ವಾಸಂಗೈದಡೆ ಕೋದಂಬ ಸೇದಿದಂತೆ ಆ ತಾಯ ಗರ್ಭದಲ್ಲಿ ಕೀಲಹುಳುವು ಕಡಿದೊಡೆ ಕಾಲಸರ್ಪ ಮಿಡಿಗಪ್ಪೆಯ ಕಡಿದಂತೆ, ಅಂತಲ್ಲದೆ ಕದಲುವೊದಲುಗೊಡದು. ಆದರಿಂದ ಪಿಂಡಕ್ಕೆ ಮೊದಲು ಮಾಸಕ್ಕೆ ನೂರು ಕೋಟಿ ಬಾಧೆ, ಎರಡನೆಯ ಮಾಸಕ್ಕೆ ಐವತ್ತು ಕೋಟಿ ಬಾಧೆ, ಮೂರನೆಯ ಮಾಸಕ್ಕೆ ಇಪ್ಪತ್ತೈದುಕೋಟಿ ಬಾಧೆ, ನಾಲ್ಕನೆಯ ಮಾಸಕ್ಕೆ ಹನ್ನೆರಡುಕೋಟಿ ಬಾಧೆ, ಐದನೆಯ ಮಾಸಕ್ಕೆ ಆರುಕೋಟಿ ಬಾಧೆ, ಆರನೆಯ ಮಾಸಕ್ಕೆ ಮೂರು ಕೋಟಿ



ಬಾಧೆ, ಅದರ ಮೇಲೆ ದಿವ್ಯಜ್ಞಾನ ಹುಟ್ಟಿ ಹಿಂದಣ ಜನ್ಮ ನೂರು ಮುಂದಣ ಜನ್ಮ ನೂರು ತನ್ನ ಜಾತಿ ಸ್ಮರತ್ವವನರಿದು, ತನ್ನ ಹೀನಾಧಿಕಜನ್ಮವನ್ನು ತನ್ನ ಸ್ವರ್ಗನರಕವನ್ನು ತನ್ನ ಸುಖದುಃಖವನ್ನು ತನ್ನ ಸ್ತುತಿನಿಂದೆಯನ್ನು ತನ್ನ ಕರ್ತವ್ಯ ಭೃತ್ಯತ್ವವನ್ನು ತನ್ನ ಸಿರಿ ಬಡತನವನ್ನು ತನ್ನ ರೂಪುಕುರೂಪನ್ನು ತನ್ನ ಸತ್ಯಾಸತ್ಯವನ್ನು ತಿಳಿದು ಸರ್ವರಲ್ಲಿಯೂ ಶಿವನೇ ಪೂಜ್ಯನೆಂದರಿದು, ಸರ್ವರೂ ಪೂಜಕರೆಂದರಿದು, ನೋಟಕ್ಕೆ ಶಿವನೇ ಕರ್ತ, "ಅಸೌಯೋವಸರ್ಪತಿನೀಲಗ್ರೀವೋವಿಲೋಹಿತಃ" ಎಂಬ ಶ್ರುತಿ ಸಾಕ್ಷಿಯಾಗಿ ಆತ್ಮಚಕ್ಷುಚೈತನ್ಯನಾಗಿ ಮನಸ್ಸಿಗೆ ಪ್ರೇರಕತ್ವವ ಮಾಡುವಾತನು ಶಿವನೇ. ಆದರಿಂದ ನೋಟಕ್ಕೂ ಮನಸ್ಸಿಗೂ ಶಿವನೇ ಕರ್ತನು. ಆ ನೋಟವನ್ನೂ ಮನಸ್ಸನ್ನೂ ಅಪಾತ್ರವ ಮಾಡಿದ ಕಾರಣ ಈ ದೇಹಪಾಶವು ಎನಗೆ ಬಂದಿತೆಂದು ಈ ನೋಟವನ್ನೂ ಮನಸ್ಸನ್ನೂ ಶಿವನಿಗೆ ಒಪ್ಪಿಸಿದರೆ ಚಿನ್ಮೂರ್ತಿಯಾಗುವೆನೆಂದು ಈ ನೋಟವನ್ನೂ ಮನಸ್ಸನ್ನೂ ಒಪ್ಪಿಸುವ ಸಕೀಲು ಎನಗೆ ತಿಳಿಯದು. ವೀರಮಹೇಶ್ವರರಿಗೆ ತಿಳಿವುದು. ಅವರ ಸೇವೆಯ ಮಾಡಿ ನೋಟವನ್ನೂ ಮನಸ್ಸನ್ನೂ ಶಿವನಿಗೊಪ್ಪಿಸಿ ದೇಹಭಾರವನಿಳುಹುವೆನು. ವಿಷಯದಿಂದ ಬಂದ ಭಾರವನ್ನು ನಿರ್ವಿಷಯದಿಂದ ಇಳುಹಿ, ಶಿವನೊಳಗೆ ಏಕಾರ್ಥವಾಗುವೆನೆಂದು ಆರು ತಿಂಗಳು ಮೊದಲಾಗಿ ಒಂಭತ್ತನೆಯ ತಿಂಗಳು ಪರ್ಯಂತವು ದಿನದಿನಕ್ಕೆ ಕೋಟಿಬಾಧೆಯಲ್ಲಿ ಚಿಂತಿಸುತ್ತಿಹುದು. ಆಮೇಲೆ ಉಕ್ಕಿನ ಕಂಬಚ್ಚಿನಲ್ಲಿ ಚಿನ್ನದ ಸಲಾಕೆಯಂ ತೆಗೆದ ಹಾಗೆ ಹುಟ್ಟುವಲ್ಲಿ ಕೋಟಿ ಬಾಧೆ ಹುಟ್ಟಿದ ಹಿಂದೆ ಪ್ರಸೂತಿವಾಯು ಸೋಂಕಿ ದಿವ್ಯಜ್ಞಾನ ಕೆಟ್ಟು ತಾ ಕೆಟ್ಟ ಕೇಡ ಮರೆದು ಸುಖದುಃಖಂಗಳಿಂದೆ ಸ್ತುತಿನಿಂದೆಗಳಿಂದ ಸಿರಿದಾರಿದ್ರ್ಯದಿಂದೆ ರೂಪು ಕುರೂಪುಗಳಿಂದೆ ವಿದ್ಯಾವಿದ್ಯೆಗಳಿಂದೆ ಹೀನಾಧಿಕದಿಂದೆ ಕುಲಾಕುಲಗಳಿಂದೆ ಜ್ಞಾನಾಜ್ಞಾನಂಗಳಿಂದೆ ಮುನ್ನೂರರುವತ್ತು ರೋಗಂಗಳಿಂದೆ ವರುಷನೂರಕ್ಕೆ ಬರುವದು ಕೋಟಿಬಾಧೆ, ಸಾವಲ್ಲಿ ಕೋಟಿಬಾಧೆ, ಇಪ್ಪತ್ತೆಂಟುಕೋಟಿ ನರಕಗಳು ಗರ್ಭನರಕಕ್ಕೆ ಸರಿಯಿಲ್ಲ. ಈ ಗರ್ಭನರಕವು ಎಂದಿಗೆ ದೂರವಹುದೋ ಗುಹೇಶ್ವರಾ.

(೧೫) ಈ ದೇಹದುರ್ಗುಣ ಅವಲಕ್ಷಣ ದುಃಖ ಆಶಾಬದ್ಧ ಅಸ್ಥಿರ ದೇಹಭಾರವನಿಳುಹಿ ಪೋಷಿಸುವಂಥ ತಂದೆ ಯಾರೋ ಎನಗೆ? ಈ

ದೇಹ ದುರ್ವಿಷಯ ಹಾಳಾಗಲಿಕ್ಕೆ ಅಮೃತವಾಗಿ ಬಂದು ಪರಿಹರಿಸುವ ದಯಾನಿಧಿ ಯಾರೋ ಎನಗೆ? ಈ ದೇಹದ ಪಂಚಾಗ್ನಿಯೆಂಬ ವಡಬಾನಲಕ್ಕೆ ಅಮೃತವಾಗಿ ಬಂದು ದಿಗಿಲು ಬಿಡಿಸುವರಾರೋ? ಈ ದೇಹ ದುರ್ಮದವೆಂಬ ಆನೆಗಳಿಗೆ ಸಿಂಹವಾಗಿ ಬಂದು ಭಯ ಬಿಡಿಸುವ ಕರುಣಾನಿಧಿ ಯಾರೋ ? ಎನ್ನ ಅಜ್ಞಾನವೆಂಬ ಅಂಧಕಾರಕ್ಕೆ ಸುಜ್ಞಾನ ಜ್ಯೋತಿಯಾಗಿ ಬಂದು ಇದು ಸ್ಥೂಲ ದೇಹದ ಸುಖ ಇದು ಸೂಕ್ಷ್ಮ ದೇಹದ ಸುಖ, ಇದು ಕಾರಣ ದೇಹದ ಸುಖವೆಂದು ಕಾಣಲ್ಪಡ ಹೇಳುವ ಗುರುವಾರೋ ಎನಗೆ ? ಎನ್ನ ಸಂಕಲ್ಪವಿಕಲ್ಪವೆಂಬ ಘೋರಾರಣ್ಯಕ್ಕೆ ದಾವಾನಲನಾಗಿ ಬಂದು ಶಂಭುಪುರಕ್ಕೆ ದಾರಿಯಂ ತೋರಿಸುವ ಪರಮ ಗುರುವಾರೋ ಎನಗೆ? ಎನ್ನ ಭವಾಂಬುಧಿ ಎಂಬ ಸಮುದ್ರಕ್ಕೆ ಹಡಗಾಗಿ ಬಂದು ತಡೆಯಂ ಸೇರಿಸುವ ದಯಾನಿಧಿ ಯಾರೋ ? ಈ ನೋಟವೂ ಮನವೂ ಶಿವನೊಡನೆ. ಒಡವೆಯುವನಿಗೆ ಒಡವೆಯನೊಪ್ಪಿಸಿದರೆ ದೇಹ ಭಾರವು ಇಳಿವುದು. ಒಪ್ಪಿಸದಿರ್ದರೆ ದೇಹಭಾರವು ಹರಿಯದು. ಗರ್ಭದಲ್ಲಿರುವಾಗ ಸೊಮ್ಮು ಕರ್ತನ ತಿಳಿವುದು. ಆ ಸೊಮ್ಮಂ ಕೊಡಲಿಕ್ಕೆ ಕೂಡದು. ಗರ್ಭವಂ ಬಿಟ್ಟು ಬಂದರೆ ಒಡವೆ ಉಂಟು. ಕೊಡುವರೆ ಒಡವೆಯಾತನಂ ಕಾಣೆನು. ಒಡವೆಯಾತನಂ ಕಂಡರೆ ನೋಟವನ್ನೂ ಮನಸ್ಸನ್ನೂ ಕೊಡಬಹುದು. ನೋಟವನ್ನೂ ಮನಸ್ಸನ್ನೂ ನಿಲಿಸಿದಾತನು ಶಿವನಂ ಪೂಜಿಸುವನು. ಆ ಶಿವ ಕಳೆ ದೇಹಭಾರವನಿಳುಹಿ ಭ್ರಮರಕೀಟನ್ಯಾಯದಿಂ ನಿಲಿಸುವುದು. ನೋಟವನ್ನೂ ಮನಸ್ಸನ್ನೂ ನಿಲಿಸಿ ಪೂಜಿಸಿದರೆ ಆ ಶಿವಕಳೆ ಅವರಿಗೆ ಸಾಕ್ಷಿಯಾಗಿ ಬಂಧ ಮುಕ್ತಿಯನೀವುದಲ್ಲದೆ ದೇಹಭಾರವನಿಳುಹದು. ಇಂತಪ್ಪ ದೇಹಭಾರಕನು ಕಾಮವಿಕಾರಿ ಎಂದು ಕಾಲಭೀತನೆಂದು ಕರ್ಮದೇಹಿಯೆಂದು ಅಶುದ್ಧನೆಂದು ವಿಕಾರಿಯೆಂದು ದುರಾಚಾರ ಚೋರನೆಂದು ದುರ್ಮಾರ್ಗನೆಂದು ಭವಭಾರಿಯೆಂದು ಹೇಳಲ್ಪಟ್ಟನು. ಮತ್ತೆ ಹೇಗೆಂದೊಡೆ— ನೋಟವನ್ನು ಮನಸ್ಸನ್ನು ಶಿವನಿಗೊಪ್ಪಿಸಿ ಪೂಜಿಸುವಾತನೇ ಕಳಾಲಿಂಗ ಸಂಧಾನಿಯೆಂದು ನಿರಾಭಾರಿಯೆಂದು ನಿಷ್ಕಾಮನೆಂದು ನಿರ್ವಿಕಾರಿಯೆಂದು ನಿರ್ಮಲನೆಂದು ನಿಸ್ಸಂಗನೆಂದು ಹೇಳಲ್ಪಟ್ಟನು ಗುಹೇಶ್ವರಾ.



(೧೬) ಈ ಆಶಾಬದ್ಧದೇಹವನೆಷ್ಟು ದಿನ ಹೊರುವೆನು, ಹೊರಲಾರೆನಲ್ಲಾ ಎಂತುಪೋಷಣವ ಮಾಡಲು, ದುರ್ಗುಣವ ಕೊಡುವದಲ್ಲದೆ ಸದ್ಗುಣವು ಬಾರದು. ಹಾವಿನ ಮರಿಗೆ ಹಾಲನೆರೆದ ಹಾಗೆ ಇಷ್ಟು ದಿನವು ಈ ದೇಹವು ಸುಖವೆಂದಿರ್ದೆನು. ವಿವರಿಸಿ ನೋಡಿದರೆ ದುಃಖ ಸ್ವರೂಪವು. ಈ ದುಃಖಶರೀರಕ್ಕೆ ಪೋಷಣವಂ ಮಾಡಿದರೆ ಮಹಾದೋಷವು. ಅದು ಹೇಗೆಂದೊಡೆ, 'ಅಪಾತ್ರದಾನೇನ ದರಿದ್ರದೋಷಃ' ಎಂಬ ನ್ಯಾಯದಲ್ಲಿ ನೋಡಿದರೆ ಮಹಾದೋಷವೆಂದು ಪುತ್ರಮಿತ್ರ ಕಳತ್ರ ಜಾತಿ ಗೋತ್ರ ಭ್ರಾತೃ ಪಿತೃ ಮಾತೃ ಮೊದಲಾದ ಸರ್ವಸಂಪದವಂ ಬಿಟ್ಟು ಒಂದು ಮಹಾರಣ್ಯದ ದಾರಿಯಂ ಹಿಡಿದೆನು. ಆ ವೇಳೆಯಲ್ಲಿ ಪರಮೇಶ್ವರನು ತನ್ನ ನಿಜಚಿಹ್ನಂಗಳಂ ಮರಸಿಕೊಂಡು ಅನಂತ ಕೋಟಿವೇದಶಾಸ್ತ್ರಪುರಾಣಾಗಮಮಂತ್ರಾರ್ಥಸಾರಸುಧಾರಸವಾದ ವೀರಶೈವ ಪುಸ್ತಕವಂ ಹಸ್ತದಲ್ಲಿ ಪಿಡಿದುಕೊಂಡು ದಿವ್ಯಜಂಗಮದ ಸ್ವರೂಪದ ಹಾಗೆ ಶ್ರೀಗುರು ಮೂರ್ತಿಯು ಕುಳ್ಳಿರಲಾಗಿ ಆ ಪುಣ್ಯಾತ್ಮನನ್ನು ನೋಡಿದುದು ಹೇಗೆಂದೊಡೆ ಅಂಧಕನಿಗೆ ನೇತ್ರವು ಬಂದಂತೆ, ದರಿದ್ರನು ನಿಕ್ಷೇಪವ ಕಂಡಂತೆ, ರೋಗಿಯು ಸಂಜೀವನವಂ ಕಂಡಂತೆ, ನೋಡಿದೆನು ಆ ಶ್ರೀಗುರುಮೂರ್ತಿಯನು ಗುಹೇಶ್ವರಾ.

(೧೭) ಆ ಗುರುಮೂರ್ತಿಗೆ ಸಾಷ್ಟಾಂಗಪ್ರಣಾಮಂಗೈದು ಶರಣು ಸಚ್ಚಿದಾನಂದ ನಮೋ ಭಕ್ತವತ್ಸಲ ನಮೋ ಮತ್ಪ್ರಾಣನಾಥ ನಮೋ ಭಕ್ತೈಕದೇಹ, ಈ ದೇಹವೆಂಬ ಕಾರಾಗೃಹದಲ್ಲಿ ಹುಟ್ಟಿದ ಬಾಧೆಯ ಹೇಳುವೆನು. ದಯದಿಂದ ಕೇಳಯ್ಯ ಸ್ವಾಮಿಃ— ಕಾಮವೆಂಬ ತಸ್ಕರನು ಹೊಕ್ಕು ನಿಜಜ್ಞಾನವೆಂಬ ರತ್ನವನಪಹರಿಸಿಕೊಂಡುಹೋದನು ದೇವಾ! ಕ್ರೋಧವೆಂಬ ವ್ಯಾಘ್ರನು ಹೊಕ್ಕು ನಿಜಸ್ವರೂಪವೆಂಬುವ ಕಾಮಧೇನುವಂ ಕಡಿದು ಕೆಡಹಿತ್ತು ದೇವಾ! ಲೋಭವೆಂಬುವ ಕಪಿ ಹೊಕ್ಕು ಶಿವಸತ್ಕ್ರಿಯೆಯೆಂಬ ಹಣ್ಣ ನುಂಗಿತ್ತು ದೇವಾ! ಮೋಹವೆಂಬ ಮಳೆ ಹೊಯ್ದು ಶಿವವಿಚಾರವೆಂಬ ಅಲೆ ತೇಲಿತ್ತು ದೇವಾ! ಮದವೆಂಬ ಆನೆ ಹೊಕ್ಕು ನಿಶ್ಚಿಂತ ನಿರ್ಮಲತ್ವವೆಂಬ ತಾವರೆಗೊಳನಂ ಕಲವಲವ ಮಾಡಿತ್ತು ದೇವಾ! ಮಾತ್ಸರ್ಯ ಕೋಪವೆಂಬ ಕಾಲಾನಲಂ ಹೊಕ್ಕು ಶಾಂತಿಯೆಂಬ ಸಮುದ್ರವು ಬತ್ತಿಹೋಯಿತ್ತು ದೇವಾ! ಮನೋ

ವಿಕಾರವೆಂಬ ಚಂಡಮಾರುತನು ಹೊಕ್ಕು ಸತ್ಯಶೌಚಕ್ಷಮೆದಮೆ ಶಾಂತಿ ದಾಂತಿದಯೆದಾಕ್ಷಿಣ್ಯ ಬ್ರಹ್ಮಚರ್ಯಾದಿ ಸತ್ಕೃತ್ಯವೆಂಬ ದೀಪಗಳು ಮುಗ್ಗಿ ಹೋದವು ದೇವಾ! ರಾಗದ್ವೇಷವೆಂಬ ಜೇನಸೊಣವು ಕೂಡಿಕೊಂಡು ಎನ್ನ ಜೀವಹಂಸನ ಬಾಧೆಗೊಳಿಸಲು ತಾಳಲಾಪೆನೇ? ಚಿದಾಕಾಶವು ಜೀವನಿಗೆ ಉತ್ಪತ್ತಿ ಸ್ಥಿತಿಲಯಂಗಳು ಎಷ್ಟು ದಿನದಿಂದಿಹವು? ಇನ್ನೆಷ್ಟು ದಿನಕ್ಕೆ ಲಯವು? ನಾನಾರು, ಈ ದೇಹಪಾಶದಲ್ಲಿ ಕಟ್ಟಿ ಮೋಹವೆಂಬ ಸಮುದ್ರದಲ್ಲಿ ಮುಳುಗಿಸಿ ಏಳಗೊಡದೆ ಅಹಂಕಾರವೆಂಬ ಪರ್ವತವ ಎದೆಯ ಮೇಲಿರಿಸಿ ಬಾಧಿಸುವರು ಆರು ಸ್ವಾಮಿ? ನಾನಾರು, ಈ ದೇಹವಾರು? ಅಲ್ಲದಿದ್ದರೆ ನಾನೆಂಬ ಚೈತನ್ಯವೇ ದೇಹವಾಗಿ ಹುಟ್ಟಿತೋ, ಇಲ್ಲವೆ ನಾ ಮಾಡುವ ಕರ್ಮವೇ ದೇಹವಾಯಿತೋ, ಎಂದರೆ ದೇಹವಿಲ್ಲದ ಕಾಲಕರ್ಮವಿಲ್ಲ. ಹಾಗಾದರೆ ದೇಹಕ್ಕೂ ಕರ್ಮಕ್ಕು ಕರ್ತನೊಬ್ಬನುಂಟು. ಆ ಕರ್ತನೇ ನಾನು. ದೇಹಾದಿ ಪ್ರಪಂಚ ಅಬದ್ಧವೆಂದೊಡೆ ಕದಲಿದೊಡನೆ ಕರ್ಮದಲ್ಲಿ ಕೂಡಿತ್ತು. ಆ ಕರ್ಮದಿಂದೆ ನಾನಾ ಗರ್ಭದಲ್ಲಿ ಹುಟ್ಟಿ ದುಃಖದಲ್ಲಿ ಹೊಂದುತ್ತಿರಲು, ಅಬದ್ಧವೆಂಬುದು ಹೇಗೆ? ಈ ರೀತಿಯಲ್ಲಿ ಸರ್ವದುಃಖಗಳಲ್ಲಿ ಸರ್ವ ದೇಹಂಗಳಲ್ಲಿ ಮುಳುಗುಮಾಡಿದೆಯಾ, ನಿಮ್ಮ ಪಾದಪದ್ಮಂಗಳೇ ಎನಗೆ ದಿಕ್ಕೆಂದು ಬಂದೆನು. ಎನ್ನಂ ಕಾಯ್ದು ರಕ್ಷಿಸಯ್ಯ ದುಃಖಸಂಹಾರಿ ಎಂದು ನಮಸ್ಕಾರವ ಮಾಡಲು, ಆ ಶ್ರೀಗುರು ಸ್ವಾಮಿಯು ದಯಾದೃಷ್ಟಿಯಲ್ಲಿ ನೋಡಿ, ನಿನ್ನಂತರಂಗದ ಸಂಕಲ್ಪ ವಿಕಲ್ಪಂಗಳಂ ಕೆಡಿಸಿ ನಿನಗೆ ಮೋಕ್ಷರಾಜ್ಯದ ಪಟ್ಟವಂ ಕಟ್ಟಿ ಆಳಿಸುವೆನು ನಿನಗೆ ಭಯಬೇಡೆಂದು ಅಭಯಪತ್ರನು ಗುಹೇಶ್ವರಲಿಂಗದಲ್ಲಿ.

(೧೮) ಮೊದಲು ಏನೇನೂ ಇಲ್ಲದ ಕಾಲದಲ್ಲಿ ಪರಶಿವ ಬ್ರಹ್ಮವು ಒಂದೇ ಇದ್ದಿತ್ತು. ಆ ಪರಶಿವ ಲೀಲಾಮಾತ್ರದಿಂದ ಸರ್ವ ಜಗತ್ತು ಆಯಿತ್ತು. "ಯಥಾ ಬೀಜಂ ತಥಾಂಕುರಃ" ಎಂಬ ನ್ಯಾಯದಲ್ಲಿ ನೋಡಿದರೆ ಈ ಸಕಲ ಜಗತ್ತು ನೀನಲ್ಲ, ಆ ಪರಶಿವ ಬ್ರಹ್ಮವೇ ನೀನೆಂದು ಶಿಷ್ಯಂಗೆ ಬೋಧಿಸಲು, ಆ ಶಿಷ್ಯನು ಆನಂದಮಯನಾಗಿ ಕೇಳ್ವೆ ಗುರುನಾಥ ಮತ್ತೊಂದು ಬಿನ್ನಪವಂ. ಆ ಲಿಂಗ ಲೀಲಾವಿಲಾಸದಿಂದೆ ಕರ್ಮಪಾಶಬಂಧದಲ್ಲಿ ಜೀವಾತ್ಮನಾಗಿ ಸರ್ವ ದುಃಖದಲ್ಲಿಯೂ ಹೊಂದುತ್ತಿರಲು ನೀವು ದಯಾನಿಧಿಯಾಗಿ ಬಂದು ಎನ್ನ ಅಜ್ಞಾನವೆಂಬ ಅಂಧ



ಕಾರವಂ ಕೆಡಿಸಿ ಸುಜ್ಞಾನವೆಂಬ ಸೂರ್ಯೋದಯವಂ ಮಾಡಲು ಜೀವಾತ್ಮಭಾವ ನಷ್ಟವಾಗಿ ಆ ಪರಶಿವ ಬ್ರಹ್ಮವೇ ನಾನೆಂದು ತಿಳಿದೆನು ಸ್ವಾಮಿ! ಇನ್ನೊಂದು ಬಿನ್ನಪಂ. ಅದೇನೆಂದೊಡೆ ಜಾಗ್ರತ್ ಸ್ವರೂಪವಾದ ಸ್ಥೂಲ ದೇಹವು, ಸ್ವಪ್ನ ಸ್ವರೂಪವಾದ ಸೂಕ್ಷ್ಮ ದೇಹವು, ಸುಷುಪ್ತಿ ಸ್ವರೂಪವಾದ ಕಾರಣದೇಹಕ್ಕೆ ತಿಳಿಯದು. ಈ ಮೂರು ದೇಹಕ್ಕೆ ಸಾಕ್ಷಿಯಾದ ಪರಶಿವಬ್ರಹ್ಮವೇ ತಾನಾದರೆ ತನುತ್ರಯ ವ್ಯವಹಾರವ ಹೊದ್ದುವದೇ? ಫೇನಬುದ್ಬುದ ತೆರೆಗಳಿಲ್ಲದ ಸಮುದ್ರದ ಹಾಗೆ, ಗಾಳಿಯಿಲ್ಲದ ದೀಪದ ಹಾಗೆ, ಎಲೆಯಿಲ್ಲದ ವೃಕ್ಷದ ಹಾಗೆ, ರೆಕ್ಕೆಯಿಲ್ಲದ ಪಕ್ಷಿಯಂತೆ, ರವಿ ಶಶಿತಾರಾ ಮೇಘಂಗಳಿಲ್ಲದ ನಿರ್ಮಲಾಕಾಶದಂತೆ ತಾನು ನಿರ್ಮಲನಾಗಿ ನಿರಾವರಣನಾಗಿರಬೇಕಲ್ಲದೆ ನಿರ್ವಿಕಾರ ಬ್ರಹ್ಮಲಕ್ಷಣ ಹಾಗಲ್ಲದೆ ತನುತ್ರಯ ವಿಕಾರ ಹೊದ್ದಿದ್ದರೆ ಆ ಬ್ರಹ್ಮ ತಾನಾಗಬಲ್ಲನೇ? ಕೆಲಬರು ತಾ ಬ್ರಹ್ಮವಾದರೂ ಪ್ರಾರಬ್ಧಕರ್ಮ ಬಿಡದೆಂಬರು. ಕೆಲಬರು ತಾ ಸರ್ವಸಾಕ್ಷಿ ವಿಕಾರವು ದೇಹೇಂದ್ರಿಯ ವಿಷಯ ತಸ್ಕರಂಗಳಿಲ್ಲದೆ ಆತ್ಮಂಗಿಲ್ಲವೆಂಬರು. ಕೆಲಬರು ಆ ಬ್ರಹ್ಮವೇ ತಾನಾದಡೆಯೂ ವಿಕಾರದಲ್ಲಿ ಹೊದ್ದಲಾಗದೆಂದು ದೇಹವನ್ನಾಶ್ರಯಿಸಿರುವರು. ಈ ಸಂಕಲ್ಪವೆನಗೆ ತಿಳಿಯದು. ತಿಳುಹಿ ರಕ್ಷಿಸು ಶ್ರೀಗುರುನಾಥ ಎನಲಾಗಿ ಆ ಶ್ರೀಗುರುನಾಥ ಶಿಷ್ಯನ ಪ್ರಶ್ನೆಗೆ ಮೆಚ್ಚಿ, ಕೇಳು ಕುಮಾರ, ನಿನಗೆ ನಿಶ್ಚಿಂತ ಕೈವಲ್ಯ ಸುಖವ ನೀವೇ ಗುಹೇಶ್ವರಲಿಂಗದಲ್ಲಿ.

(೧೯) ಗಜಶಾಸ್ತ್ರವ ಕಲಿತ ಮಾತ್ರದಲ್ಲಿ ಗಜವನೇರಬಹುದೇ ಸಾಧಕವಿಲ್ಲದೆ? ಕರ್ಪುರವಂ ಪಾತ್ರೆಯಲ್ಲಿ ಮಡಗಿದೊಡೆ ಶಿವಾರ್ಪಣವಾಗಬಲ್ಲುದೇ ಅಗ್ನಿಯಂ ಮುಟ್ಟಿಸದೆ? ಕಾಶೀಮಹಾತ್ಮ್ಯವಂ ಕೇಳಿದಲ್ಲಿಯೇ ಸಾರೂಪ್ಯಪದವಿಯಪ್ಪುದೇ ನಡೆದು ಹೋಗಿ ಪಂಚಕ್ರೋಶಮಧ್ಯದಲ್ಲಿ ತಾರಕ ಬ್ರಹ್ಮೋಪದೇಶದಿಂದೆ ಜೀವಿಸದೆ? ಅಮೃತವೆಂದಲ್ಲಿಯೇ ತೃಪ್ತಿಯಪ್ಪುದೇ ಭುಂಜಿಸದೆ? ಆ ಕ್ರಮದಲ್ಲಿ ತತ್ವಮಸಿ ವಾಕ್ಯಂಗಳನ್ನು ತಿಳಿದಲ್ಲಿಯೇ ತಾನು ಬ್ರಹ್ಮವಹನೆ? ತನುತ್ರಯವಿಕಾರವು ತೋರಿದಲ್ಲಿ ಶಿವೋಹಂ ಭಾವವಿಲ್ಲದೆ ಭಕ್ತಶಿವಮಹೇಶ್ವರರುಗಳಲ್ಲಿ ದಾಸೋಹಂ ಭಾವವಿಲ್ಲದೆ ಸುಮ್ಮನೆ ವಾಗ್ಬ್ರಹ್ಮವ ನುಡಿವರಿಗೆ ಕಾಲಕರ್ಮಂಗಳು ಬಿಡುವುದೇ ಗುಹೇಶ್ವರಾ?

(೨೦) ಅಮೃತದಲ್ಲಿ ಕಹಿಯುಂಟೇ? ದಿವ್ಯ ಮಣಿಯಲ್ಲಿ ಕಪ್ಪುಂಟೇ? ಜ್ಯೋತಿರ್ಮಯದಲ್ಲಿ ಅಂಧಕಾರವುಂಟೇ ? ಪಿಂಡಾದಿ ಜ್ಞಾನಶೂನ್ಯಾಂತವಾದ ನೂರೊಂದು ಸ್ಥಲವಂ ಕರತಳಾಮಳಕವಾಗಿ ತಿಳಿದು ಜ್ಞಾನಶೂನ್ಯದಲ್ಲಿ ತಾ ನಿಂದು ದಿನದಿನದಲ್ಲಿ ಅಭ್ಯಾಸವಂ ಮಾಡಲು ದೇಹಗುಣಂಗಳಿಗೆ ಯೋಚನೆ ಹುಟ್ಟಿ, ಈತನ ಭಂಗ ಪಡಿಸುವೆನೆಂದು ಬರುವವು. ಅದಕ್ಕೆ ಧೈರ್ಯಗೆಡದೆ ಧೀರನಾಗಿ ದೇಹಗುಣಂಗಳು ಕಾಡುವಲ್ಲಿ ಶಿವೋಹಂ ಎಂದು ಶಿವಭಕ್ತರಲ್ಲಿ ದಾಸೋಹಂ ಎಂದು ಮರೆಯದೆ ನಡೆದ ಶಿವಶರಣರಿಗೆ ಅಜ್ಞಾನವುಂಟೇ ? ಇಲ್ಲ. ಅದೆಂತೆಂದೊಡೆ:— ಕರ್ಮಸಾದಾಖ್ಯಕರ್ತೃಸಾದಾಖ್ಯಂಗಳ ನರಿದು, ಗುರುಲಿಂಗಜಂಗಮಕ್ಕೆ ತನುಮನಧನವ ನಿರ್ವಂಚಕತ್ವದಿ ಈಕ್ಷಣ ಜ್ಞಾನಸ್ಪರ್ಶನದಿಂದರ್ಪಿಸಿ, ತ್ಯಾಗಾಂಗಲಿಂಗಕ್ಕಿತ್ತು, ಸ್ಥೂಲದೇಹಾಹಂಕಾರವ ನಷ್ಟವ ಮಾಡಿ, ಅಮೂರ್ತಿಮೂರ್ತಿಸಾದಾಖ್ಯಂಗಳನರಿದು ಇಷ್ಟಪ್ರಾಣಭಾವಂಗಳಿಗೆ ಈಕ್ಷಣ ಜ್ಞಾನ ಸ್ಪರ್ಶನದಿಂದ ನಿಶ್ಚಲನಾಗಿ ರೂಪು ರುಚಿ ತೃಪ್ತ್ಯರ್ಪಣಂಗಳ ಭೋಗಾಂಗಲಿಂಗಕ್ಕಿತ್ತು, ಸೂಕ್ಷ್ಮದೇಹವ ಚಲನೆಗುಣಂಗಳ ನಾಸ್ತಿಮಾಡಿ, ಶಿವಸಾದಾಖ್ಯಮಹಾಸಾದಾಖ್ಯವನರಿದು ಆ ಇಷ್ಟಪ್ರಾಣಭಾವಂಗಳಿಗೆ ಈಕ್ಷಣ ಜ್ಞಾನ ಸ್ಪರ್ಶನದಿಂದೆ ಸಂಕಲ್ಪವಿಕಲ್ಪರಹಿತನಾಗಿ ತನು ಮನೋ ವಾಯುತತ್ವಂಗಳ ಯೋಗಾಂಗಲಿಂಗಕ್ಕೆ ತೃಪ್ತಿಯಂ ಮಾಡಿ, ಪಾಶಬದ್ಧನಿರ್ಮುಕ್ತನಾದ ಶರಣಂಗೆ ತನುತ್ರಯ ವಿಕಾರಂ ತೊಲಗುವದಲ್ಲದೆ ತನ್ನ ತಿಳಿದ ಮಾತ್ರದಲ್ಲಿ ತಾನೇ ಬ್ರಹ್ಮವೆಂದು ಮತ್ತೆ ಪ್ರಾರಬ್ಧಕರ್ಮವು ಬಿಡದೆಂಬ ತನುತ್ರಯ ಭಾರಕರ ನೋಡಿ ನಗುವನು ನಮ್ಮ ಗುಹೇಶ್ವರನು.

(೨೧) ತನುತ್ರಯವಿಕಾರವಂ ತೊಲಗಿಸಿ ಶಿವಸ್ವರೂಪವಾಗುವದಕ್ಕೆ ಸಿದ್ಧಾಂತವು ಪ್ರಸ್ತುತಕ್ಕೆ ಬಾರದು. ವೇದಾಂತಮತವು ಪ್ರಯೋಜನಕ್ಕೆ ಬಾರದು. ವೀರಶೈವದಲ್ಲಿ ತನುತ್ರಯವಿಕಾರವಂ ತೊಲಗಿಸಬಹುದು. ಅದೆಂತೆಂದೊಡೆ, ಮುಂದೆ ಸಿದ್ಧಾಂತನಿರ್ಣಯವಂ ಹೇಳುವೆನು. ಅನಾದಿಯಿಂದಲೂ ಮಲಮಾಯಾಕರ್ಮಂಗಳುಂಟು. ಶಿವನುಂಟು. ಆ ಮಲಮಾಯಾಕರ್ಮದಿಂದ ಜೀವನಿಗೆ ಆ ಪಾಶಬದ್ಧತ್ವವುಂಟಾಗಿ ಸುಖದುಃಖಂಗಳ ಬಿಡಕೂಡದು. ಶಿವಪೂಜಾಫಲದಿಂದ ಬಂಧಮುಕ್ತಿಯಲ್ಲದೆ ಸಹಜಮುಕ್ತಿಯಿಲ್ಲವೆಂದು ಹೇಳುವದು ಸಿದ್ಧಾಂತ ಗುಹೇಶ್ವರಾ.



## ವೀರಶೈವ ಸಿದ್ಧಾಂತ ನಿರ್ಣಯ.

೨೨. ಅನಾದಿಯಿಂದಲೂ ನಿರ್ಮಲನಾಗಿ ಶುದ್ಧನಾಗಿ ಪಾಶಜೀವಗಳಂಟದಾತನಾಗಿ, ಶಿವರತಿಸುಖಸುಧಾಮಯನಾಗಿ, ಗುರುಲಿಂಗಜಂಗಮದ ಸೇವೆಯಲ್ಲಿ ಗುಣವುಳ್ಳವನಾಗಿ, ನಿಜಚಿನ್ಮಯರೂಪಿನಲ್ಲಿ ಹುಟ್ಟಿದ ತ್ರಿವರ್ಣಮಲತ್ರಯವ ವಿಷ್ಣುವಿಧಿಗಳ ಕೈಯಲ್ಲಿ ತೊಳೆಯಬಾರದಂತಹವು, ಅಂತಪ್ಪ ಮಲತ್ರಯವ ತಾ ತೊಳೆದು ಜಗದ ಜೀವರ ತೊಲಗಿಸುವ ಜಾಣ್ಮೆಯುಳ್ಳಾತನೇ ವೀರಶೈವ ಸಿದ್ಧಾಂತಿ ಗುರುಗುಹೇಶ್ವರಲಿಂಗದಲ್ಲಿ.

## ಅದ್ವೈತ ನಿರ್ಣಯ.

೨೩. "ಜೀವಶ್ಶಿವಶ್ಶಿವೋಜೀವಃ ಸಜೀವಃ ಕೇವಲಶ್ಶಿವಃ ॥ ಪಾಶಬದ್ಧೋಭವೇಜ್ಜೀವಃ ಪಾಶಮುಕ್ತಸ್ಸದಾಶಿವಃ" ಎಂಬ ವಾಕ್ಯ ಸಾಕ್ಷಿಯಾಗಿ ಹೀಗೆಂಬರು ಕೆಲವರು. ಪಾಶಬದ್ಧನು ಜೀವನು. ಶಿವನು ಪಾಶವಿಲಕ್ಷಣನು. ಜೀವನು ಪಶು. ಶಿವನು ಪಶುಪತಿ. ಪಶುವನು ಕಟ್ಟಲು ಬಿಡಲು ಪಶುಪತಿಯಿಂದಹುದಲ್ಲದೆ ಪಶುವು ತಾನೇ ಕಟ್ಟಿಕೊಂಡು ತಾನೇ ಬಿಟ್ಟುಕೊಂಬುದೇ ? ಆದರಿಂದ ಜೀವನು ಜೀವನೇ. ಶಿವನು ಶಿವನೇ. ಆದರಿಂದ ವೇದಾಂತಲಕ್ಷಣ ಶರಣರಿಗಲ್ಲದೆ ಇತರರಿಗಸಾಧ್ಯ ಗುಹೇಶ್ವರಲಿಂಗದಲ್ಲಿ.

## ಶಿವಾದ್ವೈತನಿರ್ಣಯ.

೨೪. "ಭಕ್ತಶ್ಶಿವಶ್ಶಿವೋಭಕ್ತಃ ಸದ್ಭಕ್ತಃ ಕೇವಲಶ್ಶಿವಃ ॥ ಸಾಕಾರಸ್ತು ಭವೇದ್ಭಕ್ತೋ ನಿರಾಕಾರಸ್ಸದಾಶಿವಃ" ಎಂಬ ಶ್ರುತಿ ಸಾಕ್ಷಿಯಾಗಿ ಶಿವನು ಪಾಶವಿಲಕ್ಷಣನು, ಭಕ್ತನು ಪಾಶವಿಲಕ್ಷಣನು, ಶಿವನು ನಿರ್ಮಲನು, ಭಕ್ತನು ನಿರ್ಮಲನು, ನಿರಾಕಾರವಾದ ಶಿವನು ಜಗದ್ಧಿತಾರ್ಥವಾಗಿ ಭಕ್ತನಾದನು. ಅದೆಂತೆಂದೊಡೆ:— ಭಕ್ತಲಕ್ಷಣ ಕರ್ಮಕರ್ತೃಸಾದಾಖ್ಯದಿಂದ ಗುರುಸೇವೆ ಲಿಂಗನಿಷ್ಠೆ ಜಂಗಮಾರಾಧನೆಯಲ್ಲಿ ನಿರ್ವಂಚಕನಾಗಿ ಆವುದಾನೊಂದು ಪದಾರ್ಥವನ್ನು ಸಾಕಾರ ನಿರಾಕಾರ ವ್ಯಾಪ್ತಾಕಾರ ಸ್ವರೂಪವಾದ ಇಷ್ಟಪ್ರಾಣಭಾವಕ್ಕೆ ಈಕ್ಷಣಜ್ಞಾನಸ್ಪರ್ಶ

ನಾರ್ಪಣದಿಂದ ತ್ಯಾಗಾಂಗದ ವಾಯುಗುಣ ವಿಕಾರವನ್ನು ಬಯಲು ಮಾಡುವನು ಶರಣ ಗುಹೇಶ್ವರಲಿಂಗದಲ್ಲಿ.

೨೫. ಮೂರ್ತಿಅಮೂರ್ತಿ ಸದಾಖ್ಯದಿಂದ ನಿರಾಕಾರ ವಾಯ್ವಾಕಾರ ಸ್ವರೂಪವಾದ ಇಷ್ಟಪ್ರಾಣಭಾವಂಗಳಲ್ಲಿ ನಿರ್ವಂಚಕನಾಗಿ ಆವುದಾನೊಂದು ಪದಾರ್ಥವನ್ನು ಸಚ್ಚಿದಾನಂದ ಸ್ವರೂಪವಾದ ಇಷ್ಟಪ್ರಾಣ ಭಾವಕ್ಕೆ ಈಕ್ಷಣ ಜ್ಞಾನಸ್ಪರ್ಶನವನು ರೂಪುರುಚಿ ತೃಪ್ತಿಯಿಂದ ಭೋಗಾಂಗದ ಮನೋಗುಣವಿಕಾರವನು ಬಯಲು ಮಾಡುವಾತನು ಶರಣ ಗುಹೇಶ್ವರಲಿಂಗದಲ್ಲಿ.

೨೬. ಶಿವಸಾದಾಖ್ಯ ಮಹಾಸಾದಾಖ್ಯಂಗಳಿಂದ ದೇಹನೇತ್ರ ಮನೋನೇತ್ರ ಆತ್ಮನೇತ್ರಂಗಳಲ್ಲಿ ನಿರ್ವಂಚಕನಾಗಿ ತನುಮನೋವಾಯು ಪದಾರ್ಥಂಗಳನ್ನು ಆಹವನೀಯಾಗ್ನಿ ದಕ್ಷಿಣಾಗ್ನಿಗಾರ್ಹಪತ್ಯಾಗ್ನಿ ಸ್ವರೂಪವಾದ ಇಷ್ಟಪ್ರಾಣಭಾವಕ್ಕೆ ಈಕ್ಷಣಜ್ಞಾನಸ್ಪರ್ಶನದಿಂದ ಜನನ ಕೋಶ. ಪಾಶಬದ್ಧಾರ್ಪಣದಿಂದ ಯೋಗಾಂಗದ ಅಹಂಮಮತೆ ವಿಕಾರವನ್ನು ಬಯಲು ಮಾಡುವಾತ ಶರಣನು ಗುಹೇಶ್ವರಲಿಂಗದಲ್ಲಿ.

೨೭. ಈ ರೀತಿಯಿಂದ ಮೂರು ದೇಹವನು ಕ್ರಿಯೆಯಿಂದ ಭಕ್ತಿಯಿಂದ ಜ್ಞಾನದಿಂದ ಜಾಗ್ರದಭ್ರಮೆಯನ್ನು ಸ್ವಪ್ನದ ಭಾರವನ್ನು ಸುಷುಪ್ತಿಯ ಅಂಧಕಾರವೆಂಬ ಅವಸ್ಥಾತ್ರಯವನ್ನು ಇಷ್ಟಪ್ರಾಣಭಾವಕ್ಕರ್ಪಿಸುವ ನಿರವಸ್ಥನಾದ ಶರಣನು ಶಿವನಲ್ಲದೆ ಅವಸ್ಥಾತ್ರಯ ಪಾಶಬದ್ಧನು ಶಿವನೆಂದರೆ ನಗುವನು ನಮ್ಮ ಗುಹೇಶ್ವರಲಿಂಗವು.

೨೮. ತನುತ್ರಯವಂ ಲಿಂಗತ್ರಯಕ್ಕರ್ಪಿಸಿ ಪರಮಲಿಂಗವಾಗುವರ ಆರನು ಕಾಣೆ. ಮಲಮಾಯಾಕರ್ಮ ಪಾಶಬದ್ಧರಾಗಿ ದುರಾಚಾರ ದುಷ್ಕರ್ಮಗಳಂ ಬಿಡದೆ ಮಾತಿನಲ್ಲಿ ಬ್ರಹ್ಮವ ನುಡಿವರು ಅನೇಕರುಂಟು. ಮಾತಿನಲ್ಲಿ ಬ್ರಹ್ಮವ ನುಡಿವರು ತಮಗೆ ಚೈತನ್ಯಮೂರ್ತಿಯಾದ ಪರಶಿವನ ಕಾಣಲರಿಯರು. ಅವರಾರೆಂದೊಡೆ— ವಿಷ್ಣು ತಾ ಬ್ರಹ್ಮನೆಂದು ದೇಹವಿಲ್ಲದ ಶಿರಸ್ಸಿಗೆ ಆಹಾರ ಕೊಡಲಾರದೆ ಹೋದನು. ವಿರಿಂಚಿ ತಾನು ಬ್ರಹ್ಮನೆಂದು ಶಿರವ ಹೋಗಲಾಡಿಸಿಕೊಂಡನು. ಇಂದ್ರನು



ತಾನು ಬ್ರಹ್ಮವೆಂದು ಭಗದೇಹಿಯಾದನು. ಮನ್ಮಥನು ತಾನು ಬ್ರಹ್ಮವೆಂದು ಫಾಳಲೋಚನದಗ್ನಿಯಿಂ ಬೆಂದುಹೋದನು. ಸನತ್ಕುಮಾರನು ತಾನು ಬ್ರಹ್ಮವೆಂದು ಒಂಟೆಯಾದನು. ಸಪ್ತಋಷಿಗಳು ತಾವು ಬ್ರಹ್ಮವೆಂದು ಇಂದ್ರನ ಪಲ್ಲಕ್ಕಿಯ ಬೆಸ್ತರಾದರು. ಮನುಮಾಂಧಾತರು ತಾವು ಬ್ರಹ್ಮವೆಂದು ದಕ್ಷಯಜ್ಞದಲ್ಲಿ ಸುರಾಮಾಂಸ ಭಕ್ಷಕರಾದರು. ಚಂದ್ರನು ತಾನು ಬ್ರಹ್ಮವೆಂದು ವೀರಭದ್ರನಂಗುಷ್ಠದಲ್ಲಿ ನುಗ್ಗಾದನು. ಸೂರ್ಯನು ತಾನು ಬ್ರಹ್ಮವೆಂದು ಹಲ್ಲುದೋರಬಡಿಸಿಕೊಂಡನು. ಅಗ್ನಿಯು ತಾನು ಬ್ರಹ್ಮನೆಂದು ನಾಲಗೆಯ ಕೊಯಿಸಿಕೊಂಡನು. ಸರಸ್ವತಿಯು ತಾನು ಬ್ರಹ್ಮವೆಂದು ಮೂಕೊರತೆಯಾದಳು. ಲಕ್ಷ್ಮಿಯು ತಾ ಬ್ರಹ್ಮವೆಂದು ಧನಿಕರ ಮನೆಯ ದಾಸಿಯಾದಳು. ಶಾಂಭವಿಯು ತಾ ಬ್ರಹ್ಮವೆಂದು ಶಿವನವಾಮಾಂಗದಲ್ಲಿ ನಿಂದಳು. ದೇವದಾನವ ಮಾನವರು ತಾವು ಬ್ರಹ್ಮವೆಂದು ಭವಾಂಬುಧಿಯಲ್ಲಿ ಮುಳುಗಿ ತೇಲುತ್ತಾ ತಡೆಯ ಕಾಣರು. ಹೀನಮಾನವರು ತಾವು ಬ್ರಹ್ಮವೆಂದು ಜಿಹ್ವಾಗುಹ್ಯ ಲಂಪಟತ್ವದಲ್ಲಿ ಹೊಂದಿದುದ ನೋಡಿ ನಗುತ್ತಿದ್ದ ನಮ್ಮ ಗುಹೇಶ್ವರ ಲಿಂಗವು.

೨೯. ಈ ವಾಗ್ಬ್ರಹ್ಮಿಗಳೆಲ್ಲರೂ ಪಡುವ ಪಾಡ ನೋಡಿ ನಮ್ಮ ಭಕ್ತರು ತ್ಯಾಗಾಂಗದಲ್ಲಿ ಇಷ್ಟ ಪ್ರಾಣಭಾವಕ್ಕೆ ಬಾಹ್ಯಪದಾರ್ಥರೂಪವಂ ಈಕ್ಷಣ ಜ್ಞಾನಸ್ಪರ್ಶನದಿಂದರ್ಪಿಸಿ ದೇಹಪ್ರಸಾದಿಗಳಾಗಿ ಚರಶೇಷದಲ್ಲಿ ಇಷ್ಟಲಿಂಗ ಪೂಜಕರಾಗಿ ಅನಿಷ್ಟವ ಪರಿಹರಿಸಿದರು. ಭೋಗಾಂಗದಲ್ಲಿ ಇಷ್ಟಪ್ರಾಣಭಾವಕ್ಕೆ ದೇಹಪದಾರ್ಥರೂಪವ ರೂಪು ರುಚಿ ತೃಪ್ತಿಯಿಂದರ್ಪಿಸಿ ಪ್ರಾಣ ಪ್ರಸಾದಿಗಳಾಗಿ ಲಿಂಗಶೇಷದಲ್ಲಿ ಸುರೂಪವಾದಂಗಪ್ರಾಣ ಲಿಂಗನೈಷ್ಠರಾಗಿ, ವಾಯುಗುಣವಿಕಾರವ ಕೆಡಿಸಿದರು. ಯೋಗಾಂಗದಲ್ಲಿಷ್ಟಪ್ರಾಣಭಾವಕ್ಕೆ ವಾಯುಪದಾರ್ಥರೂಪವ ಸ್ಥೂಲ ಸೂಕ್ಷ್ಮಕಾರಣದಿಂದರ್ಪಿಸಿ, ಮಹಾಪ್ರಸಾದಿಗಳಾಗಿ ಗುರುಶೇಷದಲ್ಲಿ ಮನೋಗುಣವಿಕಾರವ ಪರಿಹರಿಸಿದರು ಗುಹೇಶ್ವರಲಿಂಗದಲ್ಲಿ.

೩೦. ಸಪ್ರಾಕಾರವಾದ ಸುವರ್ಣ ತಾರಕಮಧ್ಯದಲ್ಲಿ ಗುಹ್ಯ ಸ್ವರೂಪವಾದ ಅಂಗಮಯ ಜ್ಯೋತಿಯನು ಕಮಲದಳಾಕಾರವಾದ

ಹಿರಣ್ಯತಾರಕವ ಕವಚಲಾಗಿ ಅಂಗಮಯ ಜ್ಯೋತಿಯೊಂದು ಧವಳ ಕುಂಭ ಮಧ್ಯದ ನೀಲವರ್ಣ ತಾರಕಯುಗಳ ಮಧ್ಯದಲ್ಲಿ ಎರಡು ಕುಂಭಮಯ ಹಸ್ತ ಪರಂಜ್ಯೋತಿಗಳಾಗಿ ಬೆಳಗಲಿಕೆ ಆ ಹಸ್ತಮಯ ಪರಂಜ್ಯೋತಿಗಳನು ಧವಳವರ್ಣ ತಾರಕವು ಮುಚ್ಚಿತು. ಆ ತ್ರಿಕೋಣ ಮಧ್ಯದಲ್ಲಿ ಮಾಣಿಕ್ಯವರ್ಣವಾದ ಚಿದಾಕಾಶ ತಾರಕವು. ಆ ತಾರಕ ಮಧ್ಯದಲ್ಲಿ ಪಂಚಮುಖದಿಂದೊಪ್ಪಿದ ಸಮರಸವಿಮಲ ಪರಂಜ್ಯೋತಿಯನು ಹರಿತವರ್ಣ ತಾರಕವು ಮುಚ್ಚಿತ್ತಾಗಿ ಈ ರೀತಿಯಾಗಿ ಷಡುತಾರಕ ತ್ರಿಲಿಂಗಸಂಗವು ಲಿಂಗಾಂಗಸಮರಸವಾದ ಶಾಂಭವಯೋಗವು ಗುಹೇಶ್ವರಲಿಂಗಕ್ಕಲ್ಲದೆ ಇತರರಿಗಸಾಧ್ಯವು.

೩೧. ಮಾನಸಪೂಜಕರು ಮಣ್ಣಾದರು. ನಿಟಿಲಭ್ರೂಮಧ್ಯಧ್ಯಾನಿಗಳು ನೀರಾದರು. ನಾದವೇ ಬ್ರಹ್ಮವೆಂಬವರೆಲ್ಲರೂ ವಾದಿಗಳಾದರು. ಕಣ್ಣಮುಚ್ಚಿ ಧ್ಯಾನವ ಮಾಡುವರೆಲ್ಲರೂ ಶಿವದ್ರೋಹಿಗಳಾದರು. ಸಿರಿಮುಡಿಮೌನಿಗಳೆಲ್ಲ ಕಿಚ್ಚುಪಾಲಾದರು. ವಾಯುಧಾರಣ ಮಾಡುವರೆಲ್ಲ ಪ್ರಳಯಕ್ಕೊಳಗಾದರು. ಬಯಲು ಬ್ರಹ್ಮವೆಂಬುವರೆಲ್ಲ ಭ್ರಮಿತರಾದರು. ಆತ್ಮನೇ ಬ್ರಹ್ಮವೆಂಬುವರೆಲ್ಲ ಅಡವಿಯಂ ಪೊಕ್ಕರು. ಪಶುಪತರೆಲ್ಲ ಭವಾಂಬುಧಿಯಲ್ಲಿ ಬಿದ್ದರು. ಅನಾದಿಪ್ರಮಥಗಣೇಂದ್ರರಾದ ಶರಣರಿಗಲ್ಲದೆ ಷಡುತಾರಕ ತ್ರಿಲಿಂಗಸ್ವರೂಪವಾದ ಶಾಂಭವ ಮುದ್ರೆಯು ಇತರರಿಗಸಾಧ್ಯವು ಗುಹೇಶ್ವರಲಿಂಗದಲ್ಲಿ.

೩೨. ಕೆಲವರು ಇದು ಶಾಂಭವಂ ಅದು ಶಾಂಭವಂ ಎಂಬರು. ಶಾಂಭವ ಮುದ್ರೆಯ ಕೀಲನರಿಯದೆ ಶಾಂಭವ ಮುದ್ರೆಯೆನಲು ಗುರುಶಿಷ್ಯಸಂಬಂಧ. ಶಾಂಭವ ಮುದ್ರೆಯೆನಲು ನಿರಾಳನಿಲಯ. ಶಾಂಭವ ಮುದ್ರೆಯೆನಲು ಶರಣಸತಿ ಲಿಂಗಪತಿ ನ್ಯಾಯವು. ಶಾಂಭವ ಮುದ್ರೆಯೆನಲು ವಾಙ್ಮನಕ್ಕೆ ಅಗೋಚರ. ಶಾಂಭವಿ ಮುದ್ರೆ ಎನಲು ಲಿಂಗಾಂಗ ಸಮರಸವು. ಶಾಂಭವ ಮುದ್ರೆಯೆನಲು ಮನು, ಮುನಿ, ಅಜ, ಹರಿ, ಇಂದ್ರ, ಸುರಾಸುರರಿಗಸಾಧ್ಯವು. ಶಾಂಭವಮುದ್ರೆ ನಿಜಗುರು ಶಾಂತೇಶ್ವರನಿಗಲ್ಲದೆ ಇತರರಿಗಸಾಧ್ಯ ಗುಹೇಶ್ವರಾ.

೩೩. ಬಿಳಿಯ ಮುಗಿಲಿನ ಕರಿಯ ನಕ್ಷತ್ರ ಮಧ್ಯದಲ್ಲಿ ಉರಿಯಂಕುರ ಹುಟ್ಟಿ ಒಂದೆರಡೆಂಬಂತೆ ಉರಿಯುತ್ತಿದೆ. ಹೊಸ್ತಲಲ್ಲಿಯ ಜ್ಯೋತಿ



ಯಂತೆ ಒಳಹೊರಗೆ ಬೆಳಗುತ್ತಿದೆ. ಅದು ನೋಡಿದರೆ ಘನ. ನೋಡದಿರ್ದರೆ ಸಹಜ. ಈ ಭೇದವ ಗುಹೇಶ್ವರಲಿಂಗದಲ್ಲಿ ಚನ್ನಬಸವಣ್ಣ ಬಲ್ಲ.

## ಪರವಸ್ತು ಸ್ವರೂಪ ನಿರ್ಣಯ.

೩೪. ವಾಚಾತೀತಂ ಮನೋತೀತಂ ಭಾವಾತೀತಂಪರಾತ್ಪರಂ॥
ಜ್ಞಾನಾತೀತಂ ನಿರಂಜನಂ ಕಲಾ ಸೂಕ್ಷ್ಮಂ ನ ಭಾವಯೇತ್ ॥

ಜ್ವಲತ್ಕಾಲಾನಲಾಭಾಸಾ ತಟಿತ್ಕೋಟಿ ಸಮಪ್ರಭಾ॥ ತಸ್ಯೋರ್ಧ್ವೆಂ
ಚ ಶಿಖಾಸೂಕ್ಷ್ಮಾಚಿದ್ರೂಪಾ ಪರಮಾಕಲಾ ॥

ನೀಲತೊಯದ ಮಧ್ಯಸ್ಥಾ ವಿದ್ಯುಲ್ಲೇಖೆವ ಭಾಸ್ವರಾ ॥ ನೀವಾರ
ಶೂಕವತ್ತನ್ವೀ ಪೀತಾಭಾಸ್ವತ್ಯಣೂಪಮಾ ॥

ಟೀಕು— ಆ ಪರಶಿವಬ್ರಹ್ಮವು ವಾಚ್ಯಕ್ಕೆ ನುಡಿಯಬಾರದಿರ್ದಂಥ, ಮನಸ್ಸಿಗೆ ನೆನೆಯಬಾರದಿರ್ದಂಥ, ಭಾವಕ್ಕೆ ಭಾವಿಸಬಾರದಿರ್ದಂಥ, ಜ್ಞಾನಕ್ಕೆ ಸಿಲುಕದಿರ್ದಂಥ, ನಿರಂಜನವಾಗಿ, ಅತಿಸೂಕ್ಷ್ಮ ಕಳೆಯಾಗಿ ಉರಿಯುತ್ತಿರುವ ಕಾಲಾಗ್ನಿ ಪ್ರಕಾಶವಾಗಿ, ಕೋಟಿ ಮಿಂಚುಗಳ ಪ್ರಭೆಗೆ ಸರಿಯಾಗಿ, ದೀಪದ ತುದಿಯ ಶಿಖೆಯ ಹಾಗೆ ಸೂಕ್ಷ್ಮವಾಗಿ, ದರ್ಪಣದ ಪ್ರತಿಬಿಂಬದ ಹಾಗೆ ಅಖಿಳ ಪ್ರಕಾಶಕ್ಕೆ ನಿಲುಕಬಾರದಂಥ ಸುಖದಾಯಕವಾದ ಶುದ್ಧ ಪರಮಕಳೆಯಾಗಿ ಕಾಣಲ್ಪಡುವುದು ಶಿವಯೋಗಿಗಳ್ಗೆ. ಅದು ಎಲ್ಲಿ ಎಂದೊಡೆ, ನೀಲಮಣಿ ಮಧ್ಯಸ್ಥಾನದಲ್ಲಿ ಕಾರಮೇಘದೊಳಗಣ ಮಿಂಚಿನ ಪ್ರಕಾಶವಾಗಿ ಆಕಾಶ ಸ್ವರೂಪವಾಗಿ ವಾಲಾಗ್ರಸ್ವರೂಪವಾಗಿ ಪೀತವರ್ಣವಾಗಿ ನಕ್ಷತ್ರದ ಹಾಗೆ ಚಂದ್ರಸೂರ್ಯರ ಬಿಂಬ ಪ್ರಕಾಶವಾಗಿ ತೃಣಧಾನ್ಯದ ಮುಳ್ಳಿನ ಹಾಗೆ ಕಾಣಲ್ಪಡುವುದು ಆತ್ಮಯೋಗಿಗಳ್ಗೆ. ಲಿಂಗ ಧ್ಯಾನಿಗಳ್ಗೆ ಗೋಮುಖ ವರ್ತುಳಗೋಳಕ ಸ್ವರೂಪವಾಗಿ ಕಾಣಲ್ಪಡುವುದು ಗುಹೇಶ್ವರಾ.

ಶಂಭುಸಂಬಂಧಯುಕ್ತಾ ತು । ಶಾಂಭವೀ ಪರಿಕೀರ್ತಿತಾ ।
ಆಕಾಶಗುಣಯುಕ್ತಾ ತು । ಖೇಚರೀ ದ್ವಿವಿಧಾ ಭವೇತ್ ॥
ಖೇಚರೀಶಾಂಭವೀ ಮುದ್ರಾ ಜ್ಞಾನಮುದ್ರಾ ಪ್ರಕೀರ್ತಿತಾ ॥

೩೫. ಈ ಎರಡರಲ್ಲಿ ಆಕಾಶಗುಣದೊಡನೆ ಕೂಡಿದ ಖೇಚರೀಮುದ್ರೆಯಲಕ್ಷಣವನ್ನು ಹೇಳುವೆನು. ನಿರಾಕಾರವಾದ ಗುಣರಹಿತಾಕಾಶವನು, ವಿಸ್ಫುರದ್ಘಾಘತಮೋ ರೂಪವಾದ ಪರಾಕಾಶವನು, ಕಾಲಾನಲಸಮವಾದ ಮಹದಾಕಾಶವನು, ಅಪರಿಮಿತದ್ಯುತಿಭರಿತವಾದ ತತ್ವಾಕಾಶವನು, ರವಿಶತಕೋಟಿ ಪ್ರಕಾಶವಾದ ಸೂರ್ಯಾಕಾಶವನು ಇವೈದಾಕಾಶವ ನೋಡುವಾತನು ಆಕಾಶ ಸ್ವರೂಪವಹನು. ಈ ಪಂಚಾಕಾಶವನು ಸಾಧಿಸುವ ಕ್ರಮವೇತೆಂದೊಡೆ – ಕಾಲಾನಲಪ್ರಕಾಶವಾದ ಮಹದಾಕಾಶ ಬಾಹ್ಯಲಕ್ಷ್ಯವೆಂಬ ನಾಸಾಗ್ರವು ವಿಸ್ಫುರದ್ಘಾಘತಮೋರೂಪವಾದ ಪರಾಕಾಶವೇ ಆ ನಾಸಾಗ್ರಲಕ್ಷ್ಯದ ದೃಷ್ಟಿ. ರವಿಶತಕೋಟಿ ಪ್ರಕಾಶವಾದ ಸೂರ್ಯಾಕಾಶವೇ ಅಂತರ್ಲಕ್ಷ್ಯವೆಂಬ ಕಮಲ ನೀಲವರ್ಣಜ್ಯೋತಿ. ಅಪರಿಮಿತದ್ಯುತಿಭರಿತವಾದ ತತ್ವಾಕಾಶವೇ ಅಂತರ್ಲಕ್ಷ್ಯದಲ್ಲಿ ಮನೋಲಯವಾದ ಜೀವಪರಮೈಕ್ಯವು. ನಿರಾಕಾರವಾದ ಗುಣರಹಿತಾಕಾಶವೇ ತ್ರಿಕೂಟಮಧ್ಯದಲ್ಲಿ ನಿಂದು ವಾಯುಗುಣವಿಕಾರ ಮನೋಗುಣವಿಕಾರ ನಿವೃತ್ತಿಯಾದವು. ತನ್ನನರಿದು ಶಿವನನರಿಯನು ಗುಹೇಶ್ವರಾ.

ಅಗ್ನಿಮಧ್ಯೇ ರವಿಸ್ಥಾನಂ । ರವಿಮಧ್ಯೇ ಚಂದ್ರಮಾಃ ।
ತನ್ಮಧ್ಯೇ ಶಂಕರಂವೃಕ್ಷಂ । ಹೃದಯಂ ದಿವ್ಯಮಾನಸಂ ॥
ಹೃದಯಾಂತರ್ಬಹಿರ್ವ್ಯಾಪ್ತೋಮಧ್ಯೇಸ್ಥಿತಸ್ವರೂಪಕಂ ।
ಆತ್ಮಾಹಂಮತಿರಪ್ಯೇವ ತಾರಕಬ್ರಹ್ಮಲಕ್ಷಣಂ ॥

೩೬. 'ಮುಖದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ' ಎಂಬ ಶ್ರುತಿ ಪ್ರಮಾಣದಿಂದ ಮುಖದಲ್ಲಿ ಅಗ್ನಿ ಹುಟ್ಟಿತ್ತಾಗಿ ಮುಖವೆಂದರೂ ಅಗ್ನಿಯೆಂದರೂ ಒಂದೇ. ಚಕ್ಷೋಸ್ಸೂರ್ಯೋ ಅಜಾಯತ ಯೆಂಬ ಶ್ರುತಿ ಸಾಕ್ಷಿಯಾಗಿ ನೇತ್ರದಲ್ಲಿ ಸೂರ್ಯ ಹುಟ್ಟಿದನಾಗಿ ನೇತ್ರವೆಂದರೂ ಸೂರ್ಯನೆಂದರೂ ಒಂದೇ. 'ಚಂದ್ರಮಾ ಮನಸೋಜಾತಃ' ಎಂಬ ಶ್ರುತಿ ಸಾಕ್ಷಿಯಾಗಿ ಮನದಲ್ಲಿ ಚಂದ್ರ ಹುಟ್ಟಿದನಾಗಿ ಚಂದ್ರನೆಂದರೂ ಮನವೆಂದರೂ ಒಂದೇ. 'ತನ್ಮಧ್ಯೇ ಶಂಕರಂ ವೃಕ್ಷಂ ಹೃದಯಂ ದಿವ್ಯಮಾನಸಂ' ಎಂಬ ಶ್ರುತಿ ಸಾಕ್ಷಿಯಾಗಿ ಆ ಪ್ರಾಣಲಿಂಗ ಮಧ್ಯದಲ್ಲಿ ತಾನೇ ಬ್ರಹ್ಮವೆಂದು ಮನಸ್ಸು ಪ್ರಕಾಶವಾಗಿ ಬೆಳಗುವದು. 'ಮಧ್ಯಸ್ಥಿತಸ್ವರೂಪಕಂ'



ಎಂಬ ಶ್ರುತಿ ಸಾಕ್ಷಿಯಾಗಿ ಆ ತ್ರಿಕೋಣ ಮಧ್ಯದಲ್ಲಿ ಆತ್ಮನಿರುವನು. 'ಆತ್ಮಾಹುಮತಿರಪ್ಯೇವ ತಾರಕ ಬ್ರಹ್ಮಲಕ್ಷಣಂ' ಎಂಬ ಶ್ರುತಿ ಸಾಕ್ಷಿಯಾಗಿ ಆ ತ್ರಿಕೋಣ ಮಧ್ಯದಲ್ಲಿ ಆತ್ಮ ತಾನೇ ಬ್ರಹ್ಮವೆಂದು ವಾಯುಗುಣ ವಿಕಾರ ಮನೋಗುಣ ವಿಕಾರವನಂಟದೆ ತನಗೆ ಚೈತನ್ಯವಾದ ಪರಶಿವನನರಿಯದೆ ಇರ್ದ ಕಾರಣ ತಾರಕ ಬ್ರಹ್ಮ ಲಕ್ಷಣ ಗುಹೇಶ್ವರಾ.

೩೭. ಮುಖ ಮಧ್ಯದಲ್ಲಿ ನೇತ್ರ, ನೇತ್ರ ಮಧ್ಯದಲ್ಲಿ ಮನಸ್ಸು, ಮನೋಮಧ್ಯದಲ್ಲಿ ತಾನೇ ತಾನಲ್ಲದೆ ಮತ್ತೊಂದು ಸಾಧಕವಿಲ್ಲದಂಥಾದ್ದು ತಾರಕಬ್ರಹ್ಮವು ಗುಹೇಶ್ವರಾ.

---

## ವೃತ್ತ.

ಶ್ರೀ ಪಾಲ್ಕುರ್ಕಿಯ ಸೋಮಣಾರ್ಯರೊಲವಿಂ ಸಂಗಾಹ್ವಯಂಗೈದ ಹೃ। ತ್ತಾಪಂ ಭಗ್ನಮದಾಗೆ ಬೋಧಿಸಿದ ಸದ್ವಾಕ್ಯಂಗಳಂ ನೋಡಿಚಿ। ದ್ದೀಪಂ ಶ್ರೀಗುರುಮೂರ್ತಿ ಪೇಳ್ದನಖಿಲಗಂ ಸಾಧಕರ್ಗೀಪ್ಸಿತ। ವ್ಯಾಪಾರೋಚಿತಮಾದ ಶಾಂಭವಿಯನಾಜ್ಯೋತಿರ್ಮಯೋಪೇತಮಂ॥

೧ ಬೆಳಗಿನ : 3

೨ ಪಿಂಡ, ಚಿದ್ಬಿಂದು : ೪ - ೫ - (ಪ್ರಕೃತಿ ಪಿಂಡ ...)
ಪಿಂಡ : ಶರಣ - ಪಿಂಡ ...

3 ವಚನ - (ಜ್ಞಾನಬ್ರಹ್ಮ) : ...
೭ (... - Jesus)

೪ ಶರಣ : ೭ (ಶರಣನ ಶರೀರ = ಮಾಂಸ ...)

೫ ಸಂಸ್ಥಲ = (= ಚಿದ್ಬಿಂದು) ೭

೬ ಪ್ರಾಣಲಿಂಗದಲ್ಲಿ ಆನೇ ಪ್ರತ್ಯಕ್ಷವಾದ
ಮನಸ್ಸು ಪ್ರಕಾಶವಾಗಿ ಬೆಳಗುವುದು - ೫೦

೭ ಸಂಸಾರ ಸ್ವರೂಪ: ೩೬ - ೪೭

೮ ಶಿಂಬೆಯ ಮುದ್ರೆ: ೪೮

೯ ಪರವಸ್ತು ಸ್ವರೂಪ ಸಾಕ್ಷಾತ್ಕಾರ ೪೯

ಇದನ್ನು ವಿಜಾಪುರದಲ್ಲಿ

ರಾ. ಬ. ಪಿ. ಜಿ. ಹಳಕಟ್ಟಿ ಬಿ. ಏ, ಎಲ್. ಎಲ್. ಬಿ. ಇವರು

ತಮ್ಮ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.

ಮತ್ತು ಅವರು ವಿಜಾಪುರದಲ್ಲಿ

ಉಪಲಿಬುರುಜದ ಹತ್ತರ ೧೬೭೦ (ಅ) ನೇ ಮನೆಯಲ್ಲಿ

ಪ್ರಕಟಿಸಿದರು.

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಶಿವಬಸವ ನಗರ
ಬೆಳಗಾವಿ ೧೦
ರುದ್ರಾಕ್ಷಿಮಠ

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಅರಿವೇ ಗುರು
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦
ನಾಗನೂರ ಶ್ರೀ ರುದ್ರಾಕ್ಷಿಮಠ